# ಕರ್ಣವೃತ್ತಾಂತಕಥೆ

ಮ. ಆ. ರಾಮಾನುಜಯ್ಯಂಗಾರ್ಯರಿಂದ

ಉಪೋದ್ಘಾತ ಕವಿಚರಿತ್ರ ಟಿಪ್ಪಣಸಹಿತ

ಎರಡನೆಯ ಛಾಪೆ—೪೦೦ ಪ್ರತಿಗಳು.

ಮೈಸೂರು:
ಶ್ರೀನಿವಾಸ ಮುದ್ರಣಶಾಲೆಯಲ್ಲಿ ಮುದ್ರಿತವಾಗಿ
ಕರ್ಣಾಟಕ ಕಾವ್ಯಕಲಾನಿಧಿ ಮ್ಯಾನೇಜರವರಿಂದ
ಪ್ರಕಟಿಸಲ್ಪಟ್ಟಿದೆ.

1917

(*All rights Reserned by the Publisher*)

ಕ್ರಯ. **8**. ಆಣೆಗಳು]

UNIVERSAL LIBRARY
OU_200549
UNIVERSAL LIBRARY

# ಪೀಠಿಕೆ.

ಈ ಗ್ರಂಥವನ್ನು ನಮಗೆ ದೊರೆತ ಅಸಮಗ್ರವಾದ ಒಂದೇ ಪ್ರತಿಯ ಆಧಾರದಿಂದ ಮುದ್ರಿಸಿದ್ದೇವೆ. ಕಥೆಯು ನಿಂತಿರುವ ಕಡೆಯನ್ನು ನೋಡಿದರೆ ಕವಿಯು ಇನ್ನು ನಾಲ್ಕು ಸಂಧಿಗಳಲ್ಲಿ ಗ್ರಂಥವನ್ನು ಮುಗಿಸಿರಬಹುದೆಂದು ತೋರುತ್ತದೆ.

# ಕವಿಚರಿತ್ರೆ.

ಈ “ಕರ್ಣವೃತ್ತಾಂತಕಥೆ” ಎಂಬ ಸಾಂಗತ್ಯಗ್ರಂಥವನ್ನು ರಚಿಸಿದವನು ಮೈಸೂರು ಸಂಸ್ಥಾನದ ಪ್ರಧಾನಿ ತಿರುಮಲಾರ್ಯನು.

ಮೈಸೂರು ಸಂಸ್ಥಾನದ ಪ್ರಾಚೀನಚರಿತ್ರೆಯಲ್ಲಿ ತಿರುಮಲಾರ್ಯನೆಂಬ ಹೆಸರಿನಿಂದ ಮೂರುಜನ ಪ್ರಸಿದ್ಧರಾಗಿದ್ದರು. ಅವರಲ್ಲಿ ರಾಜಒಡೆಯರವರಿಗೆ ಗುರುವಾಗಿದ್ದವರು ಒಬ್ಬರು, ಚಿಕದೇವಮಹಾರಾಜರಿಗೆ ಮಂತ್ರಿಯಾಗಿದ್ದವರೊಬ್ಬರು, ಶ್ರೀರಂಗಪಟ್ಟಣದ ಯುದ್ಧಗಳಲ್ಲಿ ಮೈಸೂರು ರಾಜರ ಪರವಾಗಿ ಇಂಗ್ಲೀಷರವರ ಕಡೆ ರಾಯಭಾರಿಯಾಗಿದ್ದವರೊಬ್ಬರು. ಈ ಮೂವರಲ್ಲಿ ಈ ಗ್ರಂಥಕರ್ತರು ಯಾರಾಗಿರಬಹುದೆಂಬುದನ್ನು ವಿಚಾರಿಸೋಣ :—

ಚಿಕದೇವಮಹಾರಾಜರಿಗೆ ಮಂತ್ರಿಯಾಗಿದ್ದ ತಿರುಮಲಾರ್ಯರಿಗೆ ಅಯ್ಯಂಗಾರ್ ಅಥವಾ ತಿರುಮಲೈಯಂಗಾರ್ ಎಂಬ ಹೆಸರೇ ಪ್ರಸಿದ್ಧವಾಗಿದ್ದಿತು. ಇವರಿಗೆ ಪ್ರಧಾನಿ ತಿರುಮಲೈಯಂಗಾರ್ ಎಂಬ ಹೆಸರಿದ್ದಂತೆಯೂ ಇವರು ಪ್ರಧಾನಿಯ ಕೆಲಸಗಳನ್ನು ಮಾಡುತ್ತಿದ್ದಂತೆಯೂ ಎಲ್ಲಿಯೂ ಹೇಳಿಲ್ಲ. ತಾವು ತಮ್ಮ ಗ್ರಂಥಗಳಲ್ಲಿ ಹೇಳಿಕೊಂಡಿಲ್ಲ. ಆದ್ದರಿಂದ ಇವರು ಈಗ್ರಂಥಕ್ಕೆ ಕರ್ತೃವಲ್ಲ.

ರಾಯಭಾರಿ ತಿರುಮಲಾರ್ಯರು ಈ ಗ್ರಂಥವನ್ನು ರಚಿಸಿದವರಲ್ಲವೆಂದು ಖಂಡಿತವಾಗಿ ಹೇಳಬಹುದು. ಇವರಿಗೆ ತಿರುಮಲರಾವ್ ಎಂಬ ಹೆಸರೇ ಪ್ರಸಿದ್ಧವಾಗಿದ್ದಿತು. ಇವರು ತಮ್ಮ ಕಾಲವನ್ನೆಲ್ಲಾ ರಾಜಕೀಯ ಕಾರ್ಯದಲ್ಲಿಯೇ ಕಳೆದರು. ಇವರಿಗೆ ಗ್ರಂಥಗಳನ್ನು ರಚಿಸುವಷ್ಟು ವಿದ್ವತ್ತಿರಲಿಲ್ಲವೆಂದು ತಿಳಿಯಬರುತ್ತದೆ. ಇವರ ಚರಿತ್ರೆಯ ವಿಷಯವಾಗಿ ಹುಟ್ಟಿದ ‘ತಿರುಮಲಾರ್ಯವಿಜಯ’ವೆಂಬ ಚಂಪೂಗ್ರಂಥದಲ್ಲಿ ಇವರಿಗೆ ಸಂಸ್ಕೃತದಲ್ಲಾಗಲಿ, ಕನ್ನಡದಲ್ಲಾಗಲಿ ಗ್ರಂಥರಚನೆ ಮಾಡುವಷ್ಟು ಪಾಂಡಿತ್ಯವಿದ್ದಿತೆಂದು ಸೂಚಿಸಿಯೂ ಇಲ್ಲ.

ಆದ್ದರಿಂದ ರಾಜಒಡೆಯರವರಿಗೆ ಗುರುಗಳಾಗಿದ್ದ ತಿರುಮಲಾರ್ಯರೇ ಈ ಗ್ರಂಥವನ್ನು ರಚಿಸಿರಬೇಕು. ಮತ್ತು ಈ ಕರ್ಣಸಾಂಗತ್ಯದ ಶೈಲಿಗೂ ಮಂತ್ರಿ ತಿರುಮಲೈಯಂಗಾರ್ಯರ “ ಚಿಕದೇವರಾಜವಿಜಯ ” “ ಚಿಕದೇವರಾಜವಂಶಾವಳಿ ” ಮುಂತಾದ ಗ್ರಂಥಗಳ ಶೈಲಿಗೂ ಅನೇಕವಾಗಿ ವ್ಯತ್ಯಾಸಗಳು ಕಂಡು ಬರುತ್ತವೆ. ಮಂತ್ರಿ ತಿರುಮಲೈಯಂಗಾರ್ಯರು ತಮ್ಮ ಗ್ರಂಥಗಳಲ್ಲಿ ಚಿಕದೇವರಾಯನ ಹೆಸರನ್ನು ಎಲ್ಲಿಯಾದರೂ ಎತ್ತದೆ ಇರುವುದಿಲ್ಲ. ಈ ಗ್ರಂಥದಲ್ಲಿ ಯಾವ ರಾಜನ ಹೆಸರನ್ನೂ ಸೂಚಿಸಿಲ್ಲ. ಇದೂ ಅಲ್ಲದೆ ಈ ಗ್ರಂಥದ ಶೈಲಿಯು ಮಂತ್ರಿ ತಿರುಮಲೈಯಂಗಾರ್ಯರ ಶೈಲಿಗಿಂತ ಪ್ರಾಚೀನಪದ್ಧತಿಯನ್ನು ಅನುಸರಿಸಿ ಇದೆ ಶ್ರೀವೈಷ್ಣವ ಮತಸಿದ್ಧಾಂತಪ್ರಕ್ರಿಯೆಯನ್ನು ಈಗ್ರಂಥದ ಪೀಠಿಕಾಸಂಧಿಯಲ್ಲಿ ತಿಳಿಸುವ ಕ್ರಮವನ್ನು ನೋಡಿಯೇ ಮಂತ್ರಿ ತಿರುಮಲೈಯಂಗಾರ್ಯರು ತಮ್ಮ ಗ್ರಂಥಗಳ ಪೀಠಿಕೆಗಳನ್ನು ಬರೆದಿರಬಹುದೆಂದು ತೋರುತ್ತದೆ.

ಈ ಕಾರಣಗಳಿಂದ ಈ ಗ್ರಂಥವನ್ನು ರಚಿಸಿದವರು ರಾಜಒಡೆಯರವರಿಗೆ ಗುರುಗಳಾಗಿದ್ದ ಪ್ರಧಾನಿ ತಿರುಮಲಾರ್ಯರೆಂದೇ ನಿಶ್ಚಯಿಸಬೇಕು.

ಮೈಸೂರು ರಾಜರುಗಳ ಚರಿತ್ರವನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿರುವ ಮ|| ರಾ|| ಎಡ್ವೋಕೇಟ್ ಎಂ. ಎ. ಶ್ರೀನಿವಾಸಾಚಾರ್ಯರು ಈ ನಮ್ಮ ಅಭಿಪ್ರಾಯವನ್ನು ಅನುಮೋದಿಸಿದ್ದೂ ಅಲ್ಲದೆ, ಈ ಗ್ರಂಥಕರ್ತರ ವಿಚಾರವಾಗಿ ತಮಗೆ ತಿಳಿದಿದ್ದ ಹೆಚ್ಚಾದ ಅಂಶಗಳನ್ನು ಕೆಳಗೆ ಕಂಡ ರೀತಿಯಲ್ಲಿ ಬರೆದು ಕಳುಹಿಸಿರುತ್ತಾರೆ. ಇದಕ್ಕಾಗಿ ಅವರಿಗೆ ನಾವು ಬಹಳ ಕೃತಜ್ಞರಾಗಿರುತ್ತೇವೆ.

“ ಈ ಗ್ರಂಥಕರ್ತರಾದ ಪ್ರಧಾನಿ ತಿರುಮಲಾರ್ಯರು ಶ್ರೀಮದ್ರಾಮಾನುಜಾಚಾರ್ಯರ ಕಾಲದಲ್ಲಿ ನಿರ್ಣೀತರಾದ ಎಪ್ಪತ್ತುನಾಲ್ಕು ಆಚಾರ್ಯಪುರುಷರುಗಳಲ್ಲಿ ಒಬ್ಬರಾದ ಅನಂತಾರ್ಯರ ವಂಶೋತ್ಪನ್ನರು. ಇವರ ಪೂರ್ವಿಕರುಗಳು ವಿಜಯನಗರವನ್ನು ಆಳಿದ ಯಾದವ ತುಳುವ ಕುಲಗಳ ರಾಜರುಗಳಿಗೂ, ಮೈಸೂರು ದೊರೆಗಳ ಪೂರ್ವಿಕರಾದ ಕರ್ಣಾಟದೇಶದ ಯಾದವರಾಜರುಗಳಿಗೂ ಗುರುಗಳಾಗಿದ್ದು ಅವರುಗಳಿಂದ ವೃತ್ತಿಕ್ಷೇತ್ರಾದಿಗಳನ್ನು ಪಡೆದು ಸುಖದಿಂದಿರುತ್ತಲಿದ್ದರು. ಆ ರಾಜರುಗಳ ಕಾಲಾನಂತರ ಆ ವೃತ್ತಿಕ್ಷೇತ್ರಾದಿಗಳೆಲ್ಲವೂ ಹೋಗಿ, ವಿಜಯನಗರದ ಕೃಷ್ಣರಾಯರು ಕ್ರಿ.ಶ. ೧೫೧೬ ರಲ್ಲಿ ಕೊಟ್ಟಿದ್ದ ಮಂಡ್ಯ ಮೊದಲಾದ ಐದು ಗ್ರಾಮಗಳು ಮತ್ತೆ ಕೆಲವು ಗ್ರಾಮಗಳು ಮಾತ್ರ ಉಳಿದಿದ್ದುವು. ಈ ತಿರುಮಲಾ

ರ್ಯರು ಈ ಗ್ರಾಮದಲ್ಲಿ ತಮಗೆ ಸಲ್ಲುತಲಿದ್ದ ಆದಾಯವನ್ನು ಅವಲಂಬಿಸಿಕೊಂಡು ೧೭ ನೆಯ ಶತಮಾನದ ಆದಿಭಾಗದಲ್ಲಿ ಮೇಲುಕೋಟೆಯೆಂಬ ಕ್ಷೇತ್ರದಲ್ಲಿ ವಾಸವಾಗಿದ್ದರು. ಆ ಕ್ಷೇತ್ರಕ್ಕೆ ನಾರಾಯಣಸ್ವಾಮಿಯ ದರ್ಶನಕ್ಕಾಗಿ ಆಗಾಗ್ಗೆ ಬರುತ್ತಲಿದ್ದ ಮೈಸೂರು ರಾಜಒಡೆಯರವರು ಇವರನ್ನು ವಿಶ್ವಾಸಪೂರ್ವಕವಾಗಿ ಕಾಣುತಲಿದ್ದರು. ಈ ತಿರುಮಲಾರ್ಯರ ಸಂಧಾನದ ಮೇಲೆಯೇ ವಿಜಯನಗರದ ವೆಂಕಟಪತಿರಾಯರು ಶ್ರೀರಂಗಪಟ್ಟಣದ ಸೀಮೆಯನ್ನು ರಾಜಒಡೆಯರವರಿಗೆ ಬಹುಮಾನವಾಗಿ ಕೊಟ್ಟಿರುವರು. ಆಗ ರಾಜಒಡೆಯರವರು ಮೇಲುಕೋಟೆಗೆ ಬಂದು ಈ ತಿರುಮಲಾರ್ಯರ ಬಾಂಧವಶಿಷ್ಯಾದಿಗಳಿಗೆ ತೆಂಗಿನಭಾಗದ ಅಗ್ರಹಾರದ ೧೮ ವೃತ್ತಿ, ಮುತ್ತೇಗೆರೆ ಅಗ್ರಹಾರದ ೫೦ ವೃತ್ತಿ, ಹಾದನೂರು ಅಗ್ರಹಾರದ ೬೦ ವೃತ್ತಿ, ಬಟ್ಟು ೧೦೨೪ ವರಹ ಉತ್ಪತ್ತಿಯಾಗುವ ೧೨೮ ವೃತ್ತಿಗಳನ್ನೂ ಇತರ ಕೆಲವು ಭೂಮಿಗಳನ್ನೂ ಸರ್ವಮಾನ್ಯವಾಗಿ ದಯೆಪಾಲಿಸಿದರು. † ಕಲ್ಯಾಣಿಯತೀರದಲ್ಲಿ ಭೂದಾನಮಾಡಿದನಂತರ ರಾಜಒಡೆಯರವರು ಈ ತಿರುಮಲಾರ್ಯರನ್ನು ಕುರಿತು—"ನೀವು ಶ್ರೀರಂಗಪಟ್ಟಣದಲ್ಲಿ ನಿಂತು ನಮಗೆ ಹಿತೋಪದೇಶವನ್ನು ಮಾಡುತ್ತಲಿರಬೇಕು" ಎಂದು ಕೇಳಿಕೊಂಡರು. ಅದಕ್ಕೆ ತಿರುಮಲಾರ್ಯರು—"ನಾವು ನಿಮ್ಮ ಶ್ರೇಯಃಪ್ರಾರ್ಥನೆಯನ್ನು ಮಾಡುತ್ತ ಇಲ್ಲಿಯೇ ಇರುತ್ತೇವೆ. ನಮ್ಮ ಪೂರ್ವಿಕರ ಶಿಷ್ಯರುಗಳಾಗಿದ್ದ ರಾಜರುಗಳೆಲ್ಲರೂ ಸ್ವರ್ಗಲೋಕಕ್ಕೆ ಹೋದರು. ನಾವು ಯಾವುದಾದರೂ ಒಂದು ಪುಣ್ಯಸ್ಥಳದಲ್ಲಿ ಭಾಷ್ಯಾದಿ ಗ್ರಂಥಗಳನ್ನು ಸೇವಿಸುತ್ತ ದೇಹಯಾತ್ರೆಯನ್ನು ಮಾಡುವೆವು. ನೀವು ಬೇರೆ ಗುರುಗಳನ್ನು ಆಶ್ರಯಿಸಿರುವಿರಿ. ಅವರೊಡನೆ ನೀವು ಸುಖವಾಗಿ ಧರ್ಮದಿಂದ ರಾಜ್ಯಪರಿಪಾಲನೆ ಮಾಡುತ್ತಲಿರಿ" ಎಂದು ಹೇಳಲು; ಅದಕ್ಕೆ ರಾಜಒಡೆಯರು—"ನಮಗೆ ಬೇರೆ ಗುರುಗಳೊಬ್ಬರಿದ್ದರೆ ಬಾಧಕವೇನು ? ಶ್ರೀರಾಮದೇವರಿಗೆ ವಸಿಷ್ಠರೇ ಮೊದಲಾದ ಗುರುಗಳನೇಕರಿರಲಿಲ್ಲವೆ? ಶ್ರೀಕೃಷ್ಣದೇವರಿಗೆ ಸಾಂದೀ

---

† ಈ ಮೂರು ಅಗ್ರಹಾರಗಳಲ್ಲಿ ಮುತ್ತೇಗೆರೆ ಗ್ರಾಮದ ೧೬೧೪ ನೆಯ ಇಸವಿಯ ತಾಮ್ರಶಾಸನವು ಮೆ|| ರೈಸ್ ಸಾಹೇಬರ ಶಾಸನಪುಸ್ತಕದ ಶ್ರೀರಂಗಪಟ್ಟಣದ ತಾಲ್ಲೋಕಿನ ೧೫೭ ನೆಯ ಸಂಖ್ಯೆಯಲ್ಲಿ ಪ್ರಕಟವಾಗಿರುತ್ತದೆ.

ಷನೇ ಮೊದಲಾದ ಗುರುಗಳಿರಲಿಲ್ಲವೆ ? ಅದೇ ರೀತಿಯಲ್ಲಿ ಪಾಂಡವರಿಗೆ ದ್ರೋಣಾಚಾರ್ಯರೇ ಮೊದಲಾದ ಗುರುಗಳಿರಲಿಲ್ಲವೆ? ವಿಶೇಷ ಹೇಳತಕ್ಕದೇನಿದೆ ; ಶ್ರೀಮದ್ರಾಮಾನುಜಾಚಾರ್ಯರಿಗೆ ಐದು ಆಚಾರ್ಯರುಗಳಿರಲಿಲ್ಲವೆ ? ಆದಕಾರಣ ತಮಗೆ ನಡೆಯತಕ್ಕ ಮರ್ಯಾದೆಗಳಿಗೆ ಯಾವ ಕೊರತೆಯೂ ಇರುವುದಿಲ್ಲ" ಎಂದು ಬಹಳವಾಗಿ ಹೇಳಿ, ಅವರನ್ನು ಶ್ರೀರಂಗಪಟ್ಟಣಕ್ಕೆ ಕರೆದುಕೊಂಡು ಬಂದು, ತಮ್ಮ ಪ್ರಧಾನಿತನಕ್ಕೆ ಇಟ್ಟುಕೊಂಡರು. ಅದುಮೊದಲು ಈ ತಿರುಮಲಾರ್ಯರು ಮೈಸೂರು ದೊರೆಗಳ ಆಶ್ರಿತರಾಗಿದ್ದು ಮೊದಲನೆಯ ಕಂಠೀರವ ನರಸರಾಜಒಡೆಯರವರ ಆಳ್ವಿಕೆಯ ಮಧ್ಯಕಾಲದಲ್ಲಿ ಪರಲೋಕವನ್ನೈದಿದರು.

“ ಚಿಕ್ಕದೇವರಾಯನ ಮಂತ್ರಿಯಾಗಿದ್ದ ತಿರುಮಲೈಯಂಗಾರ್ಯನು ಇವರ ಮಗನ ಮಗಳ ಮಗನು. ಮಹಾಮಾತುಶ್ರೀ ಲಕ್ಷ್ಮಮ್ಮಣ್ಣಿಯವರ ರಾಯಭಾರಿಗಳಾಗಿದ್ದ ತಿರುಮಲರಾವ್ ನಾರಾಯಣರಾವ್ ಎಂಬ ಸಹೋದರರು ಇವರ ಮಗನಾದ ಅಪ್ಪಾಜಪ್ಪನ ವಂಶ್ಯರಾಗಿದ್ದಾರೆ. ಕರ್ನಲ್ ವಿಲ್ಕ್ಸ್ ಸಾಹೇಬರಿಗೆ ಸಿಕ್ಕಿದ ವಂಶಾವಳಿಯಲ್ಲಿಯೂ ಈ ಸಹೋದರರು ಪ್ರಧಾನಿ ತಿರುಮಲಾರ್ಯನ ಸಂತತಿಯವರೆಂದು ಬರೆದು ಇದೆ.”

## ಗ್ರಂಥವಿಚಾರ.

ಈ ಗ್ರಂಥವು ಸಾಂಗತ್ಯವೃತ್ತದಲ್ಲಿ ಬರೆಯಲ್ಪಟ್ಟಿದೆ. ಈ ವೃತ್ತದಲ್ಲಿ 17ನೆಯ ಶತಮಾನದಲ್ಲಿ ಅನೇಕ ಪ್ರಬಲ ಗ್ರಂಥಗಳು ಹುಟ್ಟಿವೆ. ಕುಮಾರರಾಮಕಥೆ, ಭರತೇಶ್ವರಚರಿತೆ ಮುಂತಾದ ಗ್ರಂಥಗಳು ಯಾವ ಉತ್ತಮ ಚಂಪೂಗ್ರಂಥಗಳಿಗೂ ಕಡಮೆಯಾಗಿಲ್ಲ. ಈ ಗ್ರಂಥದ ಬಂಧವು ಪ್ರೌಢವಾಗಿಯೂ, ರಮ್ಯವಾಗಿಯೂ, ಇದೆ. ಇದರಲ್ಲಿ ಹೇಳಿರುವ ವಿಷಯಗಳು ಮಹಾಭಾರತದ ಶಾಂತಿಪರ್ವದ ಮೊದಲು 12 ಅಧ್ಯಾಯಗಳ ಬಹುರಮಣೀಯವಾದ ಪದ್ಯಪದ್ಯವಾಗಿ ಮಾಡಿದ ಪದ್ಯಾನುವಾದವಾಗಿದೆ.

ಸಾಂಗತ್ಯ ವೃತ್ತವನ್ನು ಸಂಗತಿ ಎಂದೂ, ಕರೆಯುವುದುಂಟು. ಇದನ್ನು ಎರಡುಮೂರುತೆರದಲ್ಲಿ ಹಾಡುತ್ತಾರೆ 1 ಮತ್ತು 3 ನೆಯ ಪಾದದಲ್ಲಿ ನಾಲ್ಕು ತಾಳಗಳೂ 2 ಮತ್ತು 4 ನೆಯ ಪಾದಗಳಲ್ಲಿ ಮೂರುತಾಳಗಳೂ ಬರುವಹಾಗೆ ಹಾಡಬೇಕು. ಈ ವೃತ್ತದ ಗಣಗಳು ಮಾತ್ರಾಗಣಗಳೇ ಆಗಿರುವುವು.

ಮಂ. ಆ. ರಾ. ಪ್ರವರ್ತಕ.

ಮೈಸೂರು ಸಂಸ್ಥಾನದ

ಪ್ರಧಾನಿ ತಿರುಮಲಾರ್ಯಕವಿ ವಿರಚಿತ

# ಕರ್ಣವೃತ್ತಾಂತ ಕಥೆ

## ಸಾಂಗತ್ಯವೃತ್ತ

ಶ್ರೀಶನು ಸಕಲ [ಕಲ್ಯಾಣ] ಗುಣಾಮೃತ | ರಾಶಿ ಚರಾಚರಶೇಷಿ ||
ಈಶಾದಿಸುರವಂದಿತಾಂಘ್ರಿ ಪಕ್ಷಿತುರಂ | ಗೇಶನೆನ್ನನು ಸಲಹಿದನು || ೧

ಸಿರಿರಾಣಿಯರಸನ ಚಿದಚಿದಧೀಶನ | ಪರಮಯೋಗೀಂದ್ರವಂದಿತನ ||
ನಿರುಪಾಧಿಸದ್ಗುಣನಿಧಿಯ ನಿರ್ಮಲನ ಶ್ರೀ | ಚರಣಂಗಳೆ ಶರಣೆನಗೆ || ೨

ವೀರನ ವಿಭವೋದಾರನ ವಿಜ್ಞಾನ | ಸಾರನ ಸರ್ವಕಾರಣನ ||
ಭೂರಿತೇಜನ ಭುವನೈಕಧಾರನ | ನಾರಾಯಣನ ನಾ ನಂಬಿದೆನು || ೩

ಶರಣಾಗತಜನವತ್ಸಲನಾಪನ್ನ | ಪರಿಪಾಲನ ತತ್ಪರನ ||
ಪರಿಪೂರ್ಣಕಾಮನ ಭಕ್ತಮಂದಾರನ | ಸಿರಿಯಡಿಗಳನೆ ಸೇರುವೆನು || ೪

ನಿರುಪಮ ನಿತ್ಯ ನಿಸ್ಸೀಮ ನಿರಾತಂಕ | ಪುರುಷೋತ್ತಮ ಪುಣ್ಯಚರಿತ ||
ಕರುಣಾಬ್ಧಿ ಕಾಮಿತಫಲದಾಯಕ ಸರ | ಸಿರುಹಾಂಬಕ ಸಲಹೆನ್ನ || ೫

ಆದಿಮಧ್ಯಾನ್ತರಹಿತ ಪರತತ್ವನಿ | ಜೋದರಧೃತಸರ್ವಲೋಕ ||
ವೇದವೇದಾಂತವೇದ್ಯ ವಿಶ್ವಾತ್ಮಕ ನಿನ್ನ ಶ್ರೀ | ಪಾದಸೇವೆಯ ಪಾಲಿಸೆನಗೆ || ೬

ಯೋಗಿಗಳೆರ್ದೆವನೆಯೊಳು ತೊಳಗುವ ಜೋತಿ | ಲೋಗರೆಲ್ಲರ ಪೊರೆವರಸು ||
ಆಗಮಸೀಮೆಯೊಳಸುವೆತ್ತಪುರುಳೆಮ್ಮ | ಭಾಗಕ್ಕೆ ಬಂದುದಂದಂದೆ || ೭

ಜಳಧಿಸುತೆಯ ಮೆಯ್ಯಪೊಗರ ಕುಂದಣದೊಂದು | ಕಳೆಯೊಳೆಸೆವನೀಲಮಣಿಯ ||
ಪೞನುಡಿವೆಂಡಿರ ತೊಂಡಲನೆನ್ನೆದೆ | ವಳಿಕುಭರಣೆಯೊಳಿಡುವೆನು || ೮

ಪೞಿಜೋಗಿಗಳ ಸಂಕಲ್ಪಕಲ್ಪದ್ರುಮ | ದೊಳು ಮೆಯ್ದೋಱುವಂಬಣ್ಣ ||
ಬೞಲಿಬಾಯರ್ದ ಭವಾದ್ಯರುಣ್ಬಮದುರ್ಕ | ವಳವ ಬಯಸಿಬಾಯಿಡುವೆನು || ೯

ಸಿಸುವಾಗಿ ತಾನಾಲದೆಲೆಯೊಳೊಱಗಿ ತನ್ನ | ಬಸಿಱೊಳೀರೇೞು ಲೋಕಗಳ ||
ಪಸರವ ಕೋೞ್ ಬಲ್ಲರ ಬಗೆಗೊಳಿಸುವ | ಪೊಸಬಿಜ್ಜೆವಳಗೆಱಗುವೆನು || ೧೦

ಪಿಡಿದೆತ್ತಿನುಂಗಿ ಪೊಡೆಯಿಟ್ಟು ಬಾಯ್ದೆಱೆದುಗು | ಳ್ದಡಿಗಳಿಂದಳೆದಡಿಗಡಿಗೆ ||
ಅಡಿಸಿದೆಡರುಗಳನಡಗಿಸಿ ಜಗವನಾ | ಳ್ದೊಡೆಯನಿಗಾನೆಱಗುವೆನು || ೧೧
ಬಿಡದೆ ಕಾಡುವ ಬಮ್ಮೇತಿಯ ಬಿಡಿಸಿ ನ | ಲ್ನುಡಿಗಳನಱಿಸಿ ತಂದಿತ್ತು ||
ಮೃಡಪರಮೇಷ್ಠಿಗಳನು ಸಲಹಿದ ಹರಿ | ಯಡಿಯಾಳುತನವ ಪಡೆವೆನು || ೧೨
ಆವನ ಸಿರಿಯಡಿದೊಳೆದು ಪೂಜುವನಜ | ನಾವಿಮಳಾಂಬುಧಾರೆಯನು ||
ಭಾವಿಸಿ ಮುಡಿಯೊಳಾಂತಿಹನು ಮಹಾ | ದೇವನಾವಿಷ್ಣುಗಾನೆಱಗುವೆನು || ೧೩
ಮುಂದುಗಾಣದೆ ವರಗಳನಿತ್ತುವೋಸವ | ನೊಂದಿ ಸಂಕಟಗೊಳುವವರ ||
ಕಂದುಗಾಣಿಸದೆ ಕಾಪಿಡುವ ಮಾಧವನಿಗೆ | ವಂದನೆಗೆಯ್ದು ಬಾೞುವೆನು || ೧೪
ಕ್ಷರವೆಂಬ ಭೂತವಕ್ಷರವೆಂಬ ಜೀವವೀ | ಯೆರಡು ಪುರುಷವೆನಿಸುವುವು ||
ಪುರುಷರಿವರನೆಲ್ಲರನಿೞಿಗೆಯ್ದ ಶ್ರೀ | ಪುರುಷೋತ್ತಮನ ಪೂಜುವೆನು || ೧೫
ತತ್ವವ ತಿಳಿಯೆ ರಾಜಸತಾಮಸಮಿಶ್ರ | ಸತ್ವಗಳಿಗೆ ಮೈಗೊಡದೆ ||
ಸತ್ವೈಕಾಶ್ರಯನೆನಿಪ ಹರಿಯ ಸೇರಿ | ಸಾತ್ವಿಕರೊಡನಾಡುವೆನು || ೧೬
ಆದಿಮೂಲವ ಕರೆವಾನೆಯ ನುಡಿಗೇಳಿ | ಕೈದೆಗೆದುೞಿಯೆ ಸಕಲರು ||
ಸಾದರದೊಳು ಬಂದು ಸಂತೈಸಿದ ಜಗ | ದಾದಿಕಾರಣಗೆಱಗುವೆನು || ೧೭
ಅಣುಮಹದಂತರಾತ್ಮಕನಚ್ಯುತನೆಂ | ದಣುಗನ್ನೆಯನೊಳಾಡಿದೊಡನೆ ||
ಮಣಿಗಂಭದೊಳು ಮೈದೋಱಿದ ಪರಿಪೂರ್ಣ | ಗುಣನಿಧಿಗಾನೆಱಗುವೆನು || ೧೮
ಆರಯ್ಯೆ ಮೆಯ್ಯೊಳಜಾಂಡಮಂಡಲಗಳು | ಹಾರಗಳಂತೆ ಕಣ್ಗೊಳಿಸೆ ||
ತೇರೊಳು ವಿಶ್ವರೂಪವ ತೋಱಿದ ಪಾರ್ಥ | ಸಾರಥಿಗಾನೆಱಗುವೆನು || ೧೯
ಸಿರಿರಾಣಿಗೈಸಿರಿ ಬಿದಿಗೆ ನಲ್ಬಿದಿಯೀ | ಸರರಿಗೆ ಕಾನೀಸರನು ||
ಪರರಿಗೆ ಪರನಾತ್ಮರಿಗಾತ್ಮನೆನಿಸಿದ | ಪರಮಪುರುಷಗೆಱಗುವೆನು || ೨೦
ಆಲದೆಲೆಯೊಳಿಂಗಡಲ ದೀವಿಯೊಳಂಶು | ಮಾಲಿಮಂಡಲದ ಮಧ್ಯದೊಳು ||
ಶ್ರೀಲಲನೆಯ ಸೇರುವೆಯೊಳಾಮ್ನಾಯ | ಮಾಲಿಯೊಳಿಹುದೆಮ್ಮಪುರುಳು || ೨೧
ಪೊಡವಿಯಾಗಸಗಳನಳೆದ ಶೌರಿಯ ಮೆ | ಲ್ಲಡಿಯ ಮುಡಿಯೊಳಾಸದರು||
ತಡೆಯದೆ ಮೂಜಗವನು ಧರಿಸಿಹ ಸಿರಿ | ಪೊಡೆಯೊಳು ಪುಗದರುವೊಳರೆ || ೨೨
ತರತರದಿಂದೆಮ್ಮಕುಲದ ತಾಯ್ತಂದೆ ಸೋ | ದರನೊಡನಾಡಿ ತೆತ್ತಿಗನು ||
ದೊರೆ ದಾತನು ಪುಗಲೆಡೆ ಪುರುಳೊಡವೆಯ್ಯೆ | ಸಿರಿಯು ಸಿರಿಯ ಬಲ್ಲಹನೆ|| ೨೩
ಚಳನವಿಲ್ಲದ ಮಿಂಚುಬಳ್ಳಿಯನೊಳಗೊಂಡ | ಕಳೆವೆತ್ತ ಕಾರ್ಮುಗಿಲಂತೆ ||
ಜಳನಿಧಿಸುತೆಯ ಸೇರುವೆಯಿಂದೊಪ್ಪುವ | ನಳಿನಾಕ್ಷಗೆ ನಮಿಸುವೆನು || ೨೪
ಇಂಗಡಲೆಡೆಯೊಳು ಕಂಗೊಳಿಸುವುದೊಂದು | ತುಂಗನೀಲದ ದೀವಿಯಂತೆ ||
ರಂಗುವಡೆದ ಫಣಿರಾಜನೊಳೊಱಗಿಹ | ರಂಗಧಾಮನಿಗೆಱಗುವೆನು || ೨೫

ಬಾಲಾತಪದಿಂದ ಬಣ್ಣಿಗೆವಡೆದಿಂದ್ರ । ನೀಲಾದ್ರಿಯನಿೞಿಗೆಯ್ವ ||
ನೀಲನೀರದನಿಭಕಾಯಗೆ ಕಾಂಚನ | ಚೇಲನಿಗಾನೆಱಗುವೆನು || ೨೬
ಕನಕಾಚಲದೆಡಬಲದೊಳೆಸೆವ ಚಂದ್ರ | ದಿನಕರಬಿಂಬಗಳಂತೆ |
ಮನಗೊಳಿಸುವ ಮಕುಟದ ಶಂಖಚಕ್ರದ | ವನಮಾಲಿಗೆ ವಂದಿಪೆನು || ೨೭
ಸರಸಿಜಭವಶಿವಸನಕಾದಿಗಳ ಭಾವಸ | ರಸಿಯ ಮಧ್ಯದೊಳೆಸೆವ ||
ಸಿರಿಯಾಣ್ಮನಡಿದಾವರೆಗೆನ್ನ ಬಗೆಯಂಚೆ | ಪರವಶದೊಳು ಪರಿಯುತಿದೆ || ೨೮
ಬಳಸಿದ ಮಣಿದಾಮಬಂಧದ ಬಣ್ಣಿಗೆ | ವೆಳಗಿನಲೆಸೆವ ದುಗುಲದ ||
ಕಳಿವೆತ್ತ ಹರಿನಾಭಿಸರಸಿಯೊಳೆನ್ನದೆ । ಸುೞಿಗೊಂಡು ಸುತ್ತಿಸೋಲುತಿದೆ || ೨೯
ಒಳಗಿರ್ದ ಮೂಜಗವೊಂದುವೆರಸದಂ | ತಳೆದಿಟ್ಟ ತ್ರಿವಲಿರೇಖೆಗಳ ||
ತೆಳುವಸಿಱೊಳು ಬೆಳೆದಲದಾರ್ವರೆಯ ತ | ಣ್ಣೆಲರೊಳೆನ್ನೆರ್ದೆ ನೆಲಸುತಿದೆ || ೩೦
ಪುರುಷೋತ್ತಮನ ಪೊಡೆಯ ಪೂವಿನ ಕಂಪು | ತರುಣತುಳಸಿಯೊಳುಗಂಪು ||
ಸಿರಿಮೆಯ್ಯ ಕನಿಗಂಪೆನ್ನೆರ್ದೆದುಂಬಿಯ । ಭರದೊಳು ಬದ್ದಿಗೊಳುತಿದೆ || ೩೧
ಬಾನೊಳು ತೊಳಗುವ ಪೊಸನೇಸಱೆಗುಪ | ಮಾನವೆನಿಸಿ ದೆಸೆವಡೆದ ||
ಶ್ರೀನಾರಾಯಣನೆದೆಯ ಕೌಸ್ತುಭಮಣಿ | ಗಾನು ವಂದನೆಗೆಯ್ದಪೆನು || ೩೨
ಎಳದೊಳಚಿಯ ದಂಡೆಯೆಡೆಯೊಳು ಸಿರಿಯ ಕೆಂ|ದಳಿರಡಿಯಲತಗೆಗುಱುಹು ||
ಪೊಳೆವ ಕೆಂಬರಲು ಪೊಂದುಗುಲದಿಂದೊಪ್ಪುವ | ನಳಿನಾಕ್ಷನೆರ್ದೆಗೆಳಸುವೆನು ||
ತೊಳಚಿಯ ಪಸುರ್ವೆಳಗು ದುಗುಲದ ಪೊಂ | ಬೆಳಗು ಕೌಸ್ತುಭದ ಕೆಂಬೆಳಗು||
ನಳಿನಾಕ್ಷನೆರ್ದೆಯ ಕರ್ವೆಳಗೆನ್ನ ತಿಳಿವುಬೆ|ಳ್ವೆಳಗಿನೊಳೆಡೆವಿಡದಿರ್ಕೆ || ೩೪
ಪೊಗರುಗುವಿಂದ್ರನೀಲದೊಳು ಸಮೆದ ಪೊಸ | ಬಗೆಯಾಲಾನವೆನಿಸುವ ||
ಜಗಧೀಶನ ನಿಡುದೋಳುಗಂಭದೊಳೆನ್ನ | ಬಗೆಯಾನೆಯ ಬದ್ದಿಪೆನು || ೩೫
ಕರುಣಾಮೃತಾಬ್ಧಿಕಲ್ಲೋಲಗಳಂತೆ | ತರತರದೊಳು ಕವಿತರುವ ||
ಪರಮಪುರುಷದೃಷ್ಟಿಪಾತಂಗಳಿಂದೆನ್ನ | ದುರಿತಧೂಳಿಗಳ ತೊಳೆವೆನು || ೩೬
ಅರೆವೆಱೆಯೆಡೆಗಳವಟ್ಟುತೋಱುವ ಕಱೆ|ಗೆಱೆಯ ಸಿರಿಯ ಕೀಲುಗೆಯ್ವ ||
ಸಿರಿಯರಸನ ಮೊಗಸಿರಿಗಮರಿದ ಕ | ಸ್ತೂರಿಯ ನಾಮವ ಕಾಮಿಸುವೆನು || ೩೭
ಮೊಗದಾವರೆಯ ಮುದ್ದಿಸಲೆಂದಿೞಿತಂದ | ಗಗನಮಣಿಯ ಗಾಡಿವೆತ್ತ ||
ಜಗದೀಶನ ಮಕುಟದ ಪೊಗರಿಂದೆನ್ನ | ಬಗೆಯ ಮುಬ್ಬನು ಮುಗ್ಗಿಪೆನು || ೩೮
ತಳತಳಿಸುವ ಕಣ್ಣ ತಣ್ಪುಗೊಳಿಪ ನೋಟ | ಕಳಿವೆತ್ತ ಕಸ್ತೂರಿಬೊಟ್ಟು ||
ಸುೞಿಗುರುಳೆಸೆಯೆ ಸೊಬಗುವೆತ್ತಮಾಧವ|ನೊಳುಮೊಗವನು ಜಾನಿಪೆನು || ೩೯
ದರವಿಕಸಿತಚಂಪಕನಾಸದ ಕಿವಿ | ವರೆಗೆ ಪರೆದ ಕಣ್ಮಲರ ||
ಸುರುಚಿರಮಕರಕುಂಡಲಗಂಡದ । ಸಿರಿಯರಸನ ಮೊಗಕೆಳಸುವೆನು || ೪೦

ವೊಳೆವ ಪಣೆಯ ಪೊಗರುಗುವ ನುಣ್ಗಲ್ಲದ | ವೊಳೆವ ನಗೆಯ ಮೊನೆವಲ್ಲ ||
ತಳಿರುದುಟಿಯ ತಾವರೆಗಣ್ಣಿನ ಮೊಗ | ಕೆಳಸಿ ಮುಂಬರಿದು ಮುದ್ದಿಪೆನು || ೪೨
ಅಡಿಯ ಕೆಂಪಿಗೆ ನುಣ್ದೊಡೆಯ ಬಿಣ್ಪಿಗೆ ಪೊ | ನ್ನುಡೆಯ ಪೆಂಪಿಗೆ ಪೂದಳೆದ ||
ಪೊಡೆಯ ತಣ್ಪಿಗೆ ಮೊಗದೆಡೆಯ ಸೊಂಪಿಗೆ ಸಿರಿ|ಮುಡಿಯ ಕಂಪಿಗೆ ಮೋಹಿಸುವೆನು ||
ಪಿಡಿದು ಶೌರಿಯ ಮೆಲ್ಲಡಿಯ ತೊಡೆಯೊಳಿ|ರ್ದೊಡನುರದೊಳು ಕವಿದೊಱಗಿ ||
ಬಿಡದೆ ಮೊಗವ ಮುದ್ದಿಸಿ ತಣಿದೆನ್ನೆರ್ದೆ | ಪಡೆವುದು ಪಾರವಶ್ಯವನು || ೪೩
ತಾನಿಲ್ಲದೆಡೆಯೊಳು ತಪ್ಪುಗೆಯ್ವಾತ್ಮರ | ನೇಸೆಸಗುವನೋ ಎಂದಳುಕಿ ||
ಶ್ರೀನಾರಾಯಣನೆದೆಯೊಳು ನೆಲೆಗೊಂಡ | ಮಾನಿನಿ ಮನೆದೇವರೆಮಗೆ || ೪೪
ಪಲಬಗೆ ಲೋಗರ ಪಡೆವ ಪೊರೆವ ಗೆಯ್ಮೆ | ಯುಲಪಿಕೆ ತಲೆದೋಱದನ್ತೆ ||
ಕೆಲದೊಳಿರ್ದಿನಿಯನ ಗೆಲ್ಲಗೊಳಿಪ ಹರಿ | ಲಲನೆಯೆ ಕುಲದೇವರೆಮಗೆ || ೪೫
ಸಡಗರದಿಂದೊಮ್ಮೆ ಶರಣೆಂದ ಜನರಿಗೆ | ಬೆಡಗುಬಿನ್ನಣಬಿಜ್ಜೆಗಳನು ||
ಕುಡಿನೋಟಗಳಿಂದ ಕೊನರಿಪ ಸಿರಿರಾಣಿ | ಮುಡಿಯೊಱಗದ ಸಿಸುವಹೆನು || ೪೬
ಜಡನು ಜಾಣನು ಬಡವನು ಬಲ್ಲಿದನಾ | ಳೊಡೆಯನೆಂಬೀಭೇದಗಳನು ||
ಕುಡುವುರ್ವಿನ ಕುಣಿಹದೊಳೆಸಗುವ ಸಿರಿ|ಮಡದಿಯ ಮಱಿಹೊಕ್ಕಿಹೆನು || ೪೭
ಈತಪ್ಪಿಗಿಂತು ದಂಡಿಪೆನೆಂದು ಹರಿಯೆಮ್ಮ | ಕೈತವದಿಂ ಖತಿವಡೆಯೆ ||
ಧಾತುವಱಿತು ತಣ್ಪುಗೊಳಿಪ ಸಕಲಲೋಕ | ಮಾತೆ ಸಲಹು ಮಕ್ಕಳನು || ೪೮
ಅಂದವೆ ಅಱಿಯದ ಕಂದರೊಳೀಪರಿ | ಕಂದುಗಾಣಿಪುದೆಂದು ಕನಲಿ ||
ಅಂದು ಮುಕುಂದನ ಮನಗರಗಿಸಿ ಪೊರೆವಿಂ | ದಿರೆಗಿಂದು ವಂದಿಪೆನು || ೪೯
ಪರತತ್ತ್ವವಿವನೆಂದು ಪಲವು ವೇದಾನ್ತದ | ನೆರವಿ ನೆಲೆಗಾಣ್ಬುದ ಕೊನೆ ||
ಗೊರೆದುದಾವಳ ಪಾದದಲತಿಗೆಗುಱುಹಾ | ಪರಮಪಾವನೆಗೆಱಗುವೆನು || ೫೦

ಇಂತು ಪೀಠಿಕಾ ಸಂಧಿ

## ೧ ನೆಯ ಸಂಧಿ

ಶ್ರೀವಾಸುದೇವನ ಸಿರಿಮುಡಿಯೊಲವಿಂ | ದೈವರು ಪಾಂಡವರಂದು ||
ಆವೈರಿವೀರರನಾಹವದೊಳು ಗೆಲಿ | ದೀವಸುಮತಿಯೊಳೆಸೆದರು || ೧
ಧೀರರೀಯೈವರು ಧೃತರಾಷ್ಟ್ರನು ಕುರು|ವೀರಸತಿಯರು ವಿದುರನು ||
ಆರಣರಂಗದೊಳಳಿದವರಿಗೆ ಸಂ | ಸ್ಕಾರಕರ್ಮವನೆಸಗಿದರು || ೨

ಅಂಗವ ದಂಡಿಸುತನಿಬರುಮೂವೊಂದು | ತಿಂಗಳ ತೀರಪೆವೆಂದು ||
ಗಂಗೆಯ ತಡಿಯೊಳು ಕರ್ಮವಿಧಿಯ ನಿಯ | ಮಂಗಳ ವ್ಮೈಗೊಳಿಸಿದರು || ೩
ಒಸೆದು ಧರ್ಮಂಗಳೊಂದೊಡಲಾಂತುದೆಂಬಂ|ತೆಸೆವ ಧರ್ಮಜನಿರುವೆಡೆಗೆ ||
ಜಸವಾಂತ ಸಿದ್ಧರು ಜತಿಗಳು ರಿಸಿಗಳು | ದೆಸೆದೆಸೆಯಿಂದೆ ಸೇರಿದರು || ೪
ದೇವಲ ನಾರದ ದೇವಸ್ಥಾನರು | ಪಾವನಕಣ್ವತಾಪಸನು ||
ಆವೇದವ್ಯಾಸನನಿಬರುಮುವರ ಶಿ | ಷ್ಯಾವಳಿಯೊಡನೈದಿದರು || ೫
ಜಾತಿವಿಪ್ರರು ಶಾಸ್ತ್ರಚತುರರು ವೇದತ | ತ್ವಾತಿಶಯಮನರಿತವರು ||
ಸ್ನಾತಕರಾರ್ಯರು ಸಾಧುಸಜ್ಜನರುಮಂ | ದಾತನ ಬಳಿಗೆಯ್ದಿದರು || ೬
ಇವರೈದೆ ಧರ್ಮಜನಿದಿರೆದ್ದು ನೇಮದೊ | ಳವನತಿಗೈದರ್ಚಿಸಿದನು ||
ಇವರು ಬಳಿಕ ರಾಯನಿತ್ತ ಪೀಠಂಗಳ | ಪವಣುವಿಡಿದು ಪತ್ತಿದರು || ೭
ಆರಾಜಪುಂಗವನಂದಿಗೆ ದೊರೆದುಪ | ಚಾರವೆಸಗೆ ಸಂತಸದೊಳು ||
ಆರಿಸಿಗಳು ಬಳಿಕವನ ಬಳಸಿದಂತೆ | ಸೇರುವೆಯೊಳು ಮಂಡಿಸಿದರು || ೮
ಬಳಿಕವರನಿಬರು ಭಾಗೀರಥಿತೀರ | ದೊಳು ದುಃಖಿಸುವ ದೊರೆಮಗನ ||
ಬಳೆದ ಸಂತಾಪವ ಪಲವು ನೀತಿಗಳಿಂ | ದಿಳಿಪುವೆವೆಂದೆಳಸಿದರು || ೯
ಅವರೊಳು ನಾರದನನಿಬರನಾರಯ್ದು | ವರವರನುಮತಿವಿಡಿದು ||
ಅವನೀಶನ ಮನದನುವ ತಿಳಿಪು ಮ | ತ್ತವನಿಗಿಂತೆಂದಱುಹಿದನು || ೧೦
ಭೂವರ ನಿನ್ನಯ ಪುಣ್ಯೋದಯದಿಂ | ದೀವಿಜಯಂಬೀರದಿಂದ ||
ಶ್ರೀವಾಸುದೇವನ ಸಿರಿಯಡಿಯೊಲವಿನಿಂ | ದೀಪಸುಧೆಯ ಗೆಲಿದಿರುವೆ || ೧೧
ಅತಿದಾರುಣಯುದ್ಧದಾರುಬಟೆಯ ದೈವ | ಗತಿಯಿಂದ ನೀವು ಕಳೆದಿರಿ ||
ಅತಿಶಯವೆತ್ತ ಕುಲಾಚಾರದಿಂ ರಾಜ | ತತಿಯೆಣಿಸುತ್ತಮರೆನಿಸಿದಿರಿ || ೧೨
ಏನು ಧರ್ಮಜ ನಿನ್ನಿಷ್ಟ ಕೈಸಾರ್ದುದೆ | ಆನಂದವನುಗೂಡಿಸುದೆ ||
ನೀನೆಂದು ನಂಬಿದ ನೇಹಿಗರನು ದಾನ | ಮಾನಂಗಳಿಂದ ಮನ್ನಿಸುವೈ || ೧೩
ಬಲುವಗೆತನವ ಪಣ್ಣಿದ ಪಾಪಿಗಳ ಸಾಲು | ದಲೆಗಳ ತಱಿದಱಿದೊಟ್ಟೀ ||
ಪಲಬಗೆಸಿರಿಯ ಕೈಬಸಗೈಯ್ದೆ ಶೋಕವ | ತೊಲಗಿಸಿ ಮಿಗೆ ಸೊಗಪಡುವೈ || ೧೪
ಇಂತು ನಾರದಮುನಿಯಿದಿರಿಟ್ಟ ಪಲಬಗೆ | ಸಂತಸವನು ಸಮ್ಮತಿಸದೆ ||
ಸಂತಾಪದಿಂದೆದೆಸರಿದು ಧರ್ಮಜನು ತ | ನ್ನಂತರಂಗವನಱುಹಿದನು || ೧೫
ಸ್ವಾಮಿ ನಿಮ್ಮೆಲ್ಲರ ಸಂಪೂರ್ಣಕೃಪೆಯಿಂದ | ಭೀಮಾರ್ಜುನರ ಬೀರದಿಂದ ||
ಶ್ರೀಮಾಧವನ ನಾವು ಸೇರಿಹ ಬಲುಮೆಯಿಂ | ದೀಮಹಿಯೆಮ್ಮ ಸೇರಿದುದು || ೧೬
ಈಸಂತಸವಿರಲಿನ್ನೊಂದು ಶೋಕಾ | ಯಾಸವೆದೆಯನಾವರಿಪುದು ||
ಹೇಸದೆ ದಾಯಾದಹಿಂಸೆಯನೆಸಗಿ ಮ | ಹಾಸಾಹಸಿಕರಾದೆವಕಟಾ || ೧೭

ಭಾವಿಸೆಲೆಮಗುಳ್ಳ ಪಾಂಚಾಲಿಯ ಸುತ । ರೈವರನಭಿಮನ್ಯುವನು ॥
ಈವಿಧದೊಳು ಬಲಿಯಿತ್ತವೆಮಗೆ ಜಯ । ವಾವುದಿದಪಜಯವೈಸೆ ॥ ೧೮
ಈದಾನವಾಂತಕನತ್ತಣಿಂ ದ್ವಾರಕಿ । ಗೈದೆಯುಲ್ಲಿರುವ ಸುಭದ್ರೆ॥
ಪಾದಕೆಱಗಿ ಪಲಬಗೆಯೊಳು ಪಲುಬುತಿ । ನ್ನೇದಾರಿವಿಡಿದೆಂತಹಳೊ ॥ ೧೯
ಕದನದೊಳೞಿಯೆ ಕಂದರು ತಂದೆ ಸೋದರ । ರದಱ ದುಃಖವನಡಗಿಸುತ ॥
ಪದಸೇವೆಯೆಸಗುವ ಪಾಂಚಾಲಿಯ ಕಂ । ಡೆದೆಯುರಿಯಿಮ್ಮಡಿಸುತಿದೆ ॥ ೨೦
ಇಂತಿರಲೀಶೋಕವಿನ್ನೊಂದಿದಕೆ ಬಲ । ವಂತವಾಗಿಹುದು ಬಣ್ಣಿಪೆನು॥
ಅಂತರಂಗವನೆಮ್ಮೊಳಱುಹದೆಮಱೆಮಾಚಿ । ಕುಂತಿ ಮಗನ ಕೊಲಿಸಿದಳು ॥ ೨೧
ಆವನು ಸಮರದೊಳಪ್ರತಿರಥನು ಮ । ತ್ತಾವನೀರೈದು ಸಾಸಿರದ ॥
ಕಾವಿನಾನೆಗಳ ವಿಡಂಬಿಪ ಬಲವಂತ । ನಾವೀರನೆಮ್ಮಣ್ಣನು ಗಡಾ ॥ ೨೨
ಆವನು ಬೀರದೊಳ್ಮೈವಾಯಸಿಂಗ ಮ । ತ್ತಾವನು ಜಯದಂಕಕಾಱ ॥
ಆವನು ಕಾ ಪಿಡಿದರ್ಥವ ಬಿಡದಿಹ । ನಾವೀರನೆಮ್ಮಣ್ಣನು ಗಡಾ ॥ ೨೩
ಆವನು ಕುರುರಾಯಗಾಧಾರವೆನಿಸಿದ । ನಾವನಿಳೆಯೊಳಭಿಮಾನಿ ॥
ಆವನು ಮೊನೆಗಾಱನಾವನು ಋಜುಗಾಱ । ನಾವೀರನೆಮ್ಮಣ್ಣನು ಗಡಾ ॥ ೨೪
ಆವನು ಕೋಪಿಯಾವನು ಕಲಹಪ್ರಿಯ । ನಾವನು ಬಲುಗೈದುಗಾಱ ॥
ಆವನು ಸಮರದೊಳಱಿಯುಟ್ಟುವನಮ್ಮ । ನಾವೀರನೆಮ್ಮಣ್ಣನು ಗಡಾ ॥ ೨೫
ಆವನು ಪಲಬಣೆಯಾಹವವೆಸಗುವ । ಭಾವನೆಗಳ ಬಲ್ಲವನು ॥
ಆವನು ರಾಯರೊಳದ್ಭುತವಿಕ್ರಮ । ನಾವೀರನೆಮ್ಮಣ್ಣನು ಗಡಾ ॥ ೨೬
ನಾರದಮುನಿ ಇದನಾಲಿಸು ಕುಂತಿ ಮು । ನ್ನಾರಾರುಮಱಿಯದಂದದಲಿ ॥
ಕೋರಿತನದೊಳೀಕುವರನ ಪಡೆದು ಭಾ । ಗೀರಥಿಯೊಳಿಟ್ಟಳು ಗಡಾ ॥ ೨೭
ಅಲಗಿನೊಳೞಿದೆಮ್ಮವರಿಗೆ ಸಲಿಲಾಂ । ಜಲಿಯ ಕುಡುವ ಸಮಯದೊಳು ॥
ಪಲುಬಿ ಪಲುಬಿ ಬಸವೞಿಯುತೀಕುಂತಿಯೀ । ನೆಲೆಯನೆನ್ನೊಳಗಱುಹಿದಳು॥ ೨೮
ಜನರಿವನನು ಸೂತಜಾತನು ರಾಧಾ । ತನಯನೆಂದಾಡುವರೈಸೆ ॥
ಇನನ ಕುಮಾರಕನೀಕುಂತಿಗೆ ಮಗ । ನೆನಗಣ್ಣನೇವೇೞುವೆನು ॥ ೨೯
ಒಡವುಟ್ಟೆಂದು ಮುನ್ನೊಮ್ಮೆಯುಮಱಿಯೆನು ।ಪೊಡವಿಯ ಬಯಸಿಪೊಯ್ಸಿದೆನು॥
ಬಿಡಿಸಿದರಳೆಗಿಟ್ಟ ಬೆಂಕಿಯಂತೀದುಃಖ।ವೊಡಲೆಲ್ಲವನುರಿವುತಿದೆ ॥ ೩೦
ಇವ ತಾಯ ಬೞಿಯಿಂದೆಮ್ಮಣ್ಣನೆಂಬೀ । ವಿವರವ ಭೀಮಾರ್ಜುನರು ॥
ಅವಳಿಮಕ್ಕಳುಮಱಿಯರು ತನ್ನವರೆಂ । ದವನೆಮ್ಮನಱಿತಿಹನು ಗಡಾ ॥ ೩೧
ಅವನು ಬಲ್ಲಿದನವನಿಂದೆಮಗಪಜಯ । ಸವನಿಪುದೆಂದೆದೆಸರಿದು ॥
ಬವರವಡಸಿದಂದು ಪರರಱಿಯದೆ ಕುಂತಿ । ಯವನೆಡೆಗೈದಿದಳು ಗಡಾ ॥ ೩೨

ಎಲೆ ಕರ್ಣ ಕೇಳು ನೀನೆನ್ನ ಪಿರಿಯಮಗ | ನಲಸಿದೀನುಡಿಯನಾದರಿಸು ||
ಚಲವಱಿದನುಜರ ಸಲಹೆಂದು ಕುಂತಿ ತ | ನ್ನೊಲವಿನಿಂದುಸಿರಿದಳು ಗಡಾ || ೩೩
ತಾಯೆ ನೀನೀತಪ್ಪುದಾರಿಯೊಳೆಳೆದೆನ್ನ | ದಾಯಗೆಡಿಪುದಿದು ತರವೆ ||
ಈಯನ್ಯಾಯವನಿಳೆ ಪೊಱದೆಂದು ತ | ನ್ನಾಯವನಱುಹಿದನು ಗಡಾ || ೩೪
ಕಾಮಿತಾರ್ಥವನೀವ ಕೌರವನನು ಸಂ | ಗ್ರಾಮಕಾಲದೊಳು ಕಾದಿರದೆ ||
ಈಮಾತ ಕೇಳಿ ನಾನೆದ್ದು ಬಂದೊಡೆಮಗೆ | ಭೂಮಿ ತಾನೆಂತು ಪೊಱುವುದು || ೩೫
ಸ್ವಾಮಿಗೆರಡುಬಗೆದನು ಸತ್ಯಹೀನನು | ಪಾಮರನತಿಪಾಪಿಯೆಂದು ||
ಭೀಮಾರ್ಜುನರಿಂದ ಭೀತಿವಡೆದನೆಂ | ದೀಮಹಿ ನಿಂದಿಸದಿಹುದೆ || ೩೬
ಕೇಳು ಕುಂತೀದೇವಿ ಕೇಶವಾರ್ಜುನರನು | ಕಾಳೆಗದೊಳು ಕಾದಿ ಗೆಲಿದು ||
ತೋಳ ಬಲ್ಮೆಯನೊಮ್ಮೆ ತೋಱಿ ಧರ್ಮಜನ ಕೈ | ಯಾಳಾಗಿಹೆನೆಂದನು ಗಡಾ || ೩೭
ಕಂದ ಕೇಳೆನ್ನ ಮಕ್ಕಳು ನಾಲ್ವರಿಗೆ ನೀ | ನಿಂದು ನಂಬುಗೆಯನಿತ್ತುಳುಹು ||
ಕುಂದದರ್ಜುನನೊಳು ಕೊಳುಗುಳದಲಿ ಕಾ | ಯೆಂದಿವಳಾಡಿದಳು ಗಡಾ || ೩೮
ಮಾತೆಯ ದೈನ್ಯದ ಮಾಟವನಾರೈದು | ಕಾತುರಗೊಂಡು ಕೈಮುಗಿದು ||
ಮಾತನೊತ್ತರಿಸದೆ ಮರ್ಯಾದೆಯಱಿಯದೆ | ಭೀತಿಯಿಂ ಬಿನ್ನವಿಸಿದನು || ೩೯
ತಾಯೆ ನಾಲ್ವರು ಸೋದರರುಮಾಹವದೊಳು | ಕೈಯೊಳಗಾದೊಡವರ ||
ದಾಯಗೆಡಿಪುದಿಲ್ಲ ತಪ್ಪದೀನುಡಿ ನೀ | ನೀಯೆಡೆಗೆದೆಗರಗದಿರು || ೪೦
ಗಾಂಡೀವಿಯಱಿಯೆ ಕರ್ಣನು ಕರ್ಣನಱಿದೊಡೆ | ಗಾಂಡೀವಿ ಕಣ್ಣ ಮುಂದಿಹನು ||
ಪಾಂಡವರೈವರು ಬಾಳುವರೆಂತುಮ | ಕಾಂಡತಾಂಡವಮೆಸಗದಿರು || ೪೧
ಮಗನೆ ನಿನ್ನಯ ತಮ್ಮಂದಿರೊಳಾವರ | ಸೊಗಬಡಿಸುವೆನೆಂದೆಣಿಸುವೆ ||
ಬಗೆದಂದವರನು ಪಾಲಿಸೆಂದೀಕುಂತಿ | ಮಗುಳ್ದಾಡಿ ಮರಳಿದಳು ಗಡಾ || ೪೨
ಈರಹಸ್ಯಂಗಳನಿವಳಾಗಲಿಯಾ | ಬೀರನಾಗಲಿ ಬಿಚ್ಚಲಿಲ್ಲ ||
ಆರಣದೊಳು ಪಿರಿಯಣ್ಣನೆಂದಱಿಯದೆ | ಕೂರಾಳನು ಕೊಲಿಸಿದೆವು || ೪೩
ತೋಳು ಬಲ್ಲಿತು ಮಿಗೆ ತೋರವೆಂದಣ್ಣನ | ಬಾಳುದಲೆಯ ಹಱಿಸಿದೆವು ||
ಕೇಳುವ ಜನರೆಲ್ಲ ಕಿವಿಯ ಮುಚ್ಚುವರಿದ | ಹೇಳುವ ಜನರು ಹೇಸುವರು || ೪೪
ಒಂದೇ ಬಸಿಱೊಳು ಬಂದೆವಿರ್ವರುಮೆ | ನ್ನಿಂದ ಪಿರಿಯನಿವನೆಂದು ||
ಅಂದಿಂಗೆ ತಿಳಿದವನಲ್ಲ ಕುಂತಿಯ ನುಡಿ | ಯಿಂದಿದನಿಂದು ತಿಳಿದೆನು || ೪೫
ಏಕೋದರಹಿಂಸೆಯಿಂದೆನ್ನ ಮೆಲ್ಲೆದೆ | ಸೋಕವಡೆದು ಸೋಲುತಿದೆ ||
ಈಕರ್ಣಾರ್ಜುನರಿರ್ವರುಮೆನಗಿರೆ | ಪಾಕಶಾಸನನು ಪಾಸಟಿಯೇ || ೪೬
ಕೌರವರಾಜೂಜುಗಳದೊಳು ಗೆಲಿದೆಮ್ಮ | ನಾರೀತಿಯೊಳಂದಗೆಡಿಸೆ ||
ಮೋರೆಯಱಿದು ಮಿಗೆ ಮೀಱುವ ಕೋಪವೀ | ಧೀರನ ಕಂಡು ತಿಳಿವುದು || ೪೭

ಆದಿನದೊಳು ಕರ್ಣನವರಿಗಿಮ್ಮಿಗಲಾಗಿ | ಬೈದೆಮ್ಮ ಬಂಗವಡಿಪನು ||
ಆದೊಡಮವನ ಶ್ರೀಪಾದಂಗಳನು ಕಂ | ಡಾದುಃಖಗಳೆಡಗುವುವು || ೪೮
ಆಕರ್ಣನಡಿಗಳುಮಾಕುಂತಿಯಡಿಗಳು|ಮೇಕರೀತಿಯೊಳೆಸೆದಿಹುವು ||
ಈಕಾರಣಮೇನೆಂದೆಣಿಸಿ ಕಾಣದೆ ಮತ್ತೆ | ಕಾಕತಾಳವ ಕಲ್ಪಿಸುವೆನು ||
ಸಾಹಸಾಂಕನಿಗೆಂತು ತಾಪ ಸಮನಿಸಿತು | ಮಹಾತ್ಮ್ಯಮೆಂತು ಮುಗ್ಗಿದುದು||
ಆಹವದೊಳು ತೇರನವನಿಯೇತಕೆ ನುಂಗಿ | ತೀಹದಗಳನೆಸಗಱುಹು || ೫೦
ತುಂಗಮಹಿಮ ದೋಷದೂರ ನಾರದ ಮುನಿ|ಪುಂಗವ ನಿನಗೆ ಭೂಮಿಯೊಳು
ಅಂಗೈಯ ನೆಲ್ಲಿಕಾಯಂದದೊಳಖಿಲಕಾ | ರ್ಯಂಗಳು ಕಂಗೊಳಿಸುವುವು || ೫೧

ಇಂತು ದ್ವಿತೀಯ ಸಂಧಿ

## ೩ ನೆಯ ಸಂಧಿ

ಅಣ್ಣನ ಕಥೆಗಳನಱುಹೆಂದ ರಾಯನ | ತಣ್ಣನೆ ತಣಿಸುವೆನೆಂದು ||
ಬಣ್ಣಿಗೆಗಾಱಂ ಬಲ್ಲಹನಾಮುನಿ | ಬಣ್ಣಿಸಿ ಬಗೆಗೊಳಿಸಿದನು || ೧
ಅರಸ ಚಿತ್ತವಿಸು ನೀನಾಡಿದ ನುಡಿಯಿದು | ಪುರುಳುಗೊಂಡಿದೆ ಪುಸಿಯಲ್ಲ ||
ಪರಿಕಿಪೊಡೀಕರ್ಣಪಾರ್ಥರ ಸಾಹಸ|ಕರಿದಾವುದಾಜಿರಂಗದೊಳು || ೨
ಆದೊಡೆ ಕೇಳು ನೀನಾದಿವಿಡಿದು ನಿನ್ನ | ಸೋದರನಿರವ ಸೊಲ್ಲಿಪೆನು ||
ಆದೇವತೆಗಳುಮಱಿಯರೀಶಾಪದ | ಭೇದದ ಚಿತ್ರಗಳನು || ೩
ಬಲುಮೆಯ ಮಂತ್ರವನೋದಿಯದಱದೊಂದು | ಫಲವಪೇಕ್ಷಿಪೆನೆಂದು ||
ಜಲದೊಳು ಮಿಂದು ಜಪಿಸಿ ಕುಂತಿ ಸೂರ್ಯನ|ನೊಲಿಸಿ ಪಡೆದಳೊಂದು ಸಿಸುವ ||
ಲೋಲಲೋಚನೆ ಕುಂತಿ ಲೋಕ ಪೞಿವುದೆಂ | ದಾಲೋಚಿಸಿಯಳವೞಿದು ||
ಬಾಲಕ ನೀ ಸೊಗಬಾೞೆಂದು ನೀರೊಳು | ತೇಲಿಸೆ ತಿರುಗಿದಳಂದು || ೫
ವೇದವಿಹಿತಕರ್ಮವಿಧಿಯಿಲ್ಲದೆ ನೀ | ನೇದಾರಿವಿಡಿದಿರ್ಪೆ ಮಗನೆ ||
ಕೈದುವಿಡಿದು ಕಾದಿ ಗತಿವಡೆಯೆಂದಿವ | ಳಾದಿನದೊಳು ಪರಸಿದಳು || ೬
ಗುಣನಿಧಿ ಸೂರ್ಯನ ಕುವರನು ಸೂತನಿ|ಗಣುಗನೆನಿಸಿ ಯಾಪೞಿಕ ||
ಎಣೆಗೂಡಿ ನಿಮ್ಮೊಡನಿವ ದ್ರೋಣನೊಳಂದು | ಕಣೆಯ ಸುಗೆಗಳ ಕಲಿತನು || ೭
ಭೀಮನಬಲ್ಮೆಯ ವಿಜಯನೆಸುಗೆಗಳ | ಭೂಮಿಪಾಲ ನಿನ್ನ ಬುದ್ಧಿಗಳ ||
ಈಮಾದ್ರೀಸುತರಿರ್ವರ ವಿನಯವ | ಕಾಮಿಸಿ ಕಾತರಿಸುವನು || ೮

ಮೊದಲಿಂದ ಫಲ್ಗುಣಮುರಹರರಿರ್ವರೊ | ಳೆದೆಗೊಂಡ ನೇಹದೊಂದಿರವ ||
ಪುದಿದಿಹ ಲೋಗರ ಪೊದ್ದುಗೆಗಳ ಕಂಡು | ಕುದಿದು ಕುದಿದು ಕೂಗುವನು || ೯
ನೆವಮೊಂದುಮಿಲ್ಲದೆ ನಿಮ್ಮೊಳು ವೈರವ | ಸವನಿಸಿ ಸಂಕಟಗೊಳುತ ||
ಅಹನಂದು ನಿಮಗಾಗದವರೊಳು ನೇಹವ | ಪವಣಿಸಿ ಭಂಗವಡುವನು || ೧೦
ಬಿಲುಗಾಱರೊಳೆಲ್ಲ ಪಿರಿಯನರ್ಜುನನೆಂದು | ನೆಲದ ಬೀಗರು ನಿಶ್ಚೈಸೆ ||
ಕಲಕಿದ ಮನದೊಳು ಖತಿಗೊಳುವನು ಮಿಗೆ|ಪಲವ ಚಿಂತಿಸಿ ಬೞಲುವನು || ೧೧
ಈಕರೆಕರೆಯಿಂದಿವನು ಬಿಲ್ಲೋಜನಿ | ಗೇಕಾಂತಸಮಯದೊಳೆಱಗಿ ||
ಜೋಕೆ ತಪ್ಪದೆಯರ್ಜುನನ ವೈರದ ಚಿಂ | ತಾಕುಲತೆಯನಱುಹಿದನು || ೧೨
ಎಲೆ ಗುರುವರ್ಯ ನೀನಿಂದು ಬ್ರಹ್ಮಾಸ್ತ್ರವ | ಕಲಿಸಿಯೆನ್ನನು ಘನವೆನಿಸು ||
ಫಲುಗುಣನಿಗೆ ಸರಿಬಹೆನೆಂದು ನಿನ್ನನು | ಕೆಲಕಾಲದಿಂದೆ ಕಾದಿಹೆನು || ೧೩
ಓದುವ ಮಕ್ಕಳೊಳೋದುಗಲಿಸುವರು | ಭೇದವೆಸಗುವರೆ ಪೇೞು ||
ಆದೊಡೆನ್ನನು ಬ್ರಹ್ಮಾಸ್ತ್ರವಱ್ಪನೆಂ | ಬೀದೂಱ್ಗೆಡೆಯೆನಿಸದಿರು || ೧೪
ಎನೆ ಕೇಳಿ ಗುರು ತನ್ನೆದೆಯೊಳು ಪಾರ್ಥನ | ವಿನಯವಿವೇಕಂಗಳನು ||
ಇನತನಯನ ಪಾಪದೆಣಿಕೆಗಳನು ನೆನೆ | ನೆನೆದು ನುಡಿದನು ನಿಷ್ಠುರವ || ೧೫
ಗರ್ವದಿಂದೆಲೆ ಕರ್ಣ ಗಾಸಿಯಾಗದಿರೀ | ಸರ್ವಾರ್ಹ ನಿನಗೆ ನಿಲುಕದು ||
ಪಾರ್ವರರಸುಮಕ್ಕಳೀರ್ವರಲ್ಲದೆ ಮ | ತ್ತೋರ್ವರೀಯಸ್ತ್ರಜ್ಞರೊಳರೆ || ೧೬
ಆನುಡಿಗೇಳಿಯುಂದಳವೞ್ದೆದೆಯೊಳು | ಜಾನಿಸಿಯಾಚಾರ್ಯನಿಗೆ ||
ಆನತಿಗೈದವನನುಮತಿವಡೆದಾ | ಮಾನಧನನು ಮರಳಿದನು || ೧೭
ಎಳಸಿ ಭಾರ್ಗವರಾಮನಿರುವ ಮಾಹೇನ್ದ್ರ|ಚಲಕ್ಕೈದಿ ಜಾತಿಯ ಮಱೆಸಿ ||
ಬೞಿಕಾನು ಪಾರ್ವನು ಭೃಗುಕುಲಜಾತನೆಂ | ದಳುಕದೆಯಡಿಗೆಱಗಿದನು || ೧೮
ಪ್ರವರಗೋತ್ರಂಗಳ ಸರಿಕಿಸಿ ರಾಮನು | ಮವನ ತನ್ನವನೆಂದೆಣಿಸಿ ||
ಪವಣಿಸಿ ನಿಜಶಿಷ್ಯಭಾವದ ಬೆಸುಗೆಯ | ಸವನಿಸಿದನು ಸಂತಸವ || ೧೯
ಸುರಗಿರಿಗೆಣೆಯೆನೆ ಸೊಗಯಿಪ ಮಾಹೇನ್ದ್ರ | ಗಿರಿಯೊಳು ಗೆಲ್ಲಗೊಂಡಿರುವ ||
ಸುರಸಿದ್ಧಯಕ್ಷಕಿನ್ನರಕಿಂಪುರುಷರ | ನೆರವಿ ನೆರವುಗೊಂಡುದಿವನ || ೨೦
ಇವನು ಶಿಶ್ರೂಷೆಯಿಂದೆದೆಗರಗಿಸಿ ಭಾ | ರ್ಗವನೊಳಸ್ತ್ರವ ಕಲಿತನು ||
ದಿವಿಜಗಂಧರ್ವಾದಿಗಳೊಳು ನೇಹವ |ಪವಣಿಸಿ ಬಣ್ಣವಡೆದನು || ೨೧
ಕಡಲ ತಡಿಯೊಳೀಕರ್ಣನು ಕೈಯೊಳು | ಪಿಡಿದು ಕಡುಗಬಿಲ್ಲುಗಳನು ||
ಒಡಲುಗೊಬ್ಬಿಂದ ತಾನೊರ್ವನೆಯಾಶ್ರಮ | ದೆಡೆಗಳೊಳೆಡೆಯಾಡಿದನು || ೨೨
ಕೈಮೆಗಲಿತೆನೆಂಬ ಗರ್ವದಿಂದವನಿಗೆ | ತಾಮಸ ಗುಣ ತಲೆಗೇಱೆ ||
ಹೋಮವೇಳೆಯೊಳಗ್ನಿಹೋತ್ರಿ ವಿಪ್ರನದೊಂದು | ಕಾಮಧೇನುವನು ಕಡಿದನು ||

2

ಕೈದೀವಿಗೆಗೞಿಯೆ ಕಣ್ದೆಱೆದು ಕರ್ಣನು ಮೋಸ|ವಾದುದೆಂದೊಡನಳವೞಿದು||
ಏದಾರಿಯಿದಕೆಂದೆಣಿಸಿಯಾಪಾರ್ವನ | ಪಾದಕೆಱಗಿ ಬಣ್ಣಿಸಿದನು || ೨೪
ಮುನಿವರ ಕೇಳಿಂದು ಮೋಸದೊಳೀನಿನ್ನ | ಮನೆಯ ಧೇನುವ ಮಡುಹಿದೆನು ||
ಎನಗಿನ್ನು ಗತಿ ಬೇಱಿಲ್ಲ ನೀನೇ ನಿನ್ನ | ಮನವೊಲಿದೆನ್ನ ಮನ್ನಿಪುದು || ೨೫
ಕೇಳಿಯಾವಿಪ್ರನು ಕಿಡಿಗೆದಱುವ ಕಲ್ಪ | ಕಾಲಾನಲನಂತೆ ಕನಲಿ ||
ತಾಳಲರಿಯದ ಸಂತಾಪದಿಂ ಕರ್ಣಗೆ | ಬೀಱುಸಾಪವ ಬೀಱಿದನು || ೨೬
ಎಲೆ ಕ್ರೂರ ಕುಟಿಲ ಕುಹಕ ಖೂಳ ಕುತ್ಸಿತ | ಕುಲಹೀನ ಪಸುಗೊಲೆಗಾಱ||
ಪಲವು ಮಾತೇನೀಪಾಪದಿಂದೊದವಿದ | ಫಲವ ಬೆಂಬಿಡದನುಭವಿಸು || ೨೭
ಕುಳವೈರಿಯೊಳು ನೀನು ಕೊಳುಗುಳವೆಸಗುವ | ಕಳದೊಳು ತೇರಗಾಲಿಗಳು||
ಎೞಿದೊಡಮೆಡಬಲಕೇಱದವೊಲು ಧರೆ | ಗೞಿದು ನಿನ್ನಿರವ ಕೆಡಿಸುಗೆ || ೨೮
ನೆಲ ನುಂಗಿದ ತೇರ ನೆಗಹಲೆಳಸಿ ಬಿಲ್ಲ | ಕೆಲಕಿಡೆ ಕೇಣದ ಭಟನು ||
ಕುಲಿಲಿಯೆಂದಾಲುತ ಕುಬಿಬಿರಿಯುತ ನಿನ್ನ | ತಲೆಯನು ತಱಿದು ಬಿಸುಡಲಿ ||
ಬಸವೞಿದಗ್ನಿಯ ಭಜಿಪ ವೇಳೆಯೊಳೆನ್ನ | ಪಸುವ ಮಡುಹಿದ ಭಾವದೊಳು ||
ಅಸಮಯದೊಳು ನಿನಗಾಗದವನು ತಲೆ | ಬೆಸುಗೆಯ ಬಿಡಿಸಿ ಬಿಸುಡಲಿ || ೩೦
ಒಡನೆ ಕರ್ಣನು ಶಾಪಹುಱುಬಿನೊಳಿದೆಗೆ | ಟ್ಟಡಿವಿಡಿದಾಮುನಿವರಗೆ ||
ಒಡವೆ ಹಯಧೇನುಗಳನೂರುಂಬಳಿಗಳ | ಕುಡುವೆನೆಂದೊಡಬಡಿಸಿದನು || ೩೧
ಅವನಾವನು ಲೋಕವನಿತಱೊಳೀಶಾ | ಪವ ಪರಿಹರಿಸಬಲ್ಲವನು ||
ಅವಿವೇಕಿ ನಿನಗಿನ್ನಾವಾಸೆ ಪೋಗೆಂ | ದವನು ಕರ್ಣನೊಳಱುಹಿದನು || ೩೨
ಮುನಿಯಿತ್ತಶಾಪಕೆ ಮೊಗಗೆಟ್ಟು ಕರ್ಣನು | ತನು ಕಂಪವೇಱಿ ಕಲ್ಲಣಿಸಿ ||
ನೆನೆದಳವೞಿಯುತೆ ನಿಡುಸುಯ್ಯುತೆ ರಾ | ಮನ ಸನ್ನಿಧಿಗೆ ಮರಳಿದನು || ೩೩

ಇಂತು ತೃತೀಯ ಸಂಧಿ

## ೪ ನೆಯ ಸಂಧಿ

ಬೞಿಕಿನತನಯನ ಬಾಹುವಿಕ್ರಮದಿಂ | ದೊಳುನುಡಿಗೆಯ್ಮೆಗಳಿಂದ ||
ಸುಳಲಿತಗುರುಶುಶ್ರೂಷೆಯಿಂ ರಾಮನು | ತಳೆದನೆದೆಯೊಳು ಸಂತಸವ || ೧
ಕ್ರಮಕಳುಕದೆ ಸೇವೆ ಸತ್ಕಾರವೆಸಗುವ | ಕಮಲಬಾಂಧವನ ಕಂದನಿಗೆ ||
ಕಮಲಭವಾಸ್ತ್ರಗತಿಭೇದಗಳ ಸ | ತ್ಕ್ರಮವನೆಲ್ಲವ ಕಲಿಸಿದನು || ೨

ಅಂದು ಕರ್ಣನು ಬ್ರಹ್ಮಾಸ್ತ್ರವನೀ ರಾಮ | ನಿಂದ ಕಲಿತು ನೆಲೆಯಱಿತು ||
ಸಂದ ಧನುರ್ವೇದ ಸಾರಮಂತ್ರಗಳ | ನೊಂದನುೞಿಯದೋದಿದನು || ೩

ಬೞಿಕೊಂದು ದಿನದೊಳು ಭಾನುಸುತನು ಬೆಂ|ಬೞಿವರುತಿರೆ ಭಾರ್ಗವನು ||
ಬಳಸಿರುವಾಶ್ರಮಭಾಗಸಂಚಾರದಿಂ | ಬಳಲಿ ಪಸಿದು ಬಾಡಿದನು || ೪

ನಂಬುಗೆಯಿಂದೆ ಕರ್ಣನ ತೊಡೆಯನು ತಲೆ | ದಿಂಬುಗೆಯ್ದಾ ಭಾರ್ಗವನು ||
ಕೆಂಬೆಲರೊಯ್ಯನೆ ತೀಡೆ ನಿದ್ರಾಂಗನೆ | ಗಿಂಬುಗೆಯ್ದನು ತನ್ನೊಡಲ || ೫

ಬೞಿಕೊಂದು ಪುೞು ರಕ್ತಪಾನಮಾಂಸಾಶನ | ಕೆಳಸಿ ಭಾನುಜನಿರ್ದೆಡೆಗೆ ||
ತಳುವದೆ ಬಂದುದು ದಾರುಣರೂಪದಿ | ತಳವೆಳಗಾಗುತವನ || ೬

ಒಡನೆ ಕರ್ಣನ ಬಲದೊಡೆಯೊಳು ನೆತ್ತರ | ಕುಡಿದುದು ಕೋಪದೊಳು ||
ಜಡಿಯೆ ಭಾರ್ಗವನೆಚ್ಚಱುವನೆಂದಿಪನುಮಂ | ದಡಗಿಸಿದನು ವೇದನೆಯ || ೭

ಅಳುಕದೆ ಮೆಯ್ಯಲುಗದೆ ತೊಡೆಯನು ಡೋರು | ಗಳೆವ ಪುೞುವಿಗಿನಸುತನು ||
ಬಳಲಿ ಮೈಮಱೆದೊಱಗಿದ ರಾಮಗೆ ನಿದ್ದೆ | ದಿಳಿವುದೆಂದೆ ಚಿಂತಿಸಿದನು || ೮

ಇವನ ತೊಡೆಯ ನೆತ್ತರಿಂದೆ ನನೆದು ಭಾರ್ಗ | ವನೆದ್ದು ಭಾವಿಸಿ ನೋಡಿ ||
ಅನಯವದೊಳು ರಕ್ತವಾಗಿರೆ ಕಂಡು ಮ | ತ್ತವನೊಳಿಂತೆಂದು ನುಡಿದನು || ೯

ಏನಿದೆನ್ನೊಡಲೆತ್ತಣಿಂದ ಮೈಲಿಗೆಯಾದು , ದೇನನೆಸಗಿದೆಯೆಲೆ ಮಗನೆ ||
ಜಾನಿಸಿ ಬೞಿದೆ ಸಂಕಟಗೊಳದಿರು ನೀ|ನೀನೆಲೆಯಿಂತೆಂದಱುಹು || ೧೦

ಬೞಿಕಿನಸುತನು ಬಣ್ಣಿಸಿದನು ರಾಮಗೆ | ಪುೞುವೆಸಗಿದ ಪೊಸಬಗೆಯ ||
ಮುಳಿದು ರಾಮನು ಪಡಿವೊಗದೊಳು ದಿಟ್ಟಿಯ|ಸುೞಿಸಿ ಕಂಡನು ಸೋಜಿಗವ || ೧೧

ಕೊಲೆರೂಪದ ಮೊನೆಗೋಱೆಯು ಬಳೆದೆಂಟು | ಕಾಲಿನಳರ್ಕವೆಸರಿನ ||
ಸಾಲುಮುಳ್ಳುಗಳಿಂದೆ ಸಂಧಿಸಿದೊಡಲದು | ಶ್ವೀಲ ಕೀಟವ ನಿಟ್ಟಿಸಿದನು || ೧೨

ಕಡುಗೋಪದಿಂದೆ ಭಾರ್ಗವನು ದಿಟ್ಟಿಸಿ ನೋಡಿ|ದೊಡನೆ ಪುೞುವಿನೊಡಲಿಂದ ||
ಕಡೆಗಾದುದು ಜೀವ ಕಣ್ಮನಗಳಿಗದು | ಪಡೆದುದು ಪರಮಕೌತುಕವ || ೧೩

ಬೞಿಕ ಮಾಸಿದ ಮೈಯ ಬಂದುಗೆಬಣ್ಣವ|ನೊಳಕೊಂಡ ಕೊರಲಕೋಱೆಗಳ ||
ತಳೆದು ತೆಱೆದ ಬಾಯ ದಡಿಗ ರಕ್ಕಸನು ಬಾಂ|ದಳದೊಳುನಿಂದಱುಹಿದನು || ೧೪

ಶರಣು ಭಾರ್ಗವರಾಮ ಸಕಲಮನೋರಥ | ಪರಿಪೂರ್ತಿಯಾದುದಿನ್ನೆನಗೆ ||
ಸರಿದುದು ಪಿಂತಣ ಶಾಪದಟ್ಟುಳಿ ನಿನ್ನ | ಚರಣಸಂದರುಶನದಿಂದ || ೧೫

ನೀನು ಸುಖದೊಳಿರು ನಿನ್ನ ಮೈಮೆಗಳನಿ|ನ್ನೇನೆಂದು ಪೊಗುೞುವೆನಿಂದು ||
ಈನಾರಕದತ್ತಣಿಂದೆದ್ದುಬಂದೆನಿ|ನ್ನಾನೆನ್ನ ಗತಿಗೆಯ್ದುವೆನು || ೧೬

ಎನೆ ಕೇಳಿ ತಾಪಸರೆಱೆಯನೀಜಮದಗ್ನಿ | ತನಯನು ದಡಿಗ ರಕ್ಕಸನ ||
ನಿನಗೀನರಕವೆತ್ತಣಿಂದಾದ್ ನೀ | ನೆಲನವನಿಂತು ನುಡಿದನು || ೧೭

ಎನ್ನ ಪೆಸರು ಗ್ರಸ್ತನೆಂದಾದಿಯುಗದೊಳಾ | ನುನ್ನತಿವೆತ್ತ ರಕ್ಕಸನು ||
ಎನ್ನೊಳು ಭೃಗುಮುನಿಗೆರವಿಲ್ಲದ ನೇಹ | ನೆನ್ನೇಱಿಸ್ಗಿಯಿಂತಿರ್ದುದಂದು || ೧೮

ಮನದು ಬರ್ಸಿನಿಂದಾನೊಮ್ಮೆ ಭೃಗುವಿನೊಲ್ಮೆ | ಯಿನಿಯಳ ಪಿಡಿಯೆ ಬಲ್ಮೆಯೊಳು ||
ಕನಲಿದ ಮುನಿಯಿತ್ತ ಕಷ್ಟಶಾಪದೊಳಂದಿ | ನನುಗೆಟ್ಟು ಪುೞುವಾದೆನಲ್ಲಿ || ೧೯

ಆಗಳೆನ್ನೆಯ ಶಾಪಕಾವುದು ಗಡಿಯೆಂದು | ಬೇಗದೊಳಾನು ಬಿನ್ನೈಸೆ ||
ಆಗುಣನಿಧಿಯೆನಗಱುಹಿದನಲಸದೆ | ಮೇಗೆ ಬರುವ ಮೇರೆಯನು || ೨೦

ಎನ್ನ ಕುಲದೊಳೆನಗೆಣೆಯೆನೆ ಜನರು ಮ | ಹೋನ್ನತನುದ್ಭವಿಸುವನು ||
ತನ್ನ ಕಟಾಕ್ಷದಿಂದಾಭೃಗುರಾಮನು | ನಿನ್ನ ಶಾಪವನು ನೀಗುವನು || ೨೧

ನನ್ನಿಯಾದುದು ಮುನಿನಾಥನ ನುಡಿಯಿಂದು | ನಿನ್ನಡಿಗಳ ನಿಟ್ಟಿಸಿದೆನು ||
ಎನ್ನ ಪೂರ್ವದ ಪಾಪವೆಲ್ಲವೞಿದುದಂದಿ | ನುನ್ನತಿಯೆನಗೊದವಿದುದು || ೨೨

ನುಡಿದಿಂತು ರಕ್ಕಸನೊಯ್ಯನೆ ಭಾರ್ಗವ|ನಡಿಗೆಱಗಿದನೈದಿದನು ||
ಕಡುಗಿ ಬೞಿಕ ಭಾರ್ಗವರಾಮನು ಕರ್ಣ | ನೊಡನಿಂತೆಂದುಸಿರಿದನು || ೨೩

ಬಲುನೋವನಿದನು ಪಾರ್ವರು ಸೈರಿಸರೀ | ನೆಲೆಯನಿಂತೆಂದೆನಗಱುಹು ||
ಪಲವು ಮಾತೇನು ಪಾರ್ಥಿವಜಾತನು ನೀನು | ನೆಲಗೊಂಡಿದೆ ನಿನ್ನ ಧೈರ್ಯ || ೨೪

ಕನಲಿದ ರಾಮನ ಕಠಿನವಾಕ್ಯಂಗಳೆ | ಗಿನನಂದನನೆದೆಗರಗಿ ||
ತನಗಿವನಿಂ ಶಾಪ ತಪ್ಪದೆಂದೆಣಿಸುತ | ವಿನಯದಿ ಬಿನ್ನವಿಸಿದನು || ೨೫

ಪರಿಕಿಸಿ ವಿಪ್ರಜಾತಿಯ ಪೆಂಡಿರೊಳು ಕ್ಷತ್ರ | ಪುರುಷರಿಂ ಪುಟ್ಟಿದವರನು ||
ಧರೆಯೊಳು ಸೂತಜಾತಿಯರೆಂಬರು ಮುನಿ | ವರಯೆನಗವರೊಳುತ್ಪತ್ತಿ || ೨೬

ಎನ್ನ ಪೆಸರು ಕರ್ಣನೆಲೆ ದೀನಬಂಧು ಕೇ | ಳೆನ್ನ ಪಡೆದ ತಾಯಿ ರಾಧೆ ||
ಮನ್ನಿಪುದಸ್ತ್ರಲೋಭಿಯ ಮಂದಬುದ್ಧಿಯ | ಯೆನ್ನನಿಂತಪರಾಧಿಯನು || ೨೭

ವೈದಿಕವಿದ್ಯೆಯನೋದಿಸುವನು ತಂದೆ | ಯಾದ ಬಗೆಯನಱಿತಾನು ||
ಆದರದಿಂದಾಚಾರ್ಯಗೋತ್ರದೊಳಭಿ | ವಾದನಗೆಯ್ದೆನಂದಿನೊಳು || ೨೮

ನುಡಿದಿಂತು ನಡುಗಿ ಭಾರ್ಗವರಾಮನಡಿಯು ಮುಂ|ಗಡೆಯೊಳೊಡಲನೀಡಾಡಿ ||
ಕಡುದೈನ್ಯವಡುವ ಕರ್ಣನೊಳು ಕನಲಿ ನಗೆ | ಯೊಡನವನಿಂತು ನುಡಿದನು || ೨೯

ದಾಯಗೆಡಿಸಿದೆಯಸ್ತ್ರವ ಕಲಿವಾಸೆಯಿಂದೆ | ಮಾಯವನೆಸಗಿದೆ ಮಗನೆ ||
ಈಯಸ್ತ್ರಮಂತ್ರ ನಿನ್ನೆದೆಯೊಳು ನೆಲಸದು | ಮಾಯವೆನಿಸಿ ಮಱಸುವುದು || ೩೦

ಮೊದಲಮೂಱುಂಬಣ್ಣದವರೊಳಗಲ್ಲದೆ | ಪುದಿಯದು ವೇದದ ಪುರುಳು ||
ಅದಱಿಂದ ನಿನಗೀಯಬ್ಜಭವಾಸ್ತ್ರದ | ಹೃದಯ ಸಿಕ್ಕದು ಅಱಿಬೇಗ || ೩೧

ಧುರದೊಳು ನಿನ್ನಂತೆ ದೋರ್ಬಲರೀಲೋಕ | ದ ಸುಮುಕ್ಕಳೊಳಾರುಮಿಲ್ಲ ||
ಮರಳು ಮರಳು ನಿನ್ನ ಮಾಯದ ಮಾಟವ | ಪರಪದಿರೆಮ್ಮ ಒೞಯೊಳು || ೩೨

ಪರಮಕೋಪದೊಳಿಂತು ಬಣ್ಣಿಪ ರಾಮನ | ಚರಣಕೆಱಗಿ ಪರಿತಂದು ||
ಪರಮೇಷ್ಠಿಯಸ್ತ್ರದ ಪರಿವಿಡಿಯಱ'ತಂತೆ | ಕುರುಸಭೆಯೊಳು ಕೊಬ್ಬುವನು || ೩೩

ಇಂತು ಚತುರ್ಥ ಸಂಧಿ

## ೫ ನೆಯ ಸಂಧಿ

ಪರಮಾಸ್ತ್ರಂಗಳ ಪಡೆದಿನ್ನು ಹಸ್ತಿನ | ಪುರಕೈದಿ ಪೂಷನಂದನನು ||
ಕುರುರಾಜಸುತರೊಡಗೂಡಿ ಕೊಬ್ಬುತ ಪರಿ | ಪರಿಯೊಳು ಪರಿದಾಡಿದನು || ೧
ಇರೆಯಿವನಿಂತು ಕಳಿಂಗದೇಶದ ರಾಜ | ಪುರದೊಳು ದೊರೆಯ ಕುವರಿಗೆ ||
ವರವಿಭವದೊಳು ಸ್ವಯಂವರಮುಪ್ಪುದೆಂ | ದರಸುಗಳಲ್ಲಿಗೆಯ್ದಿದರು || ೨
ರಾಜಪುರವನಾಳ್ವ ರಾಯನ ಮಗಳಿಗೆ | ಸ್ತ್ರೀಜಗದೊಳಗೆಣೆಯಿಲ್ಲ ||
ಈಜಾತಿಪೆಣ್ಮಣಿಯೆನಗೆನಗೆನಗೆಂದು | ತೇಜದರಸುಗಳೆಯ್ದಿದರು || ೩
ಪೂರ್ಣವಾದುದು ರಾಜಪುರಿ ರಾಯರಿಂದೆಂದು | ಕರ್ಣಕೆ ಬೀಱ' ಕೌರವನು||
ಸ್ವರ್ಣರಥವನೇಱ' ಸಕಲಸನ್ನಾಹದಿ | ಕರ್ಣನೊಡನೆ ಕದಲಿದನು || ೪
ಒಱ'ಕ ಬಂದರು ಶಿಶುಪಾಲ ಜರಾಸಂಧ | ರಿಳೆಯೊಳಗ್ಗದ ನೀಲನೃಪತಿ ||
ದಳದುಱ'ಗಾಱನೆನಿಪ ದಂತವಕ್ರನು |ಮಳವುಗೊಂಡಲ್ಲಿಗೆಯ್ದಿದನು || ೫
ಮತ್ತೆ ಕಪೋತರೋಮಕನೆಂಬ ದೊರೆ ಏ | ರೋತ್ತರುಶತಧನ್ವಕನು ||
ತೆತ್ತ ವೇಳೆಗೆ ತಪ್ಪುವುದು ತರವಲ್ಲೆಂ| ದೊತ್ತಭರದೊಳೊದವಿದರು || ೬
ರಾಮನೆನಿಪ ಭೋಜರಾಜನುಮವನಂತೆ | ಭೀಮವಿಕ್ರಮಭೀಷ್ಮಕನು ||
ಈಮಹಿಯೊಳಗೆಣೆಯಿಲ್ಲದ ರುಕ್ಮಿಯು | ಮಾಮಹೋತ್ಸವಕೈದಿದರು || ೭
ಈಲೋಕದಾಣ್ಮರನಿಱ'ಗೈದು ಮೆಱೆವ ಸೃ | ಗಾಲವಿಶೋಕಭೂಮಿಪರು ||
ಕಾಲಕೆ ಮೊದಲೆ ತೆಂಕಣ ದೆಸೆಯಿಂದಿವ|ರಾಲಿ ಬೊಬ್ಬಿಡುತ್ತೈದಿದರು || ೮
ಕಡುವಣ್ಣವಿಡಿದ ಕಾಂಚನಭೂಷಣಗಳಿಂ | ಬೆಡಗುವಡೆದು ಬೇಗದೊಳು ||
ಎಡುಕುಳ್ಳವರಾರ್ಯಮ್ಲೇಚ್ಛಭೂಪರು ಮೂಡ | ಬಡಗಣವರು ಬಂದರಂದು || ೯
ಸಿಂಗರವಡೆದು ಕಳಿಂಗದೇಶದ ಚಿ | ತ್ರಾಂಗದ ರಾಯನ ಸಭೆಗೆ ||
ಸಿಂಗಗಳಂತೆ ಸಿಡಿಲುಗಳಂತಾನೃಪ | ಪುಂಗವರೆಲ್ಲರೈದಿದರು || ೧೦
ಮಣಿಪೀಠಗಳೊಳು ಮಂಡಿಸಿ ನೃಪರು ತಾ | ಮೆಣೆಸತಕ್ಕುದನೆಣಿಸುತಿರೆ ||
ಪಣವಾನಕಮುಖ್ಯಬಹಳವಾದ್ಯರವ | ವಣೆದುದಂಬರದೇಶವನು || ೧೧

ಬೞಿಕಲ್ಲಿ ನೆರೆದಿರ್ದ ಪಾರ್ಥಿವರೆದೆ ತಳ | ವೆಳಗಾಗೆ ರಾಯನ ಕುವರಿ ||
ಬೞಿ ಸಲ್ವ ದಾದಿಯು ಬನ್ನಣೆನುಡಿಗೆ ಪೆ | ರ್ಕಳಿಸುತ್ತೈದಿದಳಾಸಭೆಗೆ || ೧೨
ದೊರೆಗಳೋರೊರ್ವರ ತೋಱಿ ದಾದಿಯುರ|ವರವರಿವೆಲ್ಲವನೆದೆಗೊಳಿಸೆ ||
ಪರಿವಿಡಿಯೊಳು ಕುರುಪತಿಯ ನಿಟ್ಟಿಸಿ ಕಳೆ | ದಿರದೆ ಮುಂಬರಿದೈದಿದಳು || ೧೩
ಒಡನೆ ದುರ್ಯೋಧನನುಕ್ಕುವ ಕೋಪದಿಂ | ದೆಡಬಲದವರೆಣಿಸದೆ ||
ಪಿಡಿದೆೞೆದುಯ್ದು ಪೆಣ್ಮಣಿಯ ಬೀರರ ಬಾಯ | ಬಡಿದಂತೆ ರಥಕಡರಿದನು ||೧೪
ಬೀರನು ತಾನು ತನ್ನನು ಭೀಷ್ಮಾದಿಗ | ಳಾರೈವರೆಂಬ ಹಮ್ಮಿನೊಳು ||
ಆರು ಕಾದುವರೆನ್ನೊಳವರೈತಹುದೆಂ | ದಾಱಿ ಬೊಬ್ಬಿಱಿದು ಕರೆದನು || ೧೫
ಒಡನೆ ಕರ್ಣನು ಕೈದುವಿಡಿದು ಮೈಜೋಡ ತೊ | ಟ್ಟಡರಿ ಪೊಂದೇರನಾಳ್ದನಿಗೆ ||
ಪಡಿಬಲವಾಗಿ ಪಾಯ್ದನು ತಡೆದವರ ಪೊ | ಯ್ದಡುತೆಡಬಲಕೆ ಬೀದಿಯೊಳು || ೧೬
ಬೞಿಕಲ್ಲಿ ನೆರೆದ ಭೂಪಾಲರ ಪಡೆ ತಳ | ವೆಳಗಾಗಿ ತತ್ತಱಗೊಳುತ ||
ತಳುವದೆ ಮೈಜೋಡು ಧರಿಸಿ ರಥವನೇಱಿ | ಕಳಕಳದೊಡನೆ ಕವಿದುದು || ೭೧
ಎಣೆಬೆಟ್ಟುಗಳಿಗಿದಿರೇಱುವ ಮುಗಿಲ ಸಂ | ದಣಿಯಂತೆ ಸರ್ವಪಾರ್ಥಿವರು ||
ಕಣೆವೞೆಗಱೆದರು ಕರ್ಣಕೌರವರ ಮೈ | ತಣಿದುತಲ್ಲಣಗೊಳುವಂತೆ || ೧೮
ಕವಿದೇಱುವ ದೊರೆವಕ್ಕಳ ಕಣ್ಮನಾಳವ | ನವರ ಕೈವಿಲ್ಲಂಬುಗಳ ||
ಕವಲುಗೋಲೊಂದೊಂದಱಿಂದೆ ಕರ್ಣನು ಕಡಿ | ದವನಿಯೊಳಡಗೆಡಹಿದನು || ೧೯
ಸರಳನಿಸುವ ಶಕ್ತಿಯನು ಬೀಱುವ ಮು | ತ್ತಿರದೆ ಗದೆಯ ತಿರುಹಿಡುವ ||
ದೊರೆವಕ್ಕಳ ತನ್ನ ತೋಳ ಬಲುಮೆಯಿಂದೆ | ಪರವಶಗೊಳಿಸಿ ಪಱಿದನು || ೨೦
ಅೞಿದುದು ಪಾಡಿನ್ನಾವ ಕೋಟಲೆಯಿಂ | ದಳವುಗೆಟ್ಟಾಭೂಮಿಪರು ||
ಅೞಿಯೆ ಸಾರಥಿ ತಾವಶ್ವದ ವಾಘೆಯ | ಕಳೆದು ತಮ್ಮೂರಿಗೈದಿದರು || ೨೧
ರವಿಸುತನಿಂತು ರಕ್ಷಿಸಿದ ಕಾರಣದೆ ಕೌ | ರವನಂದು ರಾಯಕುವರಿಯ ||
ಜವೆಗೊಂಕದಂತಿರೆ ಸೆೞೆಗೊಂಡು ನಾಗಪು|ರವ ಪೊಕ್ಕನತಿಹರುಷದೊಳು || ೨೨

ಇಂತು ಪಂಚಮ ಸಂಧಿ

## ೬ ನೆಯ ಸಂಧಿ

ಎಲೆ ಧರ್ಮಸುತ ಕೇಳಿಂತೊರ್ವನೆ ರಾಜ | ಬಲಪನೆಲ್ಲವ ಒಱೆಕೆಯ್ಯೆ ||
ಬಲುಮೆಗಾಱರ ಬಲ್ಲಹನು ಜರಾಸನ್ಧ | ನೊಲಿದು ಕರ್ಣನ ಕರೆಸಿದನು || ೧

ಬಂದ ಕರ್ಣನು ತನ್ನ ಬಲ್ಮೆಯ ತಿಳಿಯಬೇ | ಕೆಂದು ಮಾಗಧನೆದೆಗೊಳಿಸೆ ||
ಕುಂದುವೆರ್ಚುಗಳಿಗೆ ಕೊಸಱದೆ ಕರ್ಣನು | ಮಂದವನೊಳು ಕಾದಿದನು || ೨
ಕಣೆಗಳನೆಚ್ಚು ಕೈಗಳು ಸೋಲೆ ಗಾಯಕೆ | ತಣಿಯೆ ಮೈ ಕರ್ಣಮಾಗಧರು ||
ಸೆಣಸಿ ತಮ್ಮೊಳು ತಾವು ದಿವ್ಯಾಸ್ತ್ರಂಗಳ | ಗಣನೆಗೊಂಬಂತೆ ಕಾದಿದರು || ೩
ಸರಳು ಸಮೆಯೆ ಬಿಲ್ಲ ಬಿಸುಟು ಖಂಡೆಯಗೊಂಡು | ಗರುವರಿರ್ವರು ಕೈಮೆಯೊಳು ||
ಧರೆಯ ಬೀರರು ಸೈಯೆನೆ ಕಾದಿ ತಣಿದೊ | ರ್ವರನೊರ್ವರು ಮೆಚ್ಚಿದರು || ೪
ಕತ್ತಿಗಳುಡಿಯೆ ಕಳೆದು ಬಿಸುಟದನು ವೀ | ರೋತ್ತಮರುರುಬ್ಬಿದೊಡ್ಡನೆ ||
ಬಿತ್ತರವಱಿತು ಪೆಣಗಿ ಬಿದ್ದೆದ್ದು ಪೊ | ಯ್ದೊತ್ತಿ ಮುಷ್ಟಿಯೊಳು ಕಾದಿದರು || ೫
ಭರದಿ ಮೋಸವ ಕೊಂಡು ಪಾಯ್ದು ಕೆಡಪಿ ಕರ್ಣ | ನಿರದೆದೆಯೇಱಿ ಮಾಗಧನ
ಜರೆಯೆಂಬ ರಕ್ಕಸಿ ಜತೆಗೂಡಿಸಿದ ಮೈಯ | ಪುರಿ ಬಿಚ್ಚಿ ಪೊಯ್ದೊಱಗಿದನು || ೬
ಬಲುಗಾಳಗದೊಳು ಬಸಗೆಡೆ ಮೆಯ್ತನ್ನ | ಚಲವಱಿದವನು ಜಾಣ್ಮೆಯೊಳು ||
ಪಲಬಗೆಯೊಳು ಪತಿಕರಿಸಿ ಕರ್ಣನಿಗಂ | ದೊಲಿದಿತ್ತನಂಗದೇಶವನು ||
ಎಲೆ ರಾಯ ಕೇಳಂದಿನಿಂದೆ ಕರ್ಣನುಮಾ | ನೆಲನ ಪಾಲಿಸುತ ನೇಮದೊಳು ||
ಅಲಸದೆ ಕೌರವನಾಣತಿವಿಡಿದಿರ್ಪ | ನೆಲೆಯನು ನೀನಱಿತಿರುವೆ || ೮
ಇವನಿಂತು ಜಸವಡೆದಿರೆ ವಾಸವನಂ | ದು ವಿಪ್ರವೇಷದೊಳು ||
ಕವಚಕುಂಡಲಗಳ ಕಾಮಿಸಿ ಕೇಳಿದೊ | ಡವನಿತ್ತನಱಿತುಮಱಿಯದೆ || ೯
ಕವಚಕುಂಡಲಂಗಳ ಕಳೆದಿತ್ತು ಬಱಿಮೈಯೊ | ಳವನಿರೆ ನಾಡವರಂತೆ ||
ಕವಿದೆಚ್ಚು ಕೊಂದನರ್ಜುನನಂದು ತನ್ನ ರ | ಥವನೇಱಿ ಬರೆ ಮಾಧವನು || ೧೦
ಅವನೀಶ ಕೇಳಗ್ನಿಹೋತ್ರಿ ವಿಪ್ರನ ಶಾಪ | ಸವೆಯದ ಭಾರ್ಗವಶಾಪ ||
ಅವಿವೇಕದೊಳು ಕುಂತಿಗಂದಿತ್ತ ವರವಂ | ತಿವಱಿಕೊಳಱಿದನಿನಸುತನು || ೧೧
ಕವಚಕುಂಡಲದಾನವೊಂದು ಗಾಂಗೇಯನೊ | ಳವಮತಿಗೆಯ್ದುದೊಂದು ||
ಅವನರ್ಧರಥಿಕನೆಂಪಾಡಿದುದೊಂದಿಂ | ತಿವಱಿಕೊಳಱಿದನಿನಸುತನು || ೧೨
ಇವನಿಗೆ ಸಾರಥಿಯೆನಿಸಿರ್ದ ಶಲ್ಯನಂ | ದಿವನಿಱಿಕೆಗೆಯ್ದುಗೊಂದು ||
ಅವನೀಶ ಕೇಳುಯಚ್ಯುತನೆಸಕವೊಂ | ದಿವಱಿಕೊಳಱಿದನಿನಸುತನು || ೧೩
ಶಿವಶಕ್ರಯಮಸಲಿಲೇಶಕೃಪದ್ರೋಣ | ಶಿವಸಖರೊಲಿದು ಕಲಿಸಿದ ||
ವಿವಿಧದಿವ್ಯಾಸ್ತ್ರದ ವಿಭವವನಾಂತಂ | ದವನ ಗೆಲಿದನರ್ಜುನನು || ೧೪
ಪಲವು ಸಾಪಗಳಿಂದೆ ಪಲವು ಮಾಯಗಳಿಂದೆ | ಪಲರವನನು ಮಡಪಿದರು ||
ನೆಲೆಯಿಂದು ನೀನಿದನಱಿತಿನ್ನೀಪರಿ | ಪಲುಬಿ ಬಱಿದೆ ಒಱಲದಿರು || ೧೫

ಇಂತು ಷಷ್ಠಸಂಧಿ

## ೭ ನೆಯ ಸಂಧಿ

ತಿಳುಹಿ ನಾರದನೀತೆಱದೊಳು ಮಾನವ | ತಳೆದಿರೆ ಧರ್ಮನಂದನನು ||
ಬೞಿಕ ತನ್ನೆದೆಯೊಳು ಬಳೆದ ಶೋಕಂಗಳ | ಬಳಸುತ್ತೆ ಬಣ್ಣಗುಂದಿದನು || ೧

ಬಗ್ಗಿದ ತಲೆಯು ಬಾಡಿದ ಮೋರೆಯು ಮಿಗೆ | ತಗ್ಗಿತಲ್ಲಣಿಪ ಮೆಲ್ಲೆದೆಯು ||
ನೆಗ್ಗಿದ ಧೈರ್ಯದ ನಿಜತನಯನ ಕಂಡು | ಕುಗ್ಗಿದಳೆದೆಯೊಳು ಕುಂತಿ || ೨

ಕನಲಿದುರಗನಂತೆ ಕಡುಸುಯ್ಯುತೆ ಕ | ಣ್ಬನಿಯ ಕಱೆವ ಪಾರ್ಥಿವನ ||
ಅನುವನಾರೈದು ಕಾಲೌಚಿತ್ಯವನಱಿ | ತನಿವಾತನಿಂತು ನುಡಿದಳು || ೩

ಎಲೆ ಯುಧಿಷ್ಠಿರ ಕೇಳೀಧರೆಯೊಳು ನೀನು | ಬಲುಗೈಯುವನು ಬಲ್ಲವನು ||
ತೊಲಗಿಸು ಶೋಕವ ದೊರೆರಾಯನೆನಿಸೀ | ನೆಲೆಯೊಳಿರ್ಪುದು ನೀತಿಯಲ್ಲ || ೪

ಭೂಕಾಂತ ಕೇಳು ಪೂರ್ವದ ವೃತ್ತಾಂತವ | ಸೇಕೋದರರು ನೀವೆಂದು ||
ಆಕಾಲದೊಳೆ ನಿನಗಱುಹುವೆನೆನ್ನಿರ್ದೆ | ನೀಕರ್ಣನೆನ್ನ ತಡೆದನು || ೫

ದಿನನಾಥನುಮಲ್ಲಿ ದಿವದಿಂದಿೞಿತಂ | ದೆನಗೆ ಕರ್ಣನಿಗೀರ್ವರಿಗೆ ||
ಕನಸೆಂಬಂತೆ ಕವಿಸಿ ಮಾಯೆಯನಾ | ದಿನದೊಳು ಬುದ್ಧಿವೇೞಿದನು || ೬

ಹಿತಪರನಾದ ನೇಹಿಗನೆಂತು ಪೇೞ್ವನಾ | ಗತಿಯೊಳೆನ್ನಯ ಕಣ್ಣಮುಂದೆ ||
ಸುತನೆಂದು ಪೇೞ್ದನು ಸೂರ್ಯನವನು ಸ | ಮ್ಮತಿಗೊಳದಿರೆ ಮರಳಿದನು || ೭

ಅಂದು ಸೂರ್ಯನುಮಾನುಮವನೆದೆಯೊಳು ನಿಂದ | ಕುಂದನು ಕಳೆಯಲರಿಯದೆ ||
ಒಂದುಗೂಡಿ ಸಲಹಗುಳಿದೆವು ನಿನ್ನೊಡ | ನಿಂದು ನುಡಿವುದಾವುದಿನ್ನು || ೮

ಅವನಿಗೞಿವುಗಾಲವದರಿಂದೆ ವೈರವ | ಪವಣಿಸಿ ಭಂಗಬಡುವನು ||
ಆವನಿಗೆ ನೇಹವಾಗದು ನಿಮ್ಮೊಳೆಂದಾ | ನವನ ಹಂಬಲ ಬಿಟ್ಟೆನಂದೆ || ೯

ಎನೆ ಕೇಳಿ ಧರ್ಮಜನಿರದೆ ಶೋಕದೊಳು ಕ | ಣ್ಬನಿಗಱೆಯುತೆ ಬಸವೞಿದು ||
ಕೊನರಿಡೆ ಕೋಪ ಕುಂತಿಯ ನೋಡಿ ಧರ್ಮದೊಂ | ದನುವನಾರೈದು ನುಡಿದನು ||

ಮಾತೆ ನೀನೆಮ್ಮೊಳು ಮಱೆಮಾಚಿದೆಯೀ | ಮಾತಿನಮರ್ಮವೆಲ್ಲವನು ||
ಈತೆಱದಿಂದೆಮ್ಮನಿರವುಗೆಡಿಸಿ ಬಂಧು | ಘಾತಕತನವ ಕಲಿಸಿದೆ || ೧೧

ಬೞಿಯುಮಾತಲ್ಲ ಸಾಪವನೀವೆನು ತಾಯೆ | ಮಱೆಯೋತಕೆ ಮಾನಿನಿಯರು ||
ಅಱಿತ ರಹಸ್ಯಂಗಳಾವುವಾದೊಡಮವ | ತೆೞಿಯಲಿ ಸಕಲಭೂಮಿಯೊಳು || ೧೨

ಇಂತು ಸಾಪವನಿತ್ತೆಣಿಸಿ ಸಕಲಬಂಧು | ಸಂತತಿಗಳನೆದೆಸರಿದು ||
ಸಂತಾಪದೇೞ್ಗೆಯುಸ್ಸೈರಿಸಲಱಿಯದೋ | ರಂತೆ ಮೈಮಱೆದೊಱಗಿದನು || ೧೩

ಭರದೊಳು ಪೊಗೆಯನೊದೆದು ಪೊಱಮಡುವ ದ | ಳ್ಳುರಿಯಂತೆ ಮೈಮುರಿದೆದ್ದು ||
ದೊರೆತನದಾಸೆಯ ತೊಱೆದು ವೈರಾಗ್ಯದ ಸರಣಿಯನನುಸರಿಸಿದನು || ೧೪

ಇಂತು ಸಪ್ತಮ ಸಂಧಿ

## ೮ನೆಯ ಸಂಧಿ.

ಇಂತು ಕರ್ಣನ ನೆನೆನೆನೆದೊಡನುಕ್ಕುವ । ಸಂತಾಪದಿಂ ಧರ್ಮಸುತನು ||
ಅಂತರಙ್ಗವ ಬಲಿವಿಡಿಯಲರಿಯದೋ । ರಂತೆ ಬಣ್ಣಿಸಿ ಪಲುಬಿದನು || ೧
ಕಡು [ನೊಂದುತಾಂ] ಖತಿಗೊಳುತೆಡೆಯೊಳು । ನಿಡುಸುಯ್ಯುತೆಬಾಯ್ವಿಡುತೆ||
ತಡೆಯಲಾರದೆ ತನ್ನ ಶೋಕವನರ್ಜುನ । ನೊಡನಿಂತೆಂದು ನುಡಿದನು || ೨
ಕೇಳೆಲೆ ತಮ್ಮಯೆಮ್ಮೊಡಲ ಪೊರೆಯಲೇನ । ನಾಳೋಚಿಸಿದೆವಕಟಕಟ ||
ಪಾಳಿಗೆಟ್ಟೆವು ಪಂತವಳಿದೆವು ಪಾಪದೊ । ಳಾಳಿ ಮುಳುಗಿದೆವಳಿದೆವು || ೩
ಯಾದವರಾಯರ ಮನೆಯ ಭಿಕ್ಷಗಳಿಂ । ದಾದರು ತನುವ ಪೊರೆಯದೆ ||
ಕಾದಿ ಬಱಿದೆಕಟ್ಟಾಸುರದೊ[ಳಾವು]ದಾ। ಯಾದಿಗಳನು ಕೊಲಿಸಿದೆವು || ೪
ವೈರಿಗಳೆಂದು ಬಱಿದೆ ಬಾಳುವಾಸೆಯ । ಕೌರವರನು ಕೊಲಿಸಿದೆವು ||
ಆರಯ್ಯಲೆಮ್ಮವರೇ ಮಡಿದರು ಕೈ । ಸಾರುವ ಫಲವಾವುದಿನ್ನು || ೫
ಸಾಕು ಭೂಮಿಪರಾಚಾರದ ಪರಿವಿಡಿ । ಸಾಕು ಕಲ್ಲೆದೆತನದಿರುವು ||
ಸಾಕು ಸಾಕೈಶ್ವರ್ಯವೇಕಿದಱಿಂದೈಸೆ । ಈಕಷ್ಟಮೆಮಗೆ ಸೇರಿದುದು || ೬
ಪರಿಕಿಸೆ ತರಹರಕೆಣೆಯುಂಟೆ ಶುಚಿತೆಗೆ । ದೊರೆಯುಂಟೆ ಶಮದಮೆಗಳಿಗೆ ||
ಸರಿಯುಂಟೆ ಪೆಗೆತನಮಚ್ಚರಂಗಳನುಳಿ । ದಿರುವುದಕಿನ್ನು ಜೋಡುಂಟೆ || ೭
ನಡೆನುಡಿನೆನೆಹುಗಳೊಳು ಪರಹಿಂಸೆಯ । ನೊಡಬಡದರವಿಗೀಡುಂಟೆ ||
ಅಡಸಿದಾಪತ್ತಿನೊಳಾದರು ಪುಸಿವಾತ । ನುಡಿಯದುದಕೆ ಸರಿಯುಂಟೆ || ೮
ಅರಸುತನವನನುಭವಿಸುವ ತವಕದಿಂ । ಮರುಳಾಗಿ ಬೆಱೆತುಬಿಂಕದೊಳು ||
ಪರರೆಂದು ತನ್ನವರುಗಳನೇತಱದೀ । ಪರಿಯ ಭಂಗಕೆ ಬಂದೆವಕಟ || ೯
ಪೆಣದಿನಿಗಳವೊಲು ಬಾಂಧವರುಗಳ ಹ । ರಣವಕೊಂಡೆವುರಾಮರಾಮಾ ||
ಎಣೆಸೆಮೂಜಗವೇಕೈಸಾರ್ದೊಡಮನ್ತಃಕ । ರಣಕೆಸಂತಸದೋಱುವುದೇ || ೧೦
ನೆಲದಾಸೆಯಿಂ ಮೋಹವಡೆದು ಮುಂಗಾಣದೆ । ಕೊಲಬಾರದವರೆಲ್ಲರನು ||
ಕೊಲಿಸಿದೆವೀಪೊಡವಿಗೆ ಪೋಱಿಯಾದೆವು । ಕುಲಘಾತಕರೆನಿಸಿದೆವು || ೧೧
ನೆಣದಾಸೆಯಿಂ ಕಾದುವ ಜಾಯಿಲಂಗಳ । ಗುಣವೆಮ್ಮೊಳು ನೆಲಸಿದುದು ||
ನೆಣವೆಲ್ಲವು ಬಯಲಾದುದು ನಿಟ್ಟಿಸೆ । ನೆಣದಿನಿಗಳುಮುಡುಗಿದರು || ೧೨
ಈನೆಲದೊಡೆತನವೀಧನಧಾನ್ಯವೀ । ಯಾನೆಕುದುರೆಗಳ ನೆರವಿ ||
ನಾನಾವಿಧಭೋಗಂಗಳು ಕಡಾರ್ದಿ । ಮಾನಧನರಿಗೆ ಪಾಸಟಿಯೇ || ೧೩
ಮನದಾಸೆ ಖತಿ ರೋಷಮಚ್ಚರಂಗಳುಬಿಡ । ದನುಸರಿಸಿರೆ ಭೂಮಿಪರು ||
ತನುವ ಬಿಸುಟು ಮೃತ್ಯುವಿನ ಪೆಗಲೇಱಿಕಾ । ಲನ ನಿಲಯವನೈದಿದರು || ೧೪

ಪಲವು ಮುತ್ತೇನು ತಂದೆಗಳು ಬಾಳುವೆವೆಂಬ | ಗೆಲವು ಮನದೊಳಿಮ್ಮಡಿಸಿ ||
ನಲವಿಂದಿಷ್ಟದೇವತೆಗಳನೊಲಿಯಿಸಿ | ಕುಲತನಯರನು ಪಡೆವರು || ೧೫
ಸಿಸುವ ಬಯಿಸಿತಾಯಿಗಳು ಸದ್ವ್ರತವ | ಚರಿಸಿ ತೀರ್ಥಗಳಿಗೆ ಸಂಚರಿಸಿ ||
ಬಸಿಱಾಗಿ ಪತ್ತುತಿಂಗಳು ಪೊತ್ತಿರುವರಾ | ಯಸವನೆಳ್ಳನಿತನೆಣಿಸರು || ೧೬
ಎಂದಿಗೆ ಶಿಶುಗಳ ಪಡೆವೆವಾಶಿಶುಗಳಿ | ನ್ನೆಂದಿಗೆ ಸುಖದಿ ಬಳೆವುವು ||
ಎಂದಿಗೆ ಸಂತಸವನು[ನೆರೆ]ಪುಟ್ಟಿಪು | ವೆಂದು ತಾಯಿಗಳೆಳಸುವರು || ೧೭
ಎಳಮೆಯ ಕಳೆದು ಜೌವನದುಬ್ಬಿನಿಂ ಮಿಗೆ | ಬಳವಂತರೆನಿಸಿಬಾಳುವುವು ||
ಬಱಿಕಿಹಪರದೊಳೆಮ್ಮನು ಪಾಲಿಪವೆಯೆಂ | ದೆಳಸಿ ತಾಯಿಗಳು ಚಿಂತಿಪರು|| ೧೮
ಅನಿಬರ ನೆನೆಹುಗಳಾನೆಲ್ಲವನೆಮ್ಮಾ | ತನುವ ಪೊರೆವ ಬೆಸನದೊಳು ||
ಅನುಗೆಡಿಸಿದೆವಕಟಕಟ ಬಱಿದೆ ರಾಜ | ತನುಜರೆಲ್ಲರ ಕೊಲಿಸಿದೆವು || ೧೯
ಉಣದುಡದಿಳೆಯೊಡೆತನ ಪೋರಟೆಗಳಿಂ | ತಣಿಯದೆ ಪಿತೃದೇವತೆಗಳ ||
ಋಣವನುತ್ತರಿಸದೆ ರಾಯಕುವರರೆಲ್ಲ | ರಣಭೂಮಿಯೊಳಡಗಿದರು || ೨೦
ಬಲವಂತರಾದರು ಬಳಿದರಿನ್ನೆಮ್ಮನು | ಸಲಹುವರೆಂದು ತಂದೆಗಳು ||
ಗೆಲವಿನೊಳಿರುವನಿತಱಿಕೊಳೆಯಾಕುವರರ | ಕೊಲಿಸಿದೆವನ್ಯಾಯವಿದು || ೨೧
ಬವರದೊಳೆಮಗಾಗಿ ಪಲವು ದೇಶದ ರಾಯ | ಕುವರರು ತನುವಬಿಸುಟರು ||
ಅವರೆಮ್ಮವಿಜಯಫಲದೊಳೆಳ್ಳನಿತನು | ಸವಿದವರಲ್ಲಕಟಕಟ || ೨೨
ನುಡಿವುದಿನ್ನೇನೆಮ್ಮುಭಯಪಕ್ಷದೊಳು ಸಂ | ಗಡಿಗರು ಸುತರು ಸೋದರರು ||
ಮಡಿದರು ಮಡಿದು ಸೋಲ್ದವರು ಕೌರವರಾಯ|ಮಡಿಪಿ ಸೋಲ್ದವರುಮತ್ತೇನು||
ಅವರಾಶೆಯೆಮ್ಮಾಶೆಯೀರ್ವರಾಶೆಯುಂ ಮಿಾ | ಸೆವದಿಂದೆ ಬಯಲಾದುದಕಟ ||
ಅವರು ಸೋಲ್ದಿಳೆಯನು ನೀಗಿದರೊಡನೆ ನಾ | ವವರ ಗೆಲಿದು ನೀಗಿದೆವು || ೨೪
ವನಿತೆಯರೊಡಗೂಡಿ ಸಂತಸದಿಂದ ನ | ರ್ತನಗೀತಾದಿಭೋಗಗಳ ||
ಅನುಭವಿಸುವ ರಾಯಕುವರರ ಕೊಲಿಸಿ ನಾ | ವನುಭವಿಸದೆ ನಿಂತೆವಕಟ || ೨೫
ಬಳವಂತರೆಲ್ಲರುಮಱಿದರು ನಾವಿಂ | ತುಱಿದೊಡಮಱಿದವರ್ಸೈಸೆ ||
ಇಳೆ ಪಾಂಡವರಿಂದ ಬಱಿದಾದುದೆಂಬೀ | ಯಱಿಜಸವೆಮಗೆ ಸೇರಿದುದು || ೨೬
ಧೃತರಾಷ್ಟ್ರನ ತನುಭವರೊಡರಿಸಿದನು | ಚಿತಕೃತ್ಯದಿಂದೆಮ್ಮ ಬಗೆಗೆ ||
ಖತಿಪುಟ್ಟೆ ಮತಿಗೆಟ್ಟ ಬಗೆಯಿಂದೀಭೂಮೀ|ಪತಿಗಳ ಪಡೆಯುಡುಗಿದುದು || ೨೭
ಏವೇಳುವೆನಕಟಕಟಾ ವಿಚಿತ್ರದ | ದೈವಯೋಗದ ಸೂತ್ರವಿದು ||
ಭಾವಿಸೆ ನೆವವಿಲ್ಲದೆ ಕೌರವರೆಮ್ಮೊ | ಳಾವೈರವನೆಸಗಿದರು || ೨೮
ಪುಸಿ ಪುಯ್ಯಲು ಪೋರಟೆ ಮಾಯ ಮತ್ಸರ | ಪಿಸುಣ ಬಿಱುಬುಬಿಂಕಗಳ ||
ಎಸಗಿ ಬಱಿದೆ ಕೌರವರೆಮ್ಮನು ನೋ | ಯಿಸಿದರಿನ್ನೇವೇಳುವೆನು ೨೯

ಕುರುರಾಯನು ರಾಜಸೂಯದೊಳಂದೆಮ್ಮ | ಪರಿಪರಿಯೈಶ್ವರ್ಯಗಳನು ||
ಪರಿಕಿಸಿ ಸೈರಿಸಲಱಿಯದೆ ನೊಂದು ಸೋ | ದರಮಾವನೊಳು ಪಲುಬಿದನು ||
ಬರದೊಳಾಶಕುನಿಮಾಜಗದರಸುಗಳೊಳು | ಪರೆಯದಜೂಜಿನುಜ್ಜುಗವ ||
ಪರಮಪಾತಕಿ ದುರ್ಯೋಧನಗೊರೆದನು | ಪಿರಿಯೈಯ್ಯನದನೊಪ್ಪಿದನು || ೩೧
ಮಗನಮೇಗಣಮಱುಕದಮಬ್ಬಿನೊಳಂದು | ಬಗೆಗೆಟ್ಟುಭೀಷ್ಮಾದಿಗಳನು ||
ಬಗೆಯದೆ ಭಾವನ ನುಡಿಯ ಕೇಳ್ದೀಬವ | ಣೆಗೆ ಬಂದು ನಿಂದನೇನೆಂಬೆ || ೩೨
ತನಯನನಂಕೆಗೆ ತರಲಱಿಯದೆಯವ | ನನುಮತವನೆಯನುಸರಿಸಿ ||
ಅನುಗೆಡಿಸಿದನೆಮ್ಮನು ತಾನುವಿಾಪರಿ | ಯನುಗೆಟ್ಟನು ದೈವ ಪಿರಿದು || ೩೩
ಮುಪ್ಪುರಿಗೊಂಡ ವೈರದಲೆಮ್ಮೊಳು ಮೇರೆ | ದಪ್ಪಿದ ದುಷ್ಕೃತದಿಂದೆ ||
ಮುಪ್ಪಿನ ತಂದೆತಾಯ್ಗಳನು ಶೋಕಾಗ್ನಿ | ಗೊಪ್ಪಿಸಿ ಮಗನುಮಱಿದನು || ೩೪
ಆರಯ್ಯೆ ಕುಲಜನರಾನಿಷ್ಠುರಗಳ | ನಾರೊಳಾದರುಮಾಡಬಹುದೆ ||
ಆರಾಜಸಭೆಯೊಳು ದುರ್ಯೋಧನನು ಮು | ರಾರಿಯ ಬಱಿದೆ ನುಡಿದನು || ೩೫
ಆಸಮಯದೊಳು ಕೌರವನು ಶ್ರೀಕೃಷ್ಣನ | ಕೈಸೆಱೆಗೊಳಲೆಳಸಿದನು ||
ಈಸುಯೋಧನನವೊಲಿಳೆಯೊಳು ಮನುಜಾ | ಭಾಸರಾರಾದರುಮೊಳರೆ || ೩೬
ಆಪಾಪಿಷ್ಠನ ಬಱಿಗೆ ದುರಾಸೆಯಿಂ | ಶ್ರೀಪತಿಯನೆ ಕಳುಪಿದೆವು ||
ಆಪಾತಕ ಬೆನ್ನ ಬಿಡದಿರ್ಪುದಱಿಂ | ದೀಪರಿ ಭಂಗಪಡುವೆವು || ೩೭
ಪಲವು ಮಾತುಗಳಿಂದಿನ್ನೇನು ಫಲವೆಮ್ಮ | ಕುಲ ಕೌರವರಿಂದಱಿದುದು ||
ಕೊಲಬಾರದವರನು ಕೊಂದರೆಂಬಪಕೀರ್ತಿ | ನೆಲದೊಳೆಮ್ಮನು ಸೇರಿದುದು || ೩೮
ಅತಿಪಾತಕಿ ಕುಲಘಾತಿ ಕುಹಕಿ ದು | ರ್ಮತಿ ದುಷ್ಟದುರ್ಯೋಧನಗೆ ||
ಕ್ಷತ್ರಸಾಮ್ರಾಜ್ಯವನೊಸೆದಿತ್ತ ದುರ್ನೀತಿ | ಧೃತರಾಷ್ಟ್ರನೊಳು ಫಲಿಸಿದುದು ||
ಇಳೆಯ ವೀರರ ಮಡುಪಿದೆವು ವೀರಾವೇಶ | ತಿಳದುದೆಂದಿರ್ಪವೇಳೆಯೊಳು ||
ತಳುವುದೆ ಶೋಕಾಗ್ನಿ ದಳ್ಳುರಿಗೊಂಡೆದೆ | ಯೊಳು ಮಿಗೆ ನಿಂದುರಿಯುತಿದೆ|| ೪೦
ಎಲೆ ತಮ್ಮ ಕೇಳು ಸನ್ಮಾರ್ಗದ ನಡತೆಯಿಂ | ಪಲವು ಒಗೆಯ ಪಾಪಗಳ ||
ಗೆಲಬಪ್ಪುದು ಮಿಕ್ಕ ಮಾತೇನು ವೈರಾಗ್ಯ | ತಲೆದೋಱೆ ದೋಷವಱಿವುದು ||
ಪುಟ್ಟುಪೊಂದುಗಳ ಪೋರಟೆ ಪೊದ್ದದು ಪಾಪ|ಮುಟ್ಟದು ಮೋಹಮುಸುಕದು
ನೆಟ್ಟನೆ ವೈರಾಗ್ಯಮಿರೆಯಿಹಪರಸೌಖ್ಯ | ಬೆಟ್ಟಿತಪ್ಪುದು ತಪ್ಪದಿದು || ೪೨
ಅದಱಿಂದೆ ಸುಖದುಃಖಾದಿದ್ವಂದ್ವಂಗಳ | ನೊದೆದು ತುಱಿದು ಮುನಿಯೆನಿಸಿ ||
ಮುದದಿಂದ ವನವಾಸಕೆ ಪೋಪೆನು ನೀ | ವಿದಕನುಮತಿಯ ಪಾಲಿಪುದು ೪೩
ಮಡದಿಮಕ್ಕಳು ಮನೆವಾಱಿತ್ತಿಗಳಂ ಬಿ | ಟ್ಟಿಡೆಯೊಳು ಸಿಲುಕಿದವರಿಗೆ||
ತೊಡಕಲಂದಧರ್ಮ ದೊರೆಕೊಳ್ಳದೆಂಬ ನಾ | ಣ್ಣುಡಿಯೆಮ್ಮೊಳು ನಿಜವಾಯ್ತು ||

ದೊರೆತನವಿದು ನಾಡಾಡಿ ಸಂಸಾರಿ [ಗೆ | ಸರಿ] ಯಲ್ಲ ನಾನಾವಿಧದ ||
ಪರಿತಾಪದ ನೆಲೆ ನಿತ್ಯಸಂಸಾರದ | ಸರಣಿಯೆಂಬುವು ವೇದಗಳು || ೪೫
ನಾನಾವಿಧದ ತೊಡಕಿಗೊಳಗಾಗದಿ | ನ್ನೀನೆಲದಾಸೆಯನುೞಿದು ||
ಆನೆನ್ನದೆಂಬಹಂಮಮತೆಗಳನು ತೊಱೆ | ದಾನಂದದೊಳೆ ನೆಲಸಿಹೆನು || ೪೬
ವಸುಧೆಯೆಲ್ಲಾ ಬಸವಾಗಿದೆ ನೀವು ಸಂ | ತಸದಿಂದಿದನು ಪಾಲಿಪುದು ||
ಜಸವನು ಪಡೆವುದೀರಾಜ್ಯಭೋಗಂಗಳ | ಬೆಸನವೆನಗೆ ಸಾಕುಸಾಕು || ೪೭
ಇಂತು ಧರ್ಮಜನು ಧನಂಜಯನೊಡನೆ ತ | ನ್ನಂತರಂಗವನಂಡಲೆವ ||
ಚಿಂತೆಯನೆಲ್ಲವನಱುಹಿ ಮರುಳುಗೊಂ | ಡಂತೆ ಮೌನವ ತಾಳಿದನು || ೪೮

ಇಂತು ಅಷ್ಟಮ ಸಂಧಿ

## ೯ ನೆಯ ಸಂಧಿ

ಬೞಿಕರ್ಜುನನು ಧರ್ಮಜನಾಡಿದ ನುಡಿ | ಗಳ ಕೇಳ್ದಚ್ಚರಿವಡುತ ||
ಅೞಲುತ ನಯದೊಡಗೂಡಿದ ಬಿಱುನುಡಿ | ಗಳನಿಂತೆಂದು ನುಡಿದನು || ೧
ಏವೆನಿದೆತ್ತಣ ದುಃಖವೆಲ್ಲಿಯ ಪಾಪ | ವಾವ ಪರಿಯ ವ್ಯೆಮಱವೆ ||
ಆವ್ವೈರಿಗಳ ಕೊಂದಿಳೆಯ ಗೆಲಿದು ಮ | ತ್ತೀವಿಧದೊಳು ಪಲುಬುವರೆ || ೨
ಜಗದ ವೀರರಿಗಸದಳವೆಂದೆನಿಸುವ | ಜ್ಜುಗುವನೆಸಗಿ ಕೈಕೊಂಡು ||
ಅಗಣಿತದಿವ್ಯೈಶ್ವರ್ಯವನೊದವೀ | ನಗೆಗೇಡುಂಟೆ ಲೋಕದೊಳು || ೩
ಕುಲಧರ್ಮದೊಳೆವಿರಾದ ಬಲ್ವಗೆಗಳ | ಕೊಲಿಸಿ ಚಪ್ಪನ್ನ ದೇಶವನು ||
ಗೆಲಿದಿಂದು ಬಱಿದ ಬಿಸುಟೆಯಾದೊಡೆ ನಿನ್ನ | ನೆಲನೆಲ್ಲವು ನಗದಿಹುದೆ || ೪
ಅಲಸರಿಗಜ್ಞರಗತಿಭೀಕರಿಗೆ ಚ | ಪಲರಿಗೆ ಬಾಯ್ಬಡಿಕರಿಗೆ ||
ಹಲವ ಹಂಬಲಿಸುವ ಹಂದೆಗಳಿಗೆ ಭೂ | ತಲದದೊಡೆತನ ದೊರಕುವುದೆ || ೫
ತಿರಿದುಂಬುದಲ್ಲದೀಯೊಡಲನು ಪೆಱತೊಂದು | ಪರಿಯೊಳು ಪೊರೆಯೆ ನೆಂಬವನು ||
ಉರಿಸಿಂಗಿಯಂತುರ್ಕುವ ಕೋಪದಿಂ ಭೂಮಿ | ಪರನೇಕೆ ಬಱಿದೆ ಕೊಲಿಸಿದೆ || ೬
ಧರೆ ಪೊಗೞುವತೆರದೊಳು ಸತಿಸುತಹಿತ ಪರಿಜನರನು ಪೊರೆವರಿಗೆ ||
ಪರಿದುಜ್ಜುಗವನೆಸಗಬೇಹುದು ಬೞಿ | ಯರವಿನಿಂ ಪಾೞಿಗೆಡುವುದು || ೭
ಧನಧಾನ್ಯದಿಂ ಪರಿಪೂರ್ಣವಾದಿಳೆಯೊಡೆ | ತನವ ತನ್ನಿಂತಾನೆ ತೊಱೆದು ||
ಮನವಾಱಿ ಕಾಪಾಲಿಕನಾದೊಡೆ ಪುರ | ಜನ ಪೞಿಯದೆ ಸುಮ್ಮನಿಹುದೆ || ೮

ಉಱುವ ಕಾರ್ಯವನೆಲ್ಲವನೊಲ್ಲದೇಱುಗ್ಗಿಯು | ತೊಱೆದಭಿಮಾನವನುೞಿದು ||
ಪೞುಗಳಂದದಿ ತಿರಿಸುಂಬುದನೇಕಿದು | ನೆಱೆ ಸಂತಸದಿ ಬಯಸುವೆ || ೯
ಇಳೆಯರಾಣ್ಮರ ಕುಲದೊಳು ಪುಟ್ಟಿಯಿಾಪರಿ | ನೆಲದೊಡೆತನವನೊತ್ತರಿಸಿ ||
ಪಲವು ಧರ್ಮಾರ್ಥಂಗಳ ಪರಿಹರಿಸಿ ಗಾ | ವಿಲರಂತೆ ವನಕೈದುವರೆ || ೧೦
ಅವನಿಯರಾಜಕವೆಂದು ವೈದಿಕರು | ತ್ಸವಹವ್ಯಕವ್ಯಾದಿಗಳನು ||
ತವಿದಿರುವರು ನಿನಗಡಱಿಂದೆ ಪಾತಕ | ಸವನಿಸದಿರ್ಪುದೆ ಪೇಳು || ೧೧
ಬಡವರಿಗಿಹಪರವೆರಡಱ ಸುಖ ಮೈ | ಗುಡದೆಂದು ನಹುಷನಾಡಿದನು ||
ತೊಡಗಿದುಜ್ಜುಗವೆಲ್ಲವು ಬಯಲೆನಿಸುವೀ | ಬಡತನವನು ಬಯಸುವರೇ || ೧೨
ಅಂದಂದಿಗೆ ಮಾತ್ರವೆ ಸಂಪಾದಿಪೆ | ನೆಂದಿರ್ಪುದಿದು ಮುನಿಧರ್ಮ ||
ಸಂದ ಸಕಲಧರ್ಮಂಗಳೆಮಗೆ ಪಣ | ದಿಂದಲ್ಲದೆ ದೊರೆಕೊಳದು || ೧೩
ಆರರ ಧನವನಾರಪಹರಿಸುವರಾ | ಧೀರರವರ ಧರ್ಮವನು ||
ಬೇರುವೆರಸಿ ತೆಗೆವರು ಧನವಿಲ್ಲದೆ | ತೀರುವ ಧರ್ಮವೆಲ್ಲಿಯದು || ೧೪
ಧನಹೀನರು ಸೇರಿ ಬರುತಿರೆ ಧನವುಳ್ಳ | ಜನರು ಪಾತಕಿಯ ಕಂಡಂತೆ ||
ತನುವ ಕೊಂಕಿಪರು ದಾರಿದ್ರ್ಯವೆಂಬುದೆ ಪಾಪ | ಮನುಜರದನು ಪೊಗಳುವರೆ ||
ಜನಕೆ ಧರ್ಮಾರ್ಥಕಾಮಂಗಳು ಧನದಿಂದೆ | ಕೊನೆಸಾಗುವುವು ಸಗ್ಗದಿರವು ||
ಅನುಗೂಡುವುದು ಧನವಿಲ್ಲದಿರ್ದೊಡೆ ಜೀ | ವನವೆ ದುರ್ಲಭವೆನಿಸುವುದು || ೧೬
ಧನವಿಲ್ಲದಿರೆ ಧೈರ್ಯಗೆಟ್ಟು ತಲ್ಲಣ ಹುಟ್ಟಿ | ಮನಗುಂದಿ ಮತಿಮಸುಳುವುದು ||
ತನಿವೇಸಗೆಯೊಳು ತೊಱೆನೀರಂತೆ ನಿ | ರ್ಧನರ ಗೆಯ್ಮೆಗಳಡಗುವುವು || ೧೭
ಧನವುಳ್ಳವನಿಗೆ ಬಾಂಧವರುಂಟು | ಧನವುಳ್ಳವಗೆ ಮಿತ್ರರುಂಟು ||
ಧನವುಳ್ಳವನೇ ಪುರುಷನೀಜಗದೊಳು | ಧನವುಳ್ಳನೆ ಬಲ್ಲವನು || ೧೮
ಧನವ ಬಯಸಿ ಭಂಗವಡುವುದಲ್ಲದೆ ನಿ | ರ್ಧನನಿಗೆ ಧನಸೇರುವುದೆ ||
ವನದೊಳಾನೆಯನಾನೆಯಿಂ ಕಟ್ಟುವಂದದಿ | ಧನದಿಂದೆ ಧನವ ಕೊಳ್ಳುವುದು || ೧೯
ವಿನಯ ವಿವೇಕ ವಿಭವ ವಿತರಣವಿದ್ಯೆ | ಮನದುಬ್ಬು ಕೊಬ್ಬು ಕೋಪಗಳು ||
ಧನದಿಂದೀಗುಣಗಳು ಬೆಲೆವಡೆವುವು | ಮನುಜೇಶ ಭಾವಿಸಿ ನೋಡು || ೨೦
ಧನದಿಂದೆ ಕುಲವೇೞಿಗೆಯಪ್ಪುದು ಮತ್ತೆ | ಧನದಿಂದೆ ಧರ್ಮ ಸೇರುವುದು ||
ಧನವಿಲ್ಲದವರಿಗೀಲೋಕದ ಸುಖವೆ | ಲ್ಲೆನಿತಿಲ್ಲ ಪರಸುಖವಿಲ್ಲ || ೨೧
ಧನವಿಹೀನಗೆ ತನ್ನ ಕುಲಜಾತಿಧರ್ಮಂಗ | ಳನುಗೂಡಿ ಕೊನೆಸಾಗುವುವೆ ||
ಪೊನಲು ಬೆಟ್ಟಗಳಿಂದೆ ಪೊಱಮಡುವಂದದಿ | ಧನದಿಂದೆ ಧರ್ಮ ಪೊಣ್ಮುವುದು ||
ಅವನ ಮೈ ಕೃಶವೆನಿಸಿ ಕಣ್ಗೊಳಿಪುದು | ಭಾವಿಸೆ ಕೃಶನವನಲ್ಲ ||
ಅವನಿಗಾಳುಕುದುರೆಯಾನೆ ಕೃಶವಪ್ಪ | ದಾವಸುಧೇಶನೇ ಕೃಶನು || ೨೨

ಪೂರ್ವದ ನಡತೆಯ ನೋಡು ದೇವಾಸುರ | ರೀರ್ವರು ದಾಯಾದಿಗಳು ||
ಓರ್ವರ ಸಿರಿಗಳೆಲ್ಲವನು ಕೈಕೊಂಡು ಮ | ತ್ತೋರ್ವರಾನಂದಬಡುವರು || ೨೪
ಧನವಿಲ್ಲದಿರೆ ಪೆಱರಿಂ ಕೊಂಬುದಲ್ಲದೆ | ದನಜೊಡವುಟ್ಟಿದರುಂಟೆ ||
ಮನುಜೇಶ ಕೇಳು ದೇವರಿಗಭಿಮತವಿದು | ಮುನಿಗಳಿದನೆ ಪೊಗಳುವರು || ೨೫
ವೇದತದಂಗಶಾಸ್ತ್ರಂಗಳನೆಲ್ಲವ | ನೋದಿ ತದರ್ಥವ ತಿಳಿದು ||
ಆದರದಿಂದೆ ಯಜ್ಞಕೆ ಧನವನು ಸಂ | ಪಾದಿಪುದು ಶಾಸ್ತ್ರಸಿದ್ಧ || ೨೬
ದಾನದಿಂದಖಿಲದೇವತೆಗಳು ತಂತಮ್ಮ ಸ್ಥಾನಂಗಳನು ಪಡೆದಿಹರು ||
ಆನೆಸಗಿದ ಕಲ್ಪನೆಯ ಮಾತಲ್ಲವಿ | ದಾನಿಗಮಾರ್ಥದ ತತ್ವ || ೨೭
ಅವನೀಶ ಕೇಳು ವೇದವನೋದುವರು ಯಾ | ಗವ ಮಾಡುವರು ಜಪಿಸುವರು||
ಅವನೆಲ್ಲವನಿದಿರಿಟ್ಟನ್ಯರಿಂದೆ ಧ | ನವ ಕೊಂಬುದನೆ ಬಯಸುವರು || ೨೮
ಪರರಿಂದೆ ಕೊಳ್ಳದೆ ಬಪ್ಪುದೆ ಧನವೀ | ಪರಿಯ ನಾವಱಿತವರಲ್ಲ ||
ದೊರೆಗಳೆಂದೆನಿಸುವರೆಲ್ಲ ರೀತಿಯದೊಳು | ಧರೆಯ ಗೆಲಿದು ಭೋಗಿಸುವರು || ೨೯
ನೆಲದಾಣ್ಮರು ಜಯದಿಂದೆ ಬಂದೊಡವೆಯ | ಕುಲಧನವೆಂದೆಣಿಸುವರು ||
ಪಲವು ಮಾತೇನಿನ್ನಾ ರಾಜಋಷಿಗಳು | ಸಲೆ ಕರ್ಮಶೀಲರೆನಿಪರು || ೩೦
ಕಡಲೊಳು ತುಂಬಿದುದಕ ಮುಗಿಲುಗಳಿಂದೆ | ಪೊಡವಿಯ ಪೊರೆವ ತೆಱದೊಳು||
ಪೊಡವಿಯ ರಾಯರ ಧನ ಧರ್ಮಮುಖದಿಂದೆ | ಬಡವರಿಗಾಧಾರವಹುದು ||
ಇಳೆ ನಹುಷನಿಗೆ ನೃಗನಿಗೆ ಯಯಾತಿಗೆ | ನಳನಿಗೆ ನಾಭಾಗನಿಗೆ ||
ಕೆಳೆಗೊಂಡಿದರ್ಕೆ ತೆಱದೊಳು ನಿನ್ನ ಮೈ | ವಳಿಗೆ ಬಂದಿದೆ ಭಾವಿಸಿದನು || ೩೨
ನಿನಗೆ ಸಕಲಯಜ್ಞಸಾಧನವಾಗುವ | ಧನಧಾನ್ಯಗಳು ಸೇರಿದುವು ||
ಮನವಾಱಿ ನೀನಿನ್ನು ಯಜಿಸದಿರ್ದೊಡೆ ಪಾಪ | ವನುಸರಿಸದೆ ಮಾಣ್ದಪುದೆ ||
ಅವನೀಶನಶ್ವಮೇಧವನಾಚರಿಸಿದೊ | ಡವನ ಸೇರಿದ ಜನರೆಲ್ಲ ||
ಅವಬೃಥದೊಳು ಮಿಂದು ನಿಖಿಲಮಹಾಪಾಪ | ನಿವಹವ ಪರಿಹರಿಸುವರು || ೩೪
ಧರೆಯ ಪಾಲಿಸು ಧನವನು ಸಂಪಾದಿಸು | ಪರಮಧರ್ಮವನಾಚರಿಸು ||
ಪಿರಿಯರಿಂದಧಿರಾಜವೀಧಿಯೊಳ್ಪೈದು ಕಾ | ಪುರುಷರ ಬಟ್ಟೆವಿಡಿಯದಿರು || ೩೫

ಇಂತು ನವಮ ಸಂಧಿ

## ೧೦ ನೆಯ ಸಂಧಿ

ವಿಜಯನಾಡಿದ ನುಡಿಗಳು ಕಿವಿವುಗದೆ ಧ | ರ್ಮಜನತ್ಯಂತಚಿಂತೆಯೊಳು ||
ತ್ರಿಜಗವ ತೃಣವೆಂದೆಣಿಸಿಯರ್ಜುನನಿಗೆ | ನಿಜನಿಶ್ಚಯವನರುಹಿದನು || ೧

ಎಲೆ ತಮ್ಮ ಬಱಿಯ ಮಾತುಗಳಿಂದೇಕೆನ್ನ । ಪಲಬಗೆಯೊಳು ಒಲಿಸುವೆ ||
ಅಲಸಿ ನುಡಿದ ನುಡಿಯಲ್ಲಿದು ಕಾರ್ಯದ | ನೆಲೆಯಿದನಾಲಿಸಿ ಕೇಳು ೨
ಮನೆಮಾರು ಮಡದಿ ಮಕ್ಕಳ ಮಱುಕದ ತೊಡ|ಕಿನೊಳಾನು ಸಿಲುಕುವನಲ್ಲ||
ನಿನಗೆನ್ನ ಹಂಬಲು ಬೇಡಿನ್ನು ನಾನೆನ್ನ | ಮನ ಒಂದೆಡೆಗೆಯ್ದುವೆನು || ೩
ಊರ ಹಂಬಲವನುೞಿದೊರ್ವನೆ ನೀನೆಲ್ಲಿ । ಸೇರಿಯೆಂತಿರುವೆಯೆಂಬುದನು ||
ಆರೈದು ಕೇಳೆನ್ನ ಮನದುತ್ಸಾಹವ | ನೀರೀತಿಯೆಂದುಸಿರುವೆನು || ೪
ಊರುಗರಾೞಿ ಮುೞುಗುವ ನಿಸ್ಸಾರಸಂ | ಸಾರದ ಸುಖದಾಸೆಯುೞಿದು ||
ಬೇರುಪಣ್ಗಳಮೆಲುತಡವಿಯ ಮೃಗಗಳ | ಸೇರುವೆಯೊಳು ತಿರುಗುವೆನು || ೫
ತೊವಲುಡೆಯುಟ್ಟು ಜಡೆಯ ಪೊತ್ತು ತಿರಿದುಂಡು । ನವೆದುಗ್ರತಪವನಾಚರಿಸಿ||
ದಿವಸದಿನಾಂತ್ತವೆರಡಱೊಳು ಮಿಂದು ಹೋ | ಮವನೊದರಿಸಿ ಜಪಿಸುವೆನು || ೬
ಚಳಿ ಮಳೆ ಗಾಳಿ ಬಿಸಿಲು ಬಾಯಾಱಿಕೆ | ಬಳಲಿಕೆ ಪಸಿವುಗಳಿಂದೆ ||
ಅಳುಕದೆ ಹಲವ ಹಂಬಲಿಸದೆ ತವೆ ತಪ । ದೊಳು ಮೆಯ್ಯನು ಕರಗಿಪೆನು || ೭
ಮಿಗೆ ಸಂತಸದೊಳುಲಿವ ಪಲವಂದದ | ಮಿಗಪಕ್ಕಿಗಳ ನುಣ್ಚರದ ||
ಸೊಗಸ ನಾಲಗೆಸುಖವನು ಸೂಱೆಗೊಳುತೆನ್ನ | ಒಗೆ ಬಂದ ತೆಱದೊಳಿರುವೆನು ||
ಅಲರಿಡಿದಾರಣ್ಯತರುಲತೆಗಳ ಕಂಪ । ನೊಲವಿನಿಂದಾಘ್ರಾಣಿಪೆನು ||
ಪಲವು ವಿಚಿತ್ರರೂಪದ ಮೃಗಪಕ್ಷಿ । ಕುಲದ ಸೊಬಗ ಸಿಟ್ಟಿಪೆನು || ೯
ನೆನಹಿನೊಳಾದರು ವನವಾಸಿಗಳಿಗೆಯೆ | ಳ್ಳಿಸಿತಪಕಾರವೆಸಗೆನು ||
ವನವಾಸಿಗೊರುಗರೊಳು ತೋಟಿಯಿಲ್ಲಂ । ದೆನಲೇನಿದಚ್ಚರಿಯಲ್ಲ || ೧೦
ನೆರವನು ಬಯಸದೊರ್ವನೆ ಪಸಿಬಿಸಿಯೊಳು| ದೊರೆಸುದನುಂಡು ನೇಮದೊಳು||
ಸುರಮುನಿಪಿತೃತರ್ಪಣಗಳನಲ್ಲಿಯ । ಸರದುದಕದೊಳೆಸಗುವೆನು || ೧೧
ಬಿಡದೆ ವಾನಪ್ರಸ್ಥಾಶ್ರಮಧರ್ಮದ | ನಡತೆಯನನುಸರಿಸುವೆನು ||
ಎಡೆಗುಡದುಗ್ರತಪನಾಚರಿಸುತೀ | ವೊಡಲ ಬಸುಡಲೆಳಸುವೆನು || ೧೨
ಮೇಗೆ ಮುಣ್ಡಿದ ಶಿರದೊಳು ಮುನಿಯೆನಿಸಿ ವಿ|ರಾಗದಿಂ ಭೋಗವನುೞಿದು||
ಬೈಗುಬೈಗಿನೊಳು ಭಿಕ್ಷವನುಂಡೀಮೆಯ್ಯ । ನೀಗಲೆಳಸಿ ನಿಂದಿಹೆನು || ೧೩
ಪಾೞುಮನೆಯೊಳಾಗಲಿ ಕಾಡುಮರಗಳ । ಮೂಲದೊಳಾಗಲಿ ನೆಲಸಿ ||
ಧೂಳಿ ಮೆಯ್ಯೊಳು ತೋರಮಾಗೆ ಹಿತಾಹಿತ | ದಾಳೋಚನೆಯನುೞಿದಿಹೆನು ||೧೪
ಒಂದಕ್ಕೆ ಹಿಗ್ಗದೊಂದಱೊಳು ತಗ್ಗದೆ ಮ । ತ್ತೊಂದ ಬಯಸಿ ಭಂಗಬಡದೆ ||
ನಿಂದೆವಂದನೆ ಬಹುಮಾನಾವಮಾನವ | ನೊಂದೇ ತೆಱದೊಳೆಣಿಸುವೆನು || ೧೫
ಪರಂ ನಂಬಿ ಸಲಾಣೆಯಿಡದೆ ಮತ್ತೊಮ್ಮೆಯು | ಪರರಾಣೆಯ ಕೈಕೊಳದೆ ||
ಮರುಳುಕುರುಡುಕಿವುಡೆಂದಿವರವರೆನೆ | ಪರಮಾನಂದಪಡುವೆನು || ೧೬

ದೇವಮಾನವಮೃಗನಗರೂಪದ ನಾ | ನಾವಿಧಜೀವಜಾತಿಯೊಳು ||
ಆವ ಕಾಲದೊಳಾವುದಕಾದೊಡಮೊಂದು | ನೋವನೆಣಿಸದಿರುತಿಹೆನು || ೧೭
ಒಂದೆಡೆಯೊಳು ಪೂರ್ಬ ಗಂಟಿಕ್ಕದೆ ಮ| ತ್ತೊಂದನು ಬಲುಮೆಯಿಂ ಕೊಳದೆ ||
ಮಂದಹಸಿತಮುಖದಿಂದೆ ಕರಣಗಳ | ದಂದುಗವನು ತಪಿಸಿಹೆನು || ೧೮
ಏನಿದೆತ್ತಣ ದಾರಿಯೆಲ್ಲಿಗೆ ಪೋಪುದೆಂ | ದೀನಿಜವನು ಬೆಸಗೊಳದೆ ||
ಈನೆಲೆಗೀವೂರಿಗೆ ಪೋಪೆನೆಂಬಭಿ | ಮಾನವಿಲ್ಲದೆ ತಿರುಗುವೆನು || ೧೯
ಬಿಟ್ಟು ಬಂದೆಡೆಯ ಪಿಂತಿರುಗಿ ನೋಡದೆ ಮನ|ಮುಟ್ಟಿ ಮುಂದಕ್ಕಡಿಯಿಡದೆ ||
ಪಟ್ಟಣ ಪಳ್ಳಿ ಪಾಳೆಯಗಳೆಂದೆಣಿಸದೆ | ದಿಟ್ಟೆಯ ಸರಿಸಕ್ಕೈದುವೆನು || ೨೦
ಬೆಂಬಳಿ ಬರುವರೆಲ್ಲರು ಬಿಟ್ಟುಪೋಗಲಿ | ಯುಂಬೂಟ ದೊರೆಕೊಳ್ಳದಿರಲಿ ||
ಕೊಂಬುದು ಕೊಡುವುದಿಲ್ಲದೆ ದ್ವಂದ್ವಂಗಳೆ | ಗಿಂಬುಗೊಡದೆ ಕಳೆಪುವೆನು || ೨೧
ಕಾರಪೊಗರು ಸವಿ ಕಹಿಯೆಂಬ ಭೇದವ | ನಾರಯ್ಯದೆ ಮೊತ್ತಮೊದಲು ||
ಸಾರಿದೂಟವನುಂಬೆನದುಮಿಲ್ಲದೊಡೆ ವಾಯು | ಪಾರಣೆಯೊಳು ತಣಿದಿಹೆನು ೨೨
ಒನಕೆವಾಡುಡುಗಿಪ್ಪೊಲೆಯೊಳುರಿಯುಡುಗಿ ಭೋ|ಜನಭಿಕ್ಷ ಕಳೆದಕಾಲದೊಳು ||
ಮನ ಬಂದಂತೆಯೋಟಕ್ಕೈದು ಮೂಱಿರಡೊಂದು|ಮನೆಯೊಳು ಭಿಕ್ಷಗೊಳುವೆನು ೨೩
ಜೀವಿಸಲೆಳಸಿದರಂತೊಂದನೆಸಗದೆ | ಸಾವರಂತೊಂದನೆಸಗದೆ ||
ಸಾವುಬದುಕುಗಳ ಪಱಿಯದೆ ಪೊಗೞದೆ | ನೋವುಸಂತಸವಿಲ್ಲದಿಹೆನು || ೨೪
ಒಂದು ತೋಳನು ಬಾಚಿಯಿಂದೆ ಕೆತ್ತಲಿ ಮ|ತ್ತೊಂದು ತೋಳಿಗೆ ಪರಿಮಳದ ||
ಗಂಧದಣ್ಪೆಡಲೊಂದಕೆ ಖತಿಗೊಳದೆ ಮ|ತ್ತೊಂದಕ್ಕೆ ನಲಿಯದಿರುವೆನು || ೨೫
ಅವನಿಯ ಮೇಲಿರುವರಿಗಾವಾವ ಕ | ರ್ಮವ ಬಿಟ್ಟು ಬದುಕಿರಬಹುದು ||
ಅವನೆಲ್ಲವನೊಂದಾಗಿ ತೊಱೆದು ಕ | ಣ್ಣವೆಯಾಟಮಾತ್ರದೊಳಿಹೆನು || ೨೬
ಎವೆಯಾಟಗೊಳವಿಚ್ಛೆಯಿಲ್ಲದೆ ಕಣ್ಮಾಗು | ಕಿವಿಗಳಿದ್ದೊಡಮಿಲ್ಲದವರ ||
ಹವಣೊಳಿದ್ದಖಿಲಸಂಕಲ್ಪವಳಿದು ಭವ | ಭವದ ಕಿಲ್ಬಿಷವ ತೊಳೆವೆನು || ೨೭
ಪಲವುಪೊದ್ದುಗೆಗಳನುೞಿದಾಸೆಯೆಂಬಳ | ವಲೆಯ ಪಗ್ಗವ ಪಱಿದಿಟ್ಟು ||
ನೆಲದೊಳೊಂದಕೆ ಕೈವಶವಾಗದೆ ಬೀಸು | ವೆಲರಂತೆ ಶೋಚಕಿಲ್ಲದಿಹೆನು || ೨೮
ಆಶೆಯುೞಿದು ನಿರ್ಲೇಪನೆನಿಸಿಯೂ | ಕಾಶದ ತೆಱದೊಳಿರುವೆನು ||
ಆಶೆಯಿಂದೈಸೆ ಮುಂಗಾಣದೆ ವಸುಧಾ | ಧೀಶರೆಲ್ಲರ ಕೊಲಿಸಿದೆನು || ೨೯
ಕಿಱಿದಾಸೆಯಿಂದೆ ಜನರು ನಲ್ಮೆಪೊಲ್ಮೆಯ | ನಱಿಯದೆ ನೆನೆದುದನೆಸಗಿ ||
ಬಱಿದೆ ಜೀವನವನೆಲ್ಲವನು ಕಳೆವರಿದ | ನಱಿತುಮಱಿಯದಕಟಕಟಾ ||೩೦
ಕಡೆಯೊಳುಕಣ್ಕಿವಿಕೈಕಾಲುಗಳ ಬಲ್ಮೆ | ಯುಡುಗಿ ಪಲವು ಬೇನೆಯಡಸಿ ||
ಒಡಲು ಕೈವಿಡಿದೊಡನೆ ತನ್ನಪಾಪ ಕೈ | ಗೆಡಿಸಿ ಕೋಟಲೆಬಡಿಸುವುದು|| ೩೧

ತೇರ ಗಾಲಿಯ ತೆಱದೊಳು ತಿರಗುವ ಸಂ | ಸಾರಚಕ್ರದೊಳಿಪ್ಪ ಜನರು ||
ಓರೊರ್ವರೋರೊರ್ವರಿಂದಿಷ್ಟಾರ್ಥವ | ಹಾರೈಸಿ ಹರಿದಾಡುವರು || ೩೨
ಹುಟ್ಟುವೊಂದೆಡರು ಮುಪ್ಪುಗಳು ಕಲಸಿ ಕೈನೋವಿ|ನಟ್ಟುಳಿಗಳ ತಾಣವೆನಿಸಿ ||
ನಿಟ್ಟಿಸೆ ನೆಲೆಯೆನಿಸದ ಸಂಸಾರವ | ಬಿಟ್ಟದಲ್ಲದೆ ಸುಖವುಂಟೆ || ೩೩
ದಿವದಿಂದೆ ದೇವತೆಗಳು ಬೀಳುತಿರೆ ಮುನಿ | ನಿವಹ ತಂತಮ್ಮಧಿಕಾರ ||
ಸವೆದು ತೊಲಗುತಿರೆ ಕಂಡು ಮನುಜರೇಕೆ | ಭವಸುಖವನು ಬಯಸುವರು || ೩೪
ಅವನಿಯ ರಾಯರಖಿಲವೇದಚೋದಿತ | ವಿವಿಧಕರ್ಮಂಗಳನೆಸಗಿ ||
ಅವಱೊಳು ಫಲವ ಬಯಸಿ ಕೀಳ್ಗಿಳಿವಱಿಯ | ವಿವೇಕಕೇನೆಂಬೆನಕಟಾ || ೩೫
ಇಂದೆನ್ನ ಪೂರ್ವಜನ್ಮದ ಪುಣ್ಯೋದಯ | ದಿಂದೀಸನ್ಮತಿ ಸಂಘಟಿಸಿತು ||
ಇಂದುನಾಳಿನ ಸುಖದಾಸೆಯ ತೊಱೆದಿದ | ಱಿಂದೆ ಮುಕ್ತಿಯನೆಳಸುವೆನು || ೩೬
ಇಂದು ಮೊದಲು ಬದುಕಿರುವ ಪರಿಯಂತವಿ | ದೊಂದೇನಡತೆಯೊಳಿದ್ದು ||
ಕುಂದದೆ ತನುವನಿಳುಹಿ ಮಿಗೆ ಪರಮಾ | ನಂದದೊಳೋಲಾಡುವೆನು || ೩೭

ಇಂತು ದಶಮ ಸಂಧಿ

## ೧೧ ನೆಯ ಸಂಧಿ

ಒಡನೆ ಭೀಮನು ಧರ್ಮಜನ ವೈರಾಗ್ಯದ | ನುಡಿಯನಾಲಿಸಿ ಕೋಪವೆರಸಿ ||
ಸಿಡಿಮಿಡಿಗೊಳುತಲಿಲ್ಲುತೆ ನೋವುತೆ ನೀತಿ | ವಿಡಿದು ನಿಷ್ಠುರವನಾಡಿದನು || ೧
ಬಿಡದೆ ವೇದವನೋದಿ ಬೇಗ ಲೌಕಿಕ | ಮುಡುಗಿದ ವಿಪ್ರನಂದದಲಿ ||
ಬಡಮನದಿಂ ಬಸವೞ್ದು ಬಾಯ್ಬಿಡುವುದು | ಜಡತನವಿದು ಜಾಣ್ಮೆಯಲ್ಲ || ೨
ಆೞ್ಮನದಿಂ ರಾಜಧರ್ಮಂಗಳನಿಂತು | ಪೞ್ದು ಪಾಡೞ್ದಿರುವನಿಗೆ ||
ಇಳೆಯ ಪಾಲಿಪ ಧೃತರಾಷ್ಟ್ರನ ತನಯರು | ಗಳ ಕೊಂದುದಕೆ ಫಲವೇನು || ೩
ಆದಾರುಣಯುದ್ಧವೆಸಗುವ ದಿವಸದೊ | ಳೀದಾರಿ ಮೈದೋಱಲಿಲ್ಲ ||
ಈದಯೆಯಿದಾಕ್ಷಿಣ್ಯವಿದಾವೆಲ್ಲಿರ್ದ | ಯೀದಿನದೊಳು ಕಾಣಿಸಿದುವು || ೪
ಆದಿಯೊಳೀನಿನ್ನ ಮನದ ನಿಶ್ಚಯವನು | ಭೇದಿಸಿ ತಿಳಿದಿರ್ದೊಡಂದು ||
ಕೈದುಗೊಳ್ಳೆವು ಕಾತರಿಸೆವು ಕನಲೆವು | ಕಾದೆವನ್ಯರ ಕೊಲ್ಲದಿಹೆವು || ೫
ಈದೇಹವೞ್ದು ಪೋಗುವ ಪರಿಯಂತ ಭಿ | ಕ್ಷೋದನದಿಂ ಬದುಕುವೆವು ||
ಈದಾರುಣಯುದ್ಧವಿಲ್ಲದೆ ರಾಯರು | ಮೇದಿನಿಯೊಳು ಬಾಳುವರು || ೬

ಕ್ಷೋಣೀಶ ಕೇಳು ಚರಾಚರರೂಪಿನಿಂ | ಕಾಣಿಪ ಸಕಲವಸ್ತುಗಳು ||
ಪ್ರಾಣಿಗಳಿಗೆ ಭೋಜನವೆಂದು ಶಾಸ್ತ್ರಪ್ರ | ವೀಣರೆಲ್ಲರು ಬಣ್ಣಿಸುವರು || ೭
ಧರೆಯ ಕೊಂಬೆಡೆಯೊಳು ಸ್ವೈರಿಸದಿ | ದಿರಾದ ಧರೆಯ ರಾಯರ ಮೋಹರದ ||
ಹರಣವ ಸೇದುವುದಿದು ರಾಜಧರ್ಮದ | ತಿರುಳೆಂಬರು ನೀತಿವಿದರು || ೮
ನಾಡುಬೀಡುಗಳನು ಕೊಂಡುಕಲಿಸದೆಮ್ಮ | ಕಾಡಿಗೆ ಕೆಡಹಿದವರನು ||
ಸೂಡುವಿಡಿದು ಕೊಲಿಸಿದೆ ಧರ್ಮದಿಂದಿನ್ನು | ನಾಡೆಲ್ಲವನು ಪಾಲಿಸೇೞು || ೯
ಬಱಿದೆ ಬಾವಿಯ ತೋಡಿ ಮೈಕೆಸಱಾಗಿ ನೀ|ರೊಱೆಪನಿತಱೊಳು ಸ್ವೈರಿಸದೆ||
ತೊಱೆದೆದ್ದು ತುಟಿಬಾಯಾಱೆ ತಾ ಬಱಲುವ | ತೆಱನಾದುದೀನಮ್ಮ ನಡತೆ |
ಬೆಟ್ಟದಮೇಲೆ ಬೆಳೆದ ಬಲುಮರದೊಂದು | ತುಟ್ಟತುದಿಯ ಕೊಂಬನೇಱಿ ||
ಮುಟ್ಟಿ ಜೇನಿನ ಹಳಿಯನು ಕೊಯ್ದುಣದೆ ಕೈ | ಬಿಟ್ಟವೊಲೀನಮ್ಮ ನಡತೆ || ೧೧
ಪಸಿದುಣಲೆಳಸಿ ಪಲವು ಕೋಟಲೆಗಳಿಂ | ಬಸಗೈದ ಪರಮಾನ್ನವನು ||
ಬಿಸುಟು ಬೀದಿಯೊಳು ಭಿಕ್ಷವ ಬೇಡುವಂದದಿ | ಹಸನಾದುದೀನಮ್ಮ ನಡತೆ|| ೧೨
ಒಗೆದಂದು ಬಯಸಿ ಬಱಲಿ ಚಿಂತೆಸಂತಾಪ | ಮಿಗೆ ಯತ್ನದಿಂದೆ ಕೈವಿಡಿದ ||
ಸೊಗಸುಗಾತಿಯ ಸೋಂಕಿ ಸುಖಿಸದೆ ಮುನಿದೀಳ್ವ | ಬಗೆಯಾದುದೀನಮ್ಮ ನಡತೆ||
ಧುರದೊಳು ತಮಗಿದಿರಾದ ಬಲ್ಪಗೆಗಳ | ಶಿರಗಳ ಕೊಯ್ದು ಸೇಡಾಡಿ ||
ಮರಳಿ ತನ್ನೊಡಲನು ತಿವಿದೀಡಾಡುವ | ಪರಿಯಾದುದೀನಮ್ಮ ನಡತೆ || ೧೪
ಸಾಸಿರಗಾವುದಕೈದಿ ತನ್ನಿಷ್ಟಾರ್ಥ | ಕೈಸಾರುವ ಸಮಯದೊಳು ||
ರೋಸಿ ಬಿಸುಟು ಮರಳುವ ತೆಱದೊಳು ಮಿಗೆ | ಲೇಸಾದುದೀನಮ್ಮ ನಡತೆ || ೧೫
ಪರಮಜಾಡ್ಯದೊಳಿಂತು ಪಲುಬುವ ನಿನ್ನನು | ಪಿರಿಯಣ್ಣನೆಂದನುಸರಿಸಿ ||
ಮರುಳುಗೊಂಡಂತಿರುವೆಮ್ಮನು ಲೋಕದ | ವರು ನಿಂದಿಸದೆ ಮಾಣ್ದಪರೆ || ೧೬
ಬಱಿದೆ ಗಂಡಂಗ ತಾಳಿದ ನಿನ್ನ ಬಗೆಯನಾ | ವಱಿಯದೆ ಪಿರಿಯಣ್ಣನೆಂದು||
ನೆರೆನಂಬಿ ತೋಳ ಬಲುಹು ಬಲ್ಲವಿಕೆಗಳು | ಬಱತವರಂತಾದೆವಕಟ || ೧೭
ಪುರುಳ್ಗೆಟ್ಟೆಲ್ಲಿಯು ಪುಗಲೆಡೆಯಿಲ್ಲದೆ | ತಿರುಗುವೆಮ್ಮನು ಕಂಡವರು ||
ಧರೆಯೊಳು ಸಿಕ್ಕನುಱಿದು ಮುಕ್ಕವರು ಮನ | ಗಂಗಿ ಮುಮ್ಮಲಮಱುಗುವರು|| ೧೮
ಪಗೆಯ ಕೈಸೆಱೆಸಿಕ್ಕಿ ಭಂಗವಟ್ಟವರಿಗೆ | ಮಿಗೆಮುಪ್ಪುಮುಸುಕಿದವರಿಗೆ ||
ಬಗೆಬಗೆಯಿಂದ ಡಸಿದವರಿಗೈಸೆ ಯಾ | ಜಗದೊಳು ಸನ್ಯಾಸಚಿಂತೆ || ೧೯
ಧರ್ಮಶಾಸ್ತ್ರವನೋದಿದವರು ಸನ್ಯಾಸವ | ನೊರ್ಮೆಯಾಗೊಡಮೊಡಂಬಡರು ||
ಧರ್ಮ ಕೆಡಲಲ್ಲದೆ ಪೇೞತಿಲ್ಲೆಂದು | ಧರ್ಮಜ್ಞರನುವದಿಸುವರು || ೨೦
ಇದು [illegible] ರಾಜಧರ್ಮವೆಮ್ಮದು ನಾ | ವಿದಱೊಳು ಪುಟ್ಟಿ ಬಳೆದೆವು ||
ಇದಱಿಂದ [illegible] ವಡೆದೆವು ನಾವು ಮ | ತ್ತಿದನು ನಿಂದಿಸುವುದುಚಿತವೆ || ೨೧

ಪರಿಕಿಸೆ ಸನ್ಯಾಸವೆಂಬುದು ಜಗದೊಳು । ಪರಿಪರಿಯೊಳು ಬಂಗವಡೆದು ||
ಪುರುಳುಗೆಟ್ಟೊಡಲ ಪೊರೆಯಲಱಿಯದವರ | ಪರಮನಾಸ್ತಿಕವಾದವೈಸೆ || ೨೨
ಜ್ಞಾನಾಭಾಸವಿಲ್ಲದೆ ನಿಟ್ಟೈಸ | ಲಾನಿಗವಾಂತಚೋದಿತವೆ ||
ಏನೆಂಬೆನು ಸತ್ಯದಂತೆ ತೋಱುವುದಿಲ್ಲ | ದೀನೆಲೆಯೊಳು ನಿಜವುಂಟೆ || ೨೩
ಅತಿಥಿಗಳನು ಸತ್ಕರಿಸಲಱಿಯದೆ ಸತಿ | ಸುತರ ಸಂತರಿಸಲಱಿಯದೆ ||
ವ್ರತಹವ್ಯಕವ್ಯವನೆಸಗಲಱಿಯದ ದು । ರ್ಮತಿಗಳು ಬದುಕುವಂದವಿದು || ೨೪
ಅಡವಿಯೊಳಿರುವೆಯೆರಳೆಮಱಿಸಾರಗ । ಕಡವೆಕಾಡಮ್ಮೃಗಳವಕೆ ||
ಬಿಡುಗಣ್ಣರ ಬೀಡು ವಶವಾದುದೆ ಈ | ಜಡಮತಿಯನು ಜಾಱಿಸೇಱು || ೨೫
ಯತಿಧರ್ಮದೊಳು ನಡೆದವರಿಗೆಲ್ಲರಿಗೆ ಸ | ದ್ಗತಿಯುಂಟಾದೊಡೆ ಮೊದಲು ||
ಲಕ್ಷೆತರುಪರ್ವತಗಳುಮಾಲೋಕದೊ । ಳತಿಶಯಗತಿಯ ಪಡೆವುವು || ೨೬
ತವಕಂಬಡುವ ಹಂಗಿಲ್ಲ ಪರರಿಗುಪ|ದ್ರವ ಮಾಡುವ ನೆನಹಿಲ್ಲ ||
ಅವರಿವರೊಳು ನುಡಿಯಿಲ್ಲವೊಂದುಗೆಯಿಲ್ಲ | ಯಿವು ನಿತ್ಯಸನ್ಯಾಸಿಗಳು || ೨೭
ತಾನು ಮಾಡಿದ ಕರ್ಮವನ್ನೈಸೆ ಜಗದೊಳು | ತಾನಿಲ್ಲಿಯಲ್ಲಭೋಗಿಪುದು ||
ತಾನೊಂದುಕರ್ಮವನೆಸಗದಿರ್ದವನಿಗಿ । ನ್ನೇನು ಸದ್ಗತಿ ಸವನಿಪುದು || ೨೮

—ಇಂತು ಏಕಾದಶ ಸಂಧಿ—

## ೧೨ ನೆಯ ಸಂಧಿ

ಪಿರಿಯಣ್ಣನೊಳು ಭೀಮವಚನ ಬಧಿರನೀತಿ | ಸರಣಿಯಿಂದವನನುಸರಿಸೆ ||
ಭರದೊಳರ್ಜುನನೊಂದು ಕಥೆಯ ಪೇಳ್ದವನೆದೆ | ಗರಗಿಸಲೆಳಸಿ ನುಡಿದನು || ೧
ಅರಸ ಕೇಳೀವಿಷಯದೊಳೊಂದು ಕಥೆಯುಂಟು|ಪಿರಿಯರಿಂದಾನು ಕೇಳಿಹೆನು||
ಸುರಪತಿ ವಿಪ್ರಸಂವಾದವೆನಿಪುದದ | ಱರವ ಬಿತ್ತರಿಸಿ ಪೇಳುವೆನು || ೨
ಇಳೆಯೊಳು ಕೆಲರು ವಿಪ್ರರು ಮೊಗದೊಳು ಮೀಸೆ|ಮೊಳೆಯದ ಮೊದಲೆಪರಕ್ತಿ||
ಬಳಿದು ಸಂಸಾರವನುೞಿದು ಸನ್ಯಾಸವ । ತಳೆದಡವಿಯನೈದುವರು || ೩
ಮೊದಲೆಸಗುವ ಪಿತೃದೇವಕಾರ್ಯವ ತೊಱೆ | ದಿದೆ ಮುಖ್ಯಧರ್ಮವೆಂದೆಣಿಸಿ ||
ಪದಗೆಟ್ಟು ಪರಿವ ಪಾರ್ವರ ಕಂಡಿಂದ್ರನಂ । ದೆದೆಯೊಳುದಯಿಪ ತಾಳಿದನು || ೪
ಒಱೆಕಿಂದ್ರನೊಂದು ಚಿನ್ನದ ಪಕ್ಷಿಯರೂಪು|ದಳೆದು ವಿಪ್ರರ ಮುಂದೆ[illegible]ಳದು||
ಇಳೆಯೊಳು ವಿಘಸಾಶಿಗಳ ಧರ್ಮ ಮನುಜರು । ಗಳಿಗೆ ದುಷ್ಕರವೆಂದಾಡಿದನು ||

ಅವರ ಗೆಯ್ಮೆಗಳೆಲ್ಲವು ಧರ್ಮಸಾಧನ | ವವರ ಜೀವನವೈಸೆ ಸಫಲ ||
ಅವರ ಕರ್ಮಗಳಿಂದೆ ಸಿದ್ಧಿವಡೆದು ಲೋ|ಕವನೆಲ್ಲವನು ಗೆಲಿದಿಹರು || ೬
ಈವಾರ್ತೆಗೇಳಿ ಹೆಕ್ಕಳಗೊಂಡು ತಮ್ಮೊಳು| ತಾವು ಮೊಗವ ನೋಡಿಕೊಳುತ||
ಅವ್ವೈಸೆ ವಿಘಸಾಶಿಗಳೆಮ್ಮನಿದು ನುತಿ | ಗೈವುದೆಂದವರು ನುಡಿದರು || ೭
ಎಂದು ನುಡಿದ ಮುನಿಜನದ ಮಾತನು ಕೇಳಿ | ಯಂದವರೆದೆಯೊಳು ಬಳೆದ ||
ಮಂದಮತಿಯು ತೊಲಗಿಸಲವರೊಡನಿಂ | ತೆಂದಾಶಕ್ರನುಡಿದನು || ೮
ಹೇಸದೆಂಜಲನುಂಡು ಕೆಸರು ಧೂಳಿಗಳಿಂದೆ | ಮಾಸಿದೊಡಲ ಮಂದಮತಿಯ||
ಈಸಲ್ಲದ ನಿಮ್ಮನೆಣಿಕೆಗೆಯ್ಯಲು ವಿಘ | ಸಾಶಿಗಳವರು ಬೇರೆ'ಹರು || ೯
ಈಪೊಸವಾತುಗಳನು ಕೇಳಿ ಧರ್ಮವಿ | ದೀಪರಿಯೆಂದು ತಿಳಿಯದೆ ||
ತಾಪಸರುಗಳಂದು ತವಕಗೊಳುತೆ ಮ | ತ್ತಾಪಕ್ಕಿಯುನೆ ಕೇಳಿದರು || ೧೦
ಕರುಣಿಸು ಪಕ್ಕಿಗಳರಸ ಸನ್ಯಾಸವೆ | ಪಿರಿದೆಂದಾವೆಣಿಸಿಹೆವು ||
ಪಿರಿದಾವುದು ನಿನ್ನ ಮತದೊಳೆಮಗೆ ಪೇಳು|ಪರಮಾರ್ಥವೆಂದು ನಂಬುವೆವು || ೧೧
ಎನೆ ಕೇಳಿ ನೀವು ನಾವೆಂಬ ವಿಭೇದದಿಂ |ಮನನೊಂದೆನ್ನನಿಂದಿಸದೆ ||
ಅನುಗೂಡಿ ಕೇಳಿದೊಡುಸಿರುವೆನೆಂದು ಮು | ಸುನಿವಕ್ಕಿಯಂದು ನುಡಿದುದು || ೧೨
ಈನುಡಿಗೇಳಿ ವಿಪ್ರರು ಪೊಸವಕ್ಕಿಯ | ನಾಡಾಡಿ ಹಕ್ಕಿಯಲ್ಲೆಂದು ||
ಮಾನಸದೊಳು ನಿಶ್ಚೈಸಿ ಬಳಿಕ ಬಹು | ಮಾನದೊಳಿಂತು ನುಡಿದರು || ೧೩
ನೀನುಪದೇಶವಿತ್ತುದನಾಲಿಪೆವಿಲ್ಲೀ | ನೀನಱಿಯದ ದಾರಿಯಿಲ್ಲ |
ನೀನು ಬೆಸಸಿದಂತೆ ನಡೆವೆವೆನಲು ಪಕ್ಕಿ | ಮುನಿಜವನು ಬಿತ್ತರಿಸಿತು || ೧೪

† ... ... ... ... ... ...

---

† ಇಲ್ಲಿಂದ ಮುಂದಕ್ಕೆ ಗ್ರಂಥಪಾತ. ಕಥಾಸಂಗತಿಯನ್ನು ನೋಡಿದರೆ ಇನ್ನೈದಾರು ಸಂಧಿಗಳು ಇರಬಹುದೆಂದು ತೋರುತ್ತದೆ. ಬಿಟ್ಟುಹೋದ ಭಾಗದ ಕಥೆಯು ಮಹಾಭಾರತದ ಶಾಂತಿಪರ್ವದ ರಾಜಧರ್ಮದ ಆದಿಭಾಗದಲ್ಲಿ ಇದೆ.

# ಟಿಪ್ಪಣಿ.

## ಸಂಧಿ ೧.

ಪದ್ಯ ೧ ಶ್ರೀಶ–ಲಕ್ಷ್ಮೀಪತಿಯಾದ ವಿಷ್ಣು, ಚರಾಚರಶೇಷ–ಸ್ಥಾವರಪದಾರ್ಥಗಳೂ, ಜಂಗಮಪದಾರ್ಥಗಳೂ ಯಾವನ ಆಧಾರದಿಂದ ನಿಂತಿರುವುವೋ, ಅಥವಾ ಸತ್ತೆಯನ್ನು ಹೊಂದಿವೆಯೋ ಅಂಥ; ಈಶ–ರುದ್ರನೇ ಮೊದಲಾದ ದೇವತೆಗಳಿಂದ ನಮಸ್ಕರಿಸಲ್ಪಟ್ಟ ಪಾದವುಳ್ಳಂಥ, ಪಶ್ಚಿಮರಂಗ–ಶ್ರೀರಂಗಪಟ್ಟಣಕ್ಕೆ, ಈಶ–ಸ್ವಾಮಿಯಾದ, ರಂಗನಾಥಸ್ವಾಮಿಯು. ಈ ಗ್ರಂಥಕರ್ತನ ಕಾಲದಲ್ಲಿ ಶ್ರೀರಂಗಪಟ್ಟಣವು ರಾಜಧಾನಿಯಾಗಿತ್ತು. ಆದ್ದರಿಂದ ರಂಗನಾಥನನ್ನು ಸ್ತುತಿಸಿದ್ದಾನೆ.

೨ ಸಿರಿರಾಣಿ–ಲಕ್ಷ್ಮಿಗೆ, ಅರಸ–ವಲ್ಲಭನಾಗಿಯೂ, ಚಿತ್–ಆತ್ಮಗಳು ಅಚಿತ್–ಆತ್ಮವಲ್ಲದ ಇತರವಸ್ತುಗಳು, ಇವುಗಳಿಗೆ ಅಧೀಶ–ಸ್ವಾಮಿಯಾದ, ನಿರುಪಾಧಿ–ಎಲ್ಲೆಯಿಲ್ಲದ, ಗಣನೆಗೆ ಮೀರಿರುವ, ಸದ್ಗುಣ–ಕಲ್ಯಾಣಗುಣಗಳಿಗೆ, ನಿಧಿಯು––ನಿಕ್ಷೇಪದಹಾಗಿರುವ. ಶರಣು––ರಕ್ಷಕವು, ನಮ್ಮನ್ನು ಕಾಪಾಡತಕ್ಕದು.

೩ ವಿಭವೋದಾರನ–ಹೆಚ್ಚಾದ ಮಹಿಮೆಗಳುಳ್ಳಂಥ, ಭೂರಿತೇಜನ–ಹೆಚ್ಚಾದ ಪ್ರಕಾಶ, ಅಥವಾ ಮಹಾತೇಜದಿಂದ ಯುಕ್ತನಾದ,

೪ ಶರಣಾಗತ ವತ್ಸಲನ–ಪಾದವನ್ನು ಹಿಡಿದವರಲ್ಲಿ ವಾತ್ಸಲ್ಯವನ್ನು ಇಟ್ಟಿರುವ, ಆಪನ್ನಪರಿಪಾಲನ–ಆಪತ್ತಿಗೆ ಒಳಗಾದ ಪ್ರಹ್ಲಾದನೇ ಮೊದಲಾದ ಭಕ್ತರನ್ನು ಕಾಪಾಡುವಂಥ, ತತ್ಪರನ–ಅಂಥ ಆಪನ್ನರ ವಿಷಯದಲ್ಲಿಯೇ ನಿರತನಾದ, ಪರಿಪೂರ್ಣಕಾಮನ–ಹೊಂದಲ್ಪಟ್ಟ ಸಕಲ ಇಷ್ಟಾರ್ಥಗಳನ್ನುಳ್ಳ, (ಅವನಿಂದ ಅಪೇಕ್ಷಿಸಲ್ಪಡತಕ್ಕ ವಸ್ತುಗಳೇ ಇಲ್ಲವೆಂದು ಅರ್ಥ) ಭಕ್ತರ ಮಂದಾರನ–ಇಷ್ಟಾರ್ಥಗಳನ್ನು ಕೊಡುವುದರಲ್ಲಿ ಕಲ್ಪವೃಕ್ಷದೋಪಾದಿಯಲ್ಲಿರುವ. ಸಿರಿ–ತ್ಸ. ಶ್ರೀ

೫ ನಿರುಪಮ–ಉಪಮಾಶೂನ್ಯನಾದ, ಅಸದೃಶನಾದ. ನಿಸ್ಸೀಮ–ಎಲ್ಲೆಯಿಲ್ಲದ, ಯಾವುಗಳಿಗೆ? ನಿರಾತಂಕ–ಅಪಾಯಗಳ ಹೆದರಿಕೆಯಿಲ್ಲದ,

ಸರಸಿರುಹ--ಕಮಲದಹಾಗೆ ಸ್ಪೃಹಣೀಯವಾದ ಅಂಬಕ--ನೇತ್ರಗಳುಳ್ಳ.

೬ ಆದಿ ಮಧ್ಯ ಅಂತಗಳಿಲ್ಲದವನು ಎಂದರೆ ಸರ್ವಕಾಲದಲ್ಲಿಯೂ ಇರತಕ್ಕವನು, ನಿತ್ಯನು. ವಿಶ್ವಾತ್ಮಕ-ವಿಶ್ವ ಸಮಸ್ತವನ್ನು ತನ್ನಲ್ಲಿಟ್ಟುಕೊಂಡಿರುವವನು, ಅಥವಾ ಎಲ್ಲದರಲ್ಲಿಯೂ ಅಂತರ್ಯಾಮಿಯಾಗಿರತಕ್ಕವನು, ಎಂದರೆ ಎಲ್ಲಾದರಲ್ಲಿ ಅಂತರ್ಯಾಮಿಯಾಗಿದ್ದಾನೆ. ಮತ್ತು ಆತನಲ್ಲಿ ಎಲ್ಲವೂ ಇದೆ. ಇದರಿಂದ ಭಗವಂತನ ಅಂತರ್ವ್ಯಾಪ್ತಿ, ಬಹಿರ್ವ್ಯಾಪ್ತಿಗಳನ್ನು ಹೇಳಿದಂತಾಯಿತು.

೭ ಎದೆ-ಹೃದಯ, ಆಗಮಸೀಮೆ-ವೇದವೆಂಬ ರಾಜ್ಯದಲ್ಲಿ, ಅನುವೆತ್ತ-ಪ್ರಸಿದ್ಧವಾದ, ಬೆಲೆಹೊಂದುವ, ಹುರುಳು-ಸಾರವಾದ ವಸ್ತು.

೮ ಜಲಧಿಸುತೆ-ಲಕ್ಷ್ಮಿ; ಹೇಗೆ? ಲಕ್ಷ್ಮಿಯ ಮೆಯ್ಯ-ದೇಹದ, ಪೊಗರ-ಕಾಂತಿಯೆಂಬ, ಕುಂದಣದ-ಅಪರಂಜಿ ಚಿನ್ನದ, ಅದೊಂದುಕಳೆಯೊಳ್-ವರ್ಣಿಸಲು ಆಗದ ಒಂದು ವಿಧವಾದ ಕಾಂತಿಯಿಂದ, ಎಸೆವ-ಪ್ರಕಾಶಿಸುವ, ನೀಲಮಣಿಯ-ಪಚ್ಚೆಯ ರತ್ನವನ್ನು, ಪಲ...ತೊಂಡಲಂ-ಪಲನುಡಿ-ವೇದಗಳೆಂಬ, ಪೆಂಡಿರ-ಸ್ತ್ರೀಯರುಗಳ, ತೊಂಡಲಂ-ಬೈತಲೆಯಲ್ಲಿ ಧರಿಸಿಕೊಳ್ಳುವ ಆಭರಣವನ್ನು, ಎದೆಯೆಂಬ ಸ್ಫಟಿಕದ ಭರಣಿಯಲ್ಲಿ ಭದ್ರವಾಗಿ ಇಡುವೆನು. ಇದು ಪ್ರತಿಪದಾರ್ಥ.

ಈ ವರ್ಣನೆಯಲ್ಲಿ ಔಚಿತ್ಯವನ್ನು ಯೋಚಿಸಿನೋಡಿ. ಭಕ್ತರ ಪರಿಶುದ್ಧವಾದ ಹೃದಯವನ್ನು ಸ್ಫಟಿಕದ ಭರಣಿಯಂತೆ ವರ್ಣಿಸಿರುವುದೂ, ಮತ್ತು ಅದರಲ್ಲಿಡತಕ್ಕ ನಗವು ಎಷ್ಟು ಮನೋಹರವಾಗಿಯೂ, ಬೆಲೆಯುಳ್ಳದ್ದಾಗಿಯೂ ಇರಬೇಕು. ಭಗವಂತನ ಸ್ವರೂಪವನ್ನು ವೇದವೇದಾಂತಗಳಿಂದಲೇ ತಿಳಿಯಬೇಕಾಗಿರುವುದರಿಂದ ಎಂದರೆ ಆತನ ಸ್ವರೂಪಾದಿಗಳನ್ನು ನಮಗೆ ಚೆನ್ನಾಗಿ ತಿಳಿಸುವಂಥವು ವೇದಗಳೇ ಆಗಿರುವುದರಿಂದ ಭಗವಂತನನ್ನು ಪಳನುಡಿವೆಂಡಿರತೊಂಡಲೆಂದು ವರ್ಣಿಸುವುದೂ,-ಲಕ್ಷ್ಮಿಯನ್ನು 'ಹಿರಣ್ಯವರ್ಣೆ' ಎಂದು ವೇದಗಳು ವರ್ಣಿಸಿರುವುದರಿಂದ, ಅವಳ ಶರೀರದ ಕಾಂತಿಯನ್ನು ಕುಂದಣದ ಪೊಗರೆಂದು, ನೀಲಮೇಘದಂತೆ ಶ್ಯಾಮನಾದ ಹರಿಯನ್ನು ಕುಂದಣದಲ್ಲಿ ಇಟ್ಟ ನೀಲಮಣಿಯೆಂದು ವರ್ಣಿಸಿರುವುದೂ— ಇವು ಎಷ್ಟು ಮನೋಹರವಾಗಿಯೂ,

ಉಚಿತವಾಗಿಯೂ ಇವೆ! ಲಕ್ಷ್ಮೀವಿಶಿಷ್ಟನಾದ ನಾರಾಯಣನನ್ನು ಸದಾ ಧ್ಯಾನಿಸುವೆನು ಎಂದು ತಾತ್ಪರ್ಯಾರ್ಥ.

೯ ಪಳಜೋಗಿ–ಸನಕಾದಿ ಮಹರ್ಷಿಗಳು, ಇಂಬಣ್ಣು =(ಇನಿದು + ಪಣ್) ಮಧುರವಾದ ಹಣ್ಣನ್ನು, ಬಾಯದಿರ್–ಬಾಯಿಯಿಂದ, ಬಾಯಾರಿ, ಭವಾದ್ಯರು–ಈಶ್ವರನೇ ಮೊದಲಾದ ಸಮಸ್ತ ದೇವತೆಗಳು. ಅಮರ್ದು–ತ್ಸ, ಅಮೃತ, ಇಲ್ಲಿ 'ದು' ಶಿಥಿಲಾಕ್ಷರ. ಕವಳ–ತುತ್ತು.

ಇಲ್ಲಿ ಭಗವಂತನು ಮಹರ್ಷಿಗಳ ತಪಸ್ಸೆಂಬ ಕಲ್ಪವೃಕ್ಷದಲ್ಲಿ ಬಿಡುವ ಮಧುರಫಲವೆಂದೂ, ಮತ್ತು ಭವಾದಿ ದೇವತೆಗಳು ತಮ್ಮ ತಾಪ ಪರಿಹಾರಾರ್ಥವಾಗಿ ಎಂದರೆ ತಮಗೆ ಒದಗಿದ ಕಷ್ಟಗಳನ್ನು ನಿವಾರಣೆಮಾಡಿಕೊಳ್ಳಲು ಭುಂಜಿಸುವ ಅಮೃತದ ಕವಳವೆಂದೂ ವರ್ಣಿತನಾಗಿರುವನು. ಯಾವುದು ವೃಕ್ಷ, ಯಾವುದು ಹಣ್ಣು, ಯಾರು ಭುಜಿಸುವರು, ಏಕೆ ಹೀಗೆ ಇವು ವರ್ಣಿತವಾದುವು ? ಎಂಬುದನ್ನು ಪರ್ಯಾಲೋಚಿಸಿರಿ.

೧೦ ಇದು ವಟಪತ್ರಶಾಯಿಯಾದ ಹರಿಯ ವರ್ಣನೆ.
ಬಸಿಱ್–ಹೊಟ್ಟೆ. ಪಸರ–ಹಸರ. ಬಲ್ಲರ–ಜ್ಞಾನಿಗಳ. ಇಂಥ ಆಶ್ಚರ್ಯಕರವಾದ ವ್ಯಾಪಾರವನ್ನು ತೋರಿಸುವಂಥವನು ಮತ್ತೆ ಯಾರೂ ಇಲ್ಲವಾದ್ದರಿಂದ ಪೊಸಬಿಜ್ಜೆವಳ–ನೂತನ ವಿದ್ಯಾವಂತ. ಬಿಜ್ಜೆವಳ–ಇಲ್ಲಿ ವಳ ಎಂಬ ಪ್ರತ್ಯಯಕ್ಕೆ ಅರ್ಥವೇನು ?

೧೧ ಜಗತ್ತಿಗೆ ಹರಿಯೇ ಸರ್ವವಿಧ ಕಾರಣನೆಂದು ಇಲ್ಲಿ ನಿರೂಪಿಸಿದೆ. ಒಂದು ವಸ್ತುವಿಗೆ ಒಬ್ಬನು ಸ್ವಾಮಿ ಎನ್ನಿಸಿಕೊಳ್ಳಬೇಕಾದರೆ ಇಲ್ಲಿ ಹೇಳಿರುವ ವ್ಯಾಪಾರಗಳನ್ನು ನಡೆಸುವ ಸಾಮರ್ಥ್ಯವಿರಬೇಕು ; ಈ ವ್ಯಾಪಾರಗಳೆಲ್ಲವೂ ಹರಿಯಲ್ಲಿರುವುದರಿಂದ ಜಗತ್ಸ್ವಾಮಿತ್ವವನ್ನು ಈರೀತಿ ವರ್ಣಿಸಿದ್ದಾನೆ.

ಪ್ರಳಯಕಾಲದಲ್ಲಿ ಆತ್ಮಗಳನ್ನು ತನ್ನ ಉದರದಲ್ಲಿ ಇಟ್ಟುಕೊಂಡು, ಸೃಷ್ಟಿಕಾಲದಲ್ಲಿ ಅವನ್ನು ಹೊರಗೆ ಬಿಟ್ಟು, ಅವಕ್ಕೆ ಶರೀರಗಳನ್ನು ಕೊಟ್ಟು ಸೃಷ್ಟಿಸಿಯೂ, ಚರಾಚರಾತ್ಮಕವಾದ ಆ ಜಗತ್ತನ್ನು ತನ್ನದೆಂದು ತೋರಿಸಲು ತ್ರಿವಿಕ್ರಮಾವತಾರವನ್ನು ಎತ್ತಿ ತನ್ನ ಮೂರು ಹೆಜ್ಜೆಗಳಿಂದ

ಅದನ್ನು ಅಳಿದೂ, ಸೋಮಕಾಸುರಾದಿರಾಕ್ಷಸರಿಂದ ಅದಕ್ಕೆ ಸಂಭವಿಸಿದ ಕಷ್ಟಗಳನ್ನು ಅವತಾರಗಳನ್ನೆತ್ತಿ ಪರಿಹಾರಮಾಡಿ ಕಾಪಾಡಿದವನು ಹರಿಯೇ ಎಂದು ಕವಿ ನಿರೂಪಿಸುತ್ತಾನೆ.

೧೨ ಬಿಡದೆ ಕಾಡುವ ಬ್ರಹ್ಮೇತಿಯನ್ನು ಬಿಡಿಸಿ ಮೃಡನನ್ನೂ, ವೇದಗಳನ್ನೂ ತಂದಿತ್ತು ಬ್ರಹ್ಮನನ್ನೂ ಕಾಪಾಡಿದ ಹರಿ. ಇದರಿಂದ ಏನು ಹೇಳಿದ ಹಾಗಾಯಿತು ? ತಮ್ಮನ್ನು ತಾವು ಕಾಪಾಡಿಕೊಳ್ಳದೆ ಹೋದವರು ಸರ್ವಸ್ವಾತ್ಪರರು ಹೇಗಾದಾರು ಎಂದು ಕವಿಯ ತಾತ್ಪರ್ಯ.

ಬ್ರಹ್ಮನಿಗೂ ಐದುತಲೆ, ಈಶ್ವರನಿಗೂ ಐದು ತಲೆಗಳಿದ್ದವಂತೆ. ಒಂದುಕಾಲದಲ್ಲಿ ಇವರಿಬ್ಬರೂ ಸಭೆಯಲ್ಲಿದ್ದಾಗ ಪಾರ್ವತಿಯು ಬಂದು ಇವರಲ್ಲಿ ತನ್ನಪತಿ ಯಾರೋ ಎಂಬ ಸಂಶಯದಿಂದ ಸ್ವಲ್ಪಕಾಲ ನಿಲ್ಲಲು ಶಿವನಿಗೆ ಕೋಪಬಂದು ಬ್ರಹ್ಮನ ನಡುದಲೆಯನ್ನು ಚಿಗಟಲು ಆ ತಲೆಯು ಶಿವನ ಹಸ್ತವನ್ನು ಬಿಡದೆ ಹಿಡಿದುಕೊಂಡು ಅವನ ರಕ್ತವನ್ನು ಪಾನಮಾಡತೊಡಗಲು, ಈಶ್ವರನು ಕಾಪಾಲಿಯಾಗಿ ತಿರುಗಿ ತಿರುಗಿ ಬೇಸತ್ತು ವಿಷ್ಣುವನ್ನು ಶರಣುಹೊಗಲು, ವಿಷ್ಣುವು ತನ್ನ ಮೈಯ ಸೌಂದರ್ಯವನ್ನು ಅದಕ್ಕೆ ತೋರಿಸಿ ತನ್ನ ರಕ್ತವನ್ನು ಪಾನಮಾಡುವಂತೆ ಉಪಾಯಮಾಡಿ ಅದನ್ನು ಕೆಳಗೆ ಬೀಳಿಸಿ, ಈಶನನ್ನು ಕಾಪಾಡಿದನು ಎಂದು ಪುರಾಣಕಥೆ. ಸೋಮಕಾಸುರನು ವೇದಗಳನ್ನು ಕದ್ದುಕೊಂಡು ಹೋಗಲು ಬ್ರಹ್ಮನು ವೇದಜ್ಞಾನಶೂನ್ಯನಾಗಿ ಜಡನಾಗಿಹೋದನಂತೆ. ಆಗ ಹರಿಯು ಮತ್ಸ್ಯಾವತಾರವನ್ನು ಎತ್ತಿ ಆ ಸೋಮಕನನ್ನು ಸಂಹರಿಸಿ, ವೇದಗಳನ್ನು ತಂದಿತ್ತು ಬ್ರಹ್ಮನನ್ನು ಜ್ಞಾನಯುಕ್ತನನ್ನಾಗಿಮಾಡಿ ಕಾಪಾಡಿದನೆಂದು ಪೂರ್ವಕಥೆ.

೧೩ ಭಾವಿಸಿ–ಪಾದೋದಕವೆಂಬ ಗೌರವದಿಂದ. ತ್ರಿವಿಕ್ರಮಾವತಾರಮಾಡಿದ ಕಾಲದಲ್ಲಿ ಬ್ರಹ್ಮಾಂಡ ಕಟಾಹವನ್ನು ಭೇದಿಸಿಕೊಂಡು ಊರ್ಧ್ವಲೋಕಗಳನ್ನು ವ್ಯಾಪಿಸಿಕೊಂಡ ಹರಿಯ ಪಾದವನ್ನು ಚತುರ್ಮುಖಬ್ರಹ್ಮನು ಗಂಗೋದಕದಿಂದ ತೊಳೆಯಲು, ಆ ಗಂಗೋದಕವನ್ನು ಭಗೀರಥಮಹಾರಾಜನ ಪ್ರಾರ್ಥನೆಯಿಂದ ಶಿವನು ತನ್ನ ಜಟಾಜೂಟದಲ್ಲಿ ಧರಿಸಿ ಗಂಗಾಧರನಾದನೆಂದು ಪುರಾಣಕಥೆ.

೧೪ ಮುಂದುಗಾಣದೆ—ಮುಂದಿನ ಅನರ್ಥಗಳನ್ನು ಪರ್ಯಾಲೋಚಿಸದೆ, ವರ

ಗಳನ್ನು ಕೊಟ್ಟವರು ಬ್ರಹ್ಮ, ಶಿವ, ಇಂದ್ರ ಮುಂತಾದವರು. ಇವರಿಂದ ವರಗಳನ್ನು ಪಡೆದು ವರಗಳನ್ನು ದುಷ್ಪಾಲಿಸಿದವರಿಗೆ ಹಿಂಸೆ ಕೊಟ್ಟ ವರು ರಾವಣ, ತ್ರಿಪುರಾಸುರರು, ಭಸ್ಮಾಸುರ, ತಾರಕಾಸುರ ಮುಂತಾ ದವರು.

೧೫ ಇಲ್ಲಿ ಪುರುಷೋತ್ತಮ ಶಬ್ದಕ್ಕೆಒಂದು ನಿರುಕ್ತಿಯನ್ನು (Derivation) ಬರೆಯುತ್ತಾನೆ. ಕ್ಷರ–ವಿಕಾರ ಹೊಂದತಕ್ಕ ಪ್ರಕೃತಿ, ಅಕ್ಷರ–ವಿಕಾ ರವಿಲ್ಲದಂಥ ಆತ್ಮಗಳು. ಇಳಿಗೆಯ್ದು–ಕೆಳಗು ಮಾಡಿಕೊಂಡು ಅಧೀನ ದಲ್ಲಿ ಇಟ್ಟುಕೊಂಡು.

೧೬ ಮಿಶ್ರಸತ್ವ–ಸತ್ವಗುಣದೊಡನೆ ರಾಜಸ ತಾಮಸಗುಣಗಳ ಬೆರಕೆಯಿಂದ ಉಂಟಾದ ಸತ್ವ.

೧೭ ಗಜೇಂದ್ರಮೋಕ್ಷದ ಕಥೆಯು ಇಲ್ಲಿ ಸೂಚಿತವಾಗಿದೆ.

೧೮ ಅಣುಮಹದಂತರಾತ್ಮಕನು– " ಅಣೋರಣೀಯಾನ್ ಪ್ರಸತೋಮಹೀ ಯಾನ್ " ಎಂಬ ಶ್ರುತ್ಯರ್ಥ. ಅಚ್ಯುತನು–ಆಶ್ರಿತರನ್ನು ದುರ್ಮಾರ್ಗಕ್ಕೆ ಹೋಗಗೊಡಿಸದವನು. ಅನುಗನು–ಪ್ರೀತಿಪಾತ್ರನಾದ ಮಗು ; ಇಲ್ಲಿ ಪ್ರಹ್ಲಾದನು. ಅಯ್ಯನೊಳ್–ಹಿರಣ್ಯಾಕ್ಷನಲ್ಲಿ. ಇಲ್ಲಿ ಸರ್ವವ್ಯಾಪಕ ನಾದವನು. (Omnipresent) ಹರಿಯೇ ಎಂದು ಕವಿಯ ಆಶಯ.

೧೯ ಪಾರ್ಥಸಾರಥಿ–ಶ್ರೀಕೃಷ್ಣನು. ಇದರಿಂದ ಜಗದಾಧಾರನು ಹರಿಯೇ ಎಂದು ಹೇಳಿದಂತಾಯ್ತು.

೨೦ ಏಸಿರಿ–ಐಶ್ವರ್ಯ, ಬಿದಿ–ತ್ಸ, ವಿಧಿ, ಬ್ರಹ್ಮ. ಇಲ್ಲಿ ಪರಮಪುರುಷನೆಂದು ಹೇಗೆ ವರ್ಣಿಸಲ್ಪಟ್ಟಿತು ?

೨೧ ಇನಿದು + ಕಡಲ್–ಇಂಗಡಲ್, ಕ್ಷೀರಸಮುದ್ರ, ದೀವಿ–ತ್ಸ, ದ್ವೀಪ. ಅಂಶುಮಾಲಿ–ಸೂರ್ಯ. ಆಮ್ನಾಯ–ವೇದ.

೨೨ ಸಿರಿಪೊಡೆ–ಸ್ತೋತ್ರಾರ್ಹವಾದ ಉದರ, ಧರಿಸಿಪ–ಅಂತರಾತ್ಮನಾಗಿ ಧರಿಸಿರುವಂಥ. ಇಲ್ಲಿ ಕವಿಯ ಆಶಯವೇನು ?

೨೩ ತೆತ್ತಿಗ–ನಮ್ಮೊಡನೆ ಚೆನ್ನಾಗಿ ಸೇರಿಕೊಂಡಿರುವ ಸೇವಕನು. ಪುಗಲಿಡೆ–ಆಶ್ರಯ, ಸಕಲವಿಧದಲ್ಲಿಯೂ ಸಹಾಯಮಾಡುವವನು ಎಂದು ತಾತ್ಪರ್ಯ.

೨೪–೨೬ ಹರಿಯು ಸಮುದಾಯ ಶೋಭೆಯ ವರ್ಣನೆ.

ಕಾರ್ಮುಗಿಲ್-ವರ್ಷಾಕಾಲದಲ್ಲಿ ಕಂಗೊಳಿಸುವ ನೀರುಂಡಮೇಘ. ಬಾಲಾತಪ-ಎಳಬಿಸಿಲು, ಪೊಂಬಿಸಿಲು. ನೀಲನೀರದನಿಭ-ನೀಲಮೇಘಕ್ಕೆ ಸಮಾನವಾದ ಕಾಂತಿಯುಳ್ಳ. ಕಾಂಚನಚೇಲ-ಪೀತಾಂಬರಧಾರಿಯಾದ ವಿಷ್ಣು.

೨೭ ವನಮಾಲಿ-ವಿಷ್ಣು, ಇಲ್ಲಿ ಯಾವುದು ಯಾವುದಕ್ಕೆ ಹೋಲಿಸಲ್ಪಟ್ಟಿದೆ ?

೨೮ ಇಲ್ಲಿಂದ ಮುಂದಕ್ಕೆ ಹರಿಯ ಅವಯವಗಳ ವರ್ಣನೆ

ಬಗೆಯಂಚೆ-ಮನಸ್ಸೆಂಬ ಹಂಸವು, ಇಲ್ಲಿರುವ ರೂಪಕವನ್ನು ವಿವರಿಸಿರಿ ? ಹಂಸವು ತಾವರೆಗೊಳದಲ್ಲಿ ಇದ್ದುಕೊಂಡು ಸೊಂಪಾದ ತಾವರೆಯನ್ನು ನೋಡಿ ಪರವಶವಾಗಿ ಅದರ ಕಡೆ ಓಡುವುದು ಸಹಜ.

೨೯ ದಾಮಬಂಧ-ಉಡೆನೂಲು. ಬಣ್ಣಗವೆಳಗು-ಕೆಂಪು, ಹಸುರು, ಬಿಳಿವು ಮೊದಲಾದ ಬಣ್ಣಗಳ ಬೆಳಕೆ. ದುಗುಲ-ತ್ಸ. ದುಕೂಲ, ನವಿರುಬಟ್ಟೆ. ಸೋಲುತಿದೆ-ಪರವಶವಾಗುತ್ತಿದೆ.

೩೦ ತ್ರಿವಳಿಯ ವರ್ಣನೆ. ಒಳಗಿರ್ದ ಮೂಜಗ-ವಿರಾಟ್ಪುರುಷನ ಉದರದಲ್ಲಿದ್ದ ಮೂಜಗ. ತೆಳುವಸಿರ್-ಕೃಶವಾದ. ಸಣ್ಣಗಿರುವ ಉದರ. ಅಲರ್ದಾವರೆ-ಅಲರಾದ, ವಿಕಸಿತವಾದ ತಾವರೆ; ತಾವರೆ-ತ್ಸ. ತಾಮರಸ.

೩೧ ಒಳ್ಳಿತಾದ ಕಂಪು-ವಾಸನೆ = ಒಳುಗಂಪು. ತನಿತು + ಕಂಪು = ಹೆಚ್ಚಾದ ವಾಸನೆ. ಎದೆಯನ್ನು ದುಂಬಿಯಂತೆ ಏಕೆ ವರ್ಣಿಸಿದ್ದಾನೆ ? ಈ ಪದ್ಯದ ತಾತ್ಪರ್ಯವೇನು ?

೩೨. ಬಾನ್-ಆಕಾಶ, ದೇಸೆವಡೆದ-ಸೌಂದರ್ಯವನ್ನು ಪಡೆದ.

೩೩ ಭಗವಂತನ ಎದೆಯ ವರ್ಣನೆ. ಲಕ್ಷ್ಮಿಯು ನಾರಾಯಣನ ವಕ್ಷಸ್ಥಳದಲ್ಲಿ ಎಡೆಯಾಡುವುದರಿಂದ ಅವಳ ಪಾದಗಳಿಗೆ ಇಟ್ಟುಕೊಂಡಿದ್ದ ಅಲತಿಗೆ ರಸದ ಗುರುತುಗಳು ಅಲ್ಲಿವೆ ಎಂದು ತಿಳಿಯಬೇಕು. ಕೆಂಬರಲು = ಕೆಚ್ಚನೆ + ಪರಲು, ಕೆಂಪು ಮಣಿ, ಕೌಸ್ತುಭ.

೩೪ ಕರ್ವೆಳಗು-ನೀಲಮೇಘದಂತೆ ಇರುವವನ ಎದೆಯು ಕಪ್ಪಗೆ ಇರಬೇಕಲ್ಲವೆ. ತಿಳಿವು-ಜ್ಞಾನ; ಜ್ಞಾನವನ್ನು ಬೆಳ್ಳಗೆ ವರ್ಣಿಸುವುದು ಕವಿಗಳ ಪದ್ಧತಿ. ಎಡೆವಿಡದಿರ್ಕೆ-ಇದರ ತಾತ್ಪರ್ಯವೇನು ?

೩೫ ನಿಡುದೋಳಿನ, ದೀರ್ಘವಾದ ಬಾಹುವಿನ ವರ್ಣನೆ. ಪೊಗರಂ + ಉಗುವ = ಪೊಗರುಗುವ-ಹೊಳೆಯುತ್ತಿರುವ, ಇಂದ್ರನೀಲ-ಶ್ರೇಷ್ಠವಾದ ಪಚ್ಚೆ.

ಸಮೆದ–ಮಾಡಿದ, ಪೊಸಬಗೆಯ–ಒಂದು ಹೊಸಜಾತಿಯಾದ. ಆಲಾನ–ಆನೆಯನ್ನು ಕಟ್ಟುವ ಕಂಬ. ಬಗೆಯೆಂಬ ಆನೆಯನ್ನು ಬದ್ದಿಪೆನು–ಬಂಧಿಸುತ್ತೇನೆ, ಕಟ್ಟುತ್ತೇನೆ. ಯಾತಕ್ಕೋಸ್ಕರ ಹೇಳಿ ?

೩೬ ಭಗವಂತನ ದೃಷ್ಟಿಪಾತಗಳನ್ನು ಯಾವುದಕ್ಕೆ ಹೋಲಿಸಿದ್ದಾನೆ ? ಕಲ್ಲೋಲ–ಅಲೆ. ದುರಿತಧೂಳಿ–ಪಾಪಗಳೆಂಬ ಧೂಳನ್ನು ಕವಿಯು ೩೫ ರಲ್ಲಿ ಆತ್ಮವನ್ನು ಆನೆಯಂತೆ ವರ್ಣಿಸಿ, ಇಲ್ಲಿ ಪಾಪಪಗಳನ್ನು ಆನೆಯು ಸಹಜವಾಗಿ ತನ್ನ ತಲೆಯ ಮೇಲೆ ಎಸೆದುಕೊಳ್ಳುವ ಧೂಳುಗಳಂತೆ ವರ್ಣಿಸಿರುತ್ತಾನೆ. ನಾವು ನಮ್ಮ ಅಕೃತ್ಯಗಳಿಂದ ನಮ್ಮಷ್ಟಕ್ಕೆ ನಾವೇ ಸಂಪಾದಿಸಿಕೊಂಡ ಪಾಪಗಳನ್ನು ನಾವೇ ತೊಳೆದುಕೊಳ್ಳಲಾರೆವು, ಭಗವಂತನ ಕೃಪೆಯಿಂದಲೇ ಆ ಪಾಪಗಳು ತೊಳೆಯಲ್ಪಡಬೇಕೆಂಬುದೇ ಕವಿಯ ಆಶಯ.

೩೭ ಅರೆನೇಸರ್–ಅರ್ಧಚಂದ್ರ, ಸಿರಿಯ–ಕಾಂತಿಯನ್ನು.
ಕತ್ತುರಿಯನಾಮವನ್ನು ಯಾವುದಕ್ಕೆ ಹೋಲಿಸಿದ್ದಾನೆ ?

೩೮ ಕಿರೀಟದ ವರ್ಣನೆ. ಮೊಗವೆಂಬ ತಾವರೆ, ಗಗನಮಣಿ–ಸೂರ್ಯ, ಗಾಡಿವೆತ್ತ = ಗಾಡಿಯಂ–ಸೌಂದರ್ಯವನ್ನು + ಪೆತ್ತ, ಸುಂದರವಾದ. ಪದ್ಯದ ತಾತ್ಪರ್ಯವೇನು ? ಅದರ ಸೊಗಸನ್ನು ಯೋಚಿಸಿರಿ.

೩೯, ೪೦, ೪೧ ಹರಿಯ ಮುಖದ ವರ್ಣನೆ. ಕಳೆ–ಕಾಂತಿ ಸುಳಿಯುತಿರುವ ಕುರುಳು. ದರ–ಸ್ವಲ್ಪವಾಗಿ. ಪರೆದ–ಹರಿದ, ನೀಟವಾದ. ಮಕರಕುಂಡಲಗಂಡದ–ಮತ್ಸ್ಯದಂತೆ ಮಾಡಿರುವ ಕುಂಡಲಗಳು ಕೆನ್ನೆಯ ಮೇಲೆ ಬಿದ್ದಿವೆ

೪೨ ಪೆಂಪು–ಮಹತ್ವ, ಹಿರಿದು ಎಂಬುದರ ಭಾವನಾಮ.

೪೩ ಪಾರವಶ್ಯ–ಆನಂದದಲ್ಲಿ ಮುಳುಗಿಹೋಗುವಿಕೆ.

೪೪ ಇಲ್ಲಿಂದ ಮುಂದಕ್ಕೆ ಸಂಧಿಯ ಕೊನೆಯವರೆಗೂ ಲಕ್ಷ್ಮೀದೇವಿಯ ವರ್ಣನೆ. ಲಕ್ಷ್ಮಿಯು ತಾನು ಸ್ವಲ್ಪಹೊತ್ತು ಬೇರೆ ಇದ್ದುಕೊಂಡು ಅನ್ಯಮನಸ್ಕಳಾಗಿದ್ದರೆ ಪಾಪಿಷ್ಠರಾದ ತನ್ನ ಮಕ್ಕಳಾದ ಆತ್ಮರುಗಳನ್ನು ಸ್ವಾಮಿಯು ಎಲ್ಲಿ ದಂಡಿಸಿಬಿಡುವನೋ ಎಂಬ ಭಯದಿಂದ ಎದೆಯಲ್ಲಿಯೇ ಸದಾ ಇರುವಳೆಂದು ಉತ್ಪ್ರೇಕ್ಷಿಸಿ ಇದೆ. ಮನೆದೇವರು–ಪತ್ತಿರದಲ್ಲಿ ಇದ್ದುಕೊಂಡು ಕಾಪಾಡುವ ದೇವತೆ.

೪೫ ಶೃಂಗಾರದ ರೀತಿಯಲ್ಲಿ ಅನುರಕ್ತನಾಯಿಕೆಯ ವ್ಯಾಪಾರವನ್ನು ಲಕ್ಷ್ಮಿಯಲ್ಲಿ ಆರೋಪಿಸಿದ್ದಾನೆ.

೪೬ ತನ್ನ ಹತ್ತಿರ ಸಡಗರದಿಂದ ಅಂಬೆಗಾಲಿಡುತ ಅಥವಾ ಓಡಿ ಓಡಿ ಬರುವ ಬಾಲಕನಿಗೆ ಕುಡಿನೋಟದಿಂದ ಬೆಡಗು, ಬಿನ್ನಾಣ, ಚಮತ್ಕಾರಗಳನ್ನು ತೋರಿಸುವ ಪ್ರೇಮ ಪಾತ್ರಳಾದ ಮಾತೆಯಹಾಗೆ ಲಕ್ಷ್ಮಿದೇವಿಯನ್ನು ಕವಿಯು ಇಲ್ಲಿ ವರ್ಣಿಸಿರುತ್ತಾನೆ. ಅಡಿಯೂಳಿಗ-ಪಾದಸೇವೆ.

೪೭ ಕುಡುವುರ್ವು = ಕೊಂಕು + ಪುರ್ವು, ವಕ್ರವಾಗಿರುವ ಹುಬ್ಬು. ಕುಣಿಪು-ಹಾರಿಸುವಿಕೆ. ಲಕ್ಷ್ಮಿಯ ಕಟಾಕ್ಷಕ್ಕೆ ಪಾತ್ರನಾದವನು ಜಾಣನು, ಬಲ್ಲಿದನು, ಒಡೆಯನು ಆಗುವನು; ಪಾತ್ರನಾಗದೆ ಇದ್ದವನು ಜಡನು, ಬಡವನು, ಆಳು ಆಗುವನೆಂದು ಅಭಿಪ್ರಾಯ. ಆದ್ದರಿಂದ ನಾನು ಸಿರಿಯನ್ನು ಮರೆಹೊಕ್ಕೆನೆಂದು ಹೇಳುವನು.

೪೮ ಕೈತವ-ದುಷ್ಕಾರ್ಯ. ಧಾತುಪಱಿತು-ಸ್ವಭಾವವನ್ನು ಅರಿತು, ಮನಸ್ಸನ್ನು ತಿಳಿದು.

೪೯ ಲಕ್ಷ್ಮಿಯು ಪತಿಯಲ್ಲಿರತಕ್ಕ ಸ್ವಾತಂತ್ರ್ಯದಿಂದ ಆಡುವ ಸರಸೋಕ್ತಿಯು. ಕಂದು-ಕಾಲುಷ್ಯ. ಕನಲಿ-ಕೋಪಿಸಿ.

೫೦ ಹರಿಯೇ ಪರತತ್ತ್ವವು. ಎಲ್ಲಾದಕ್ಕಿಂತಲೂ ಮೇಲಾದ (ಕಾರಣವಾದ) ತತ್ತ್ವವು ಎಂದು, ಪಲವು-ಅನೇಕ, ವೇದಾಂತದ ನೆರವಿ-ಉಪನಿಷದ್ವಾಕ್ಯಸಮೂಹವು, ನೆಲೆಗಾಣ್ಬುದ-ನೆಲೆಯೆಂದು ನಿರ್ಧರಿಸಿದ ವಿಷಯವನ್ನು, ಆವಳ-ಯಾವ ಲಕ್ಷ್ಮೀದೇವಿಯ ಅಲತೆಗೆ ಗುಱುಹು-ಪಾದಚಿಹ್ನವು, (೨೩ ನೆಯ ಪದ್ಯವನ್ನು ನೋಡಿ) ಕೊನೆಗೆ, ಒರೆದುದೋ-ನಿರ್ಧರವಾಗಿ ಹೇಳಿತೋ, ಅಂಥ ಪರಮಪಾವನೆಯಾದವಳಿಗೆ, ನಮಸ್ಕಾರ ಮಾಡುವೆನು.

ಲಕ್ಷ್ಮೀಪತಿಯಾದವನೇ ಪರಬ್ರಹ್ಮವೆಂದು ವೇದವೇದಾಂತ ಶಾಸ್ತ್ರಗ್ಳಿರುವದನ್ನು ನೋಡಿ ಕವಿಯು ಈ ರೀತಿಯಲ್ಲಿ ವರ್ಣಿಸಿರುವನು.

"ವೇದಾಂತಾಸ್ತತ್ತ್ವಚಿಂತಾ ಯತ್ಪಾದಚಿಹ್ನೈಸ್ತರಂತಿಂ" ಎಂಬ ಪ್ರಮಾಣದ ಪರಿವರ್ತನ.

## ೨ನೆಯ ಸಂಧಿ.

ಪದ್ಯ ೧ ಸಿರಿಯಡಿ-ಶ್ರೇಷ್ಠವಾದ ಪಾದ. ಆಹವ-ಯುದ್ಧ

೩ ಅನಿಬರುಂ-ಅಷ್ಟು ಜನರುಂ, ೪. ಜಸ-ದ್ಭ, ಯಶಸ್.

೬ ಸ್ನಾತಕರು-ಸ್ನಾತಕವ್ರತವನ್ನು ಆಚರಿಸುವವರು.

೭ ಅವನತಿ-ನಮಸ್ಕಾರ, ಪವಣುವಿಡಿದು-ಕ್ರಮಪ್ರಕಾರ, ಪವಣು-ತ್ಸ, ಪ್ರಮಾಣ.

೮ ಪುಂಗವ-ಶ್ರೇಷ್ಠ ; ಈ ಅರ್ಥ ಹೇಗೆ ಬಂತು ?

೯ ಇಳಿಪು-ತಗ್ಗಿಸು. ಎಳಸು-ಆಸೆಪಡುವುದು. ಅರಯ್ದು-ಹುಡುಕಿ, ಪರೀಕ್ಷಿಸಿ.

೧೦ ಅನು-ಕ್ರಮ, ರೀತಿ. ಅಱುಹು-ಹಳಗನ್ನಡರೂಪ ಅಱಿವು.

೧೪ ಪಣ್ಣಿದ-ಮಾಡಿದ, ಕೈಬಸ-ಬಸ, ತ್ಸ ವಶ.

೧೮ ಏಸೆ-ಅಲ್ಲವೆ ?

೧೯ ಅತ್ತಣಿಂ-ಪಂಚಮೀವಿಭಕ್ತಿ ಪ್ರತ್ಯಯ. ಗಾಬುಬು-ದುಃಖಿಸು.

೨೦ ಇಮ್ಮಡಿ-ಎರಡು + ಮಡಿ, ಸಲ

೨೨ ವಿಡಂಬಿಪ-ತಿರಸ್ಕರಿಸುವ.

೨೩ ಐವಾಯಸಿಂಗ-ದೊಡ್ಡ ಬಾಯುಳ್ಳ ಸಿಂಹ. ಸಂಸ್ಕೃತದಲ್ಲಿ ಸಿಂಹ ಶಬ್ದಕ್ಕೆ ಪರ್ಯಾಯವಾದ 'ಪಂಚಾಸ್ಯ' ಎಂಬುದರ ವ್ಯುತ್ಪತ್ತಿಯನ್ನು ಪರ್ಯಾಲೋಚಿಸದೆ "ಐವಾಯ" ಎಂಬ ರೂಪವು ಹುಟ್ಟಿದಂತೆ ಕಾಣುತ್ತದೆ ಇಲ್ಲಿ "ಪಚವಿಸ್ತಾರೇ" ಎಂಬ ಧಾತುವಿನಿಂದ ಹುಟ್ಟಿದ ವಿಸ್ತಾರವಾದ ಎಂಬ ಅರ್ಥವುಳ್ಳ ಪಂಚ ಶಬ್ದಕ್ಕೆ ಐದು ಎಂದು ಅರ್ಥಮಾಡಿಕೊಂಡು ಐದು + ಬಾಯು (ಆಸ್ಯ) ವುಳ್ಳದ್ದು 'ಐವಾಯ' ಎಂಬ ಶಬ್ದವನ್ನು ಕಲ್ಪಿಸಿರಬಹುದು. ಅಂಕಕಾಱ-ಯುದ್ಧವೀರನು ; ಇಲ್ಲಿ ಅಂಕ, ಯುದ್ಧ. ಅಂಕಶಬ್ದಕ್ಕೆ ಇನ್ನು ಯಾವಯಾವ ಅರ್ಥಗಳುಂಟು ?

೨೪ ಮೊನೆಗಾಱ-ಇಲ್ಲಿ ಮೊನೆ ಎಂದರೆ ಯುದ್ಧ.

೨೫ ಬಲುಗೈದುಗಾಱ-ಕೈದು, ಆಯುಧ. ಅಱಿಯುಟ್ಟುವನು-ಕಲ್ಲುಹೊಡೆದು ಓಡಿಸುವವನು ; ಸೋಲಿಸುವವನು ಎಂದರ್ಥ.

೨೭ ಕೋರಿತನ-ಕೋರಿ ತ್ಸ. ಕುಮಾರಿ.

೨೮ ಅಲಗು-ಕತ್ತಿ, ಇಲ್ಲಿ ಯುದ್ಧ. ಬಸವಳಿ-ವಶತಪ್ಪಿ, ಧೈರ್ಯಗೆಟ್ಟು.

೩೦ ಪೊಡವಿ-ತ್ಸ ಪೃಥಿವಿ. ಅರಳೆ-ಹತ್ತಿ

೩೨ ಬವರ-ಯುದ್ಧ.

೩೮ ಕೊಳುಗುಳ-ಯುದ್ಧ.

೩೯ ಬಿನ್ನವಿಸು-ವಿಜ್ಞಾಪಿಸು.

೪೨ ಮುಗುಳ್–ತಿರುಗಿ, ಪುನಃ.

೪೬ ಪಾಕಶಾಸನ–ಇಂದ್ರ. ಪಾಸಟಿ–ಸಮ.

೪೭ ತಿಳಿವುದು–ಶಾಂತವಾಗುವುದು. ನೀರು ತಿಳಿಯಿತು ಎಂಬುದರೊಡನೆ ಹೋಲಿಸಿ.

೪೯ ಕಾಕತಾಳವ ಕಲ್ಪಿಸುವೆನು–ಕಾಕತಾಳ ನ್ಯಾಯದಿಂದ ಎಂದರೆ, ಹೇಗೋ ಎಂತೋ ಆಗಿರಬಹುದೆಂದು ಯೋಚಿಸುವೆನು. ಒಂದು ಕಾಗೆಯು ಒಂದು ತಾಳೆಯ ಮರದಮೇಲೆ ಕೂರುವುದಕ್ಕೆ ಸರಿಯಾಗಿ ಆ ಮರದ ಒಂದು ಹಣ್ಣು ಕೆಳಗೆಬಿದ್ದರೆ, ಕಾಗೆಯು ಕುಳಿತುಕೊಂಡಿದ್ದರಿಂದ ಆ ಹಣ್ಣು ಬಿತ್ತೆಂದು ತಿಳಿಯುತ್ತೇವೆ. ಎಂದರೆ ಹಣ್ಣು ತೊಟ್ಟಿನಿಂದ ಕಳಚಿ ಬೀಳುವುದಕ್ಕೆ ಕಾಗೆಯು ಕುಳಿತುಕೊಳ್ಳುವಿಕೆಯೇ ಕಾರಣವೆಂದು ಊಹಿಸುತ್ತೇವೆ. ತೊಟ್ಟಿನಿಂದ ಕಳಚಿಕೊಂಡು ಜಾರಿದ್ದು ಹಣ್ಣು ಕೆಳಗೆಬೀಳುವುದಕ್ಕೆ ನಿಜವಾದ ಕಾರಣವಾಗಿದ್ದರೂ ಕಾಗೆ ಕೂರುವುದರಲ್ಲಿ ಆ ಕಾರಣವನ್ನು ಆರೋಪಿಸುವುದು ಕಾಕತಾಳ ನ್ಯಾಯ.

೫೦ ಸಾಹಸಾಂಕ–ಇಲ್ಲಿ ಅಂಕ ಶಬ್ದಕ್ಕೆ ಗುರುತು ಎಂದರ್ಥ. ಹದನ–ಕ್ರಮ ರೀತಿ, ಅನು.

೫೧ ಅಂಗೈಯನೆಲ್ಲಿಕಾಯಂದದಿ–ಅಂಗೈಯಲ್ಲಿಯ ನೆಲ್ಲಿಯ ಕಾಯಿಯ ರೂಪ ಗಾತ್ರ, ತೂಕ ಮುಂತಾದುವು ಹೇಗೆ ಸ್ಪಷ್ಟವಾಗಿ ತಿಳಿಯಬರುತ್ತವೋ ಹಾಗೆ ಸ್ಪಷ್ಟವಾಗಿ, ಎಂಬ ಅರ್ಥವನ್ನು ತಿಳಿಸುವುದಕ್ಕೆ ದ್ರಾವಿಡಭಾಷೆಗಳಲ್ಲಿ ಈ ವಾಕ್ಯವು ರೂಢಿಯಲ್ಲಿದೆ.

## ೩ ನೆಯ ಸಂಧಿ.

೨ ಚಿತ್ತವಿಸು–ಚಿತ್ತ + ಇಸು–ಮನಸ್ಸಿಗೆ ತೆಗೆದುಕೋ ಪುರುಳು–ಸಾರ. ಪರಿಕಿಪೊಡೆ–ಪರೀಕ್ಷಿಸಿದರೆ : ಇಲ್ಲಿ ಧಾತು ಯಾವುದು ? ಆಜಿ–ಯುದ್ಧ.

೫ ಪಚಾರಿವುದು–ನಿಂದಿಸುವುದು. ಅಳವಳಿದು–ಅಳವಂ–ಅಳತೆ, ಸಾಮರ್ಥ್ಯವನ್ನು + ಅಳಿದು–ಕಳೆದುಕೊಂಡು.

೭ ಅಣುಗ–ಪ್ರಿಯಪುತ್ರ; ಅಣುಗಂ–ಪ್ರೀತಿಯನ್ನು ಉಳ್ಳವನು, ಪ್ರಿಯಪುತ್ರ. ಎಣೆಗೂಡಿ–ಜತೆಯಾಗಿ. ಕಣೆ–ಬಾಣ. ಎಸುಗೆ–ಪ್ರಯೋಗ, ಧಾ. ಇಸು.

೯ ನೇಹ–ತ್ಸ. ಸ್ನೇಹ. ಕೊರಗು–ಊಳುಬಿಡುವುದು, ದುಃಖಿಸುವುದು.

೧೦ ಪವಣಿಸಿ–ಮಾಡಿ.

೧೨ ಬಿಲ್ಲೋಜ–ಬಿಲ್ಲುವಿದ್ಯೆಗೆ ಓಜ–ಗುರು ; ಇಲ್ಲಿ ದ್ರೋಣ.

೧೭ ಮಾನಧನ–ಮಾನ. ಸ್ವಾವಲಂಬನ ರೂಪವಾದ ಧೈರ್ಯವೇ ಧನ–ಸರ್ವಸ್ವವಾಗಿ ಉಳ್ಳವನು. ಈ ವಿಶೇಷಣದ ಔಚಿತ್ಯವನ್ನು ಯೋಚಿಸಿರಿ.

೧೮ ಪಾರ್ವ—ವೇದವನ್ನು ನೋಡುವವನು ; ವೇದವನ್ನು ಓದುವುದು ಬ್ರಾಹ್ಮಣರಿಗೆ ಸೇರಿದ್ದರಿಂದ, ಬ್ರಾಹ್ಮಣನೆಂದರ್ಥ. ಹೊಸಗನ್ನಡರೂಪ-ಹಾರುವ, ಅರವಿನಲ್ಲಿ ಪಾಪಾರ್ ಎಂಬ ರೂಪವಿದೆ. ಅಳುಕು-ಹೆದರು.

೧೯ ಬೆಸುಗೆ-ಸಮ್ಮಂಧ, ಧಾ ಬಿಸು-ಲೋಹಸಂಧಾನೇ, ಒಂದು ಲೋಹದ ತುಂಡನ್ನು ಮತ್ತೊಂದು ತುಂಡಿಗೆ ಬೆಸಿದರೆ ಹೇಗೋ, ಅಂಥ ಸಮ್ಮಂಧ.

೨೦ ಗೆಲ್ಲ-ಜಯ. ನೆರವಿ-ಸಮುದಾಯ, ಗುಂಪು. ನೆರವು-ಸಹಾಯ.

೨೩ ಕೈಮೆ-ಚಳಕ.

೨೪ ಏದಾರಿ-ಏನುಮಾರ್ಗ, ಏನುಗತಿ. ಮಡುಹು-ಸಾಯಿಸು.

೨೬ ಕಲ್ಪಕಾಲಾನಲ-ಪ್ರಳಯಕಾಲದ ಬೆಂಕಿ. ಬೀಱುಸಾಪ-ಕೆಟ್ಟಶಾಪ.

೨೯ ಕುಲಲಿ-ಕುಲವಿಲ್ಲದವನು, ಕುಲಗೇಡಿ. ಬಹುವ್ರೀಹಿ ಸಮಾಸದ ಕೊನೆಯಲ್ಲಿ ಇಲ್ಲ ಎಂಬುದು ಇಲ ಎಂದಾಗುತ್ತದೆ.

೩೧ ಉಂಬೞಿ-ಬಹುಮಾನವಾಗಿ ಕೊಡುವ ಪದಾರ್ಥಗಳು.

## ೪ ನೆಯ ಸಂಧಿ.

೨ ಕಮಲಬಾಂಧವನ ಕಂದ-ಕರ್ಣ, ಹೇಗೆ? ಕಮಲಭವ-ಬ್ರಹ್ಮ, ಹೇಗೆ ?

೫ ತೆಂಬೆಲರ್-ತೆಂಕಣ (ದಕ್ಷಿಣದಿಕ್ಕಿನ) + ಎಲರ್-ಗಾಳಿ = ತೆಂಕ + ಎಲರ್. ಇಲ್ಲಿ 'ಕ' ಲೋಪಿಸಿ, ಉಚಿತವಾದ ಬಕಾರವು ಆಗಮವಾಗಿದೆ.

೫ ಇಂಬು-ಅವಕಾಶ, ತೆರಹು.

೧೧ ಪಡಿಮೊಗ-ತ್ಸ ಪ್ರತಿಮುಖ.

೧೨ ಮೊನೆಗೋೞ್ತಿಯದ-ಮೊನೆಯಾದ ಕೋರೆಹಲ್ಲುಳ್ಳ.

೧೯ ಒಲ್ಮೆಯ-ಪ್ರೀತಿಪಾತ್ರಳಾದ.

೨೩ ಕಡುಗಿ-ಕೋಪಿಸಿಕೊಂಡು ೩೩ ಪರಿವಿಡಿದು-ಕಮಪ್ರಕಾರ.

## ೫ ನೆಯ ಸಂಧಿ.

೫ ದಳದುೞಿಗಾೞ-ದಳ-ಪರಸೈನ್ಯವನ್ನು ತುೞಿದು ಧ್ವಂಸಮಾಡುವುದರಲ್ಲಿ ಸಮರ್ಥನಾದ. ಅಳುವುಗೊಂಡು-ಅಳಿ ಎಂಬುದರ ಭಾವನಾಮ ಅಳವು, ಅಳವಂ ಕೊಂಡು ; ಇಲ್ಲಿ ಧೈರ್ಯದಿಂದ.

೬ ತೆತ್ತ-ತೆರು ಎಂಬುದರ ಭೂತಕೃದ್ವಾಚಿ, ಕ್ಲಿಪ್ತವಾದ. ಒತ್ತ-ಉತ್ತ ಎಂದಿರಬೇಕು. ಉಱು-ವ್ಯಾಪ್ತೌ ಎಂಬುದರ ಭೂತಕೃದ್ವಾಚಿ.

೯ ಕಡಿದು + ಬಣ್ಣ = ಕಡುವಣ್ಣ, ಹೆಚ್ಚಾದಬಣ್ಣ. ಮಿಡುಕು-ಪರಾಕ್ರಮ.

೧೬ ಮೈಜೋಡು-ಮೈಗೆ ಹಾಕಿಕೊಳ್ಳುವ ಕಬ್ಬಿಣದ ಅಂಗಿ.

೧೮ ಎಣೆಬೆಟ್ಟು-ಜೋಡಿಬೆಟ್ಟಗಳು.

೨೦ ಸರಳು-ಬಾಣ. ಶಕ್ತಿ-ಮಂತ್ರಪೂತವಾದ ಆಯುಧ. ಪೞ್-ಕತ್ತರಿಸು, ಪರಿ-ಓಡುವುದು.

೨೧ ಪಾಡು-ಸೇನೆ. ಇಂ-ಇನ್ನು. ಪಾಘೆ-ಕಡಿವಾಣ.
೨೨ ಜವೆ-ಯುವೆಯುಷ್ಟು. ಕೊಂಕದಂತೆ-ಅತ್ತಿತ್ತ ಚಲಿಸದಂತೆ.

## ೬ ನೆಯ ಸಂಧಿ.

೧ ಬಲ್ಲಹ-ತ್ಸ. ವಲ್ಲಭ. ೨. ಕುಂದು-ಕೊರತೆ, ಕಡಮೆ.
೪ ಖಂಡೆಯ-ಕತ್ತಿ. ಸೈಯನೆ-ಸೈ ಎಂಬದಾಗಿ ಒಪ್ಪುವಂತೆ.
೮ ಆಣತಿ-ತ್ಸ. ಆಜ್ಞಪ್ತಿ-ಅಪ್ಪಣೆ.

## ೭ ನೆಯ ಸಂಧಿ.

೩ ಪಾಳಿಗೆಟ್ಟವು-ಸರಿಯಾದ ಮಾರ್ಗವನ್ನು ಬಿಟ್ಟು ಚದರಿಹೋದವು. ಅಱಿ-ಪುಗ್ಗರಾಗಿ

೪ ಕಟ್ಟಸುರ-ಕಡು+ಕ್ರೂರವಾದ,+ಅಸುರ-ರಾಕ್ಷಸಕೃತ್ಯ; ಕ್ರೂರರಾದ ರಾಕ್ಷಸರಂತೆ: ಎಂದು ತಾತ್ಪರ್ಯ.

೭ ತರಹರ-ಸಹನೆ ೯ ಬಿಂಕ-ಗರ್ವ. ಕೆಱಿ-ಕತ್ತರಿಸು.
೧೦ ಪೆಣಗಳನ್ನು ತಿನ್ನತಕ್ಕ ನೀಚರು-ಪೆಣಾದಿಸಗಳು. ೧೩ ನೆರವು-ಗುಂಪು.
೧೪ ಮಿತ್ತು-ತ್ಸ. ಮೃತ್ಯು. ಕಾಲ-ಯಮ.
೨೦ ಪೋರಟೆ-ಹೊಸಗನ್ನಡ. ಹೋರಾಟ. ಉತ್ತರಿಸು-ಕೀರಿಸು
೨೬ ಅಱಿಜಸ-ಕ್ಷುದ್ರವಾದ, ನೀಚವಾದ ಯಶಸ್ಸು.
೨೮ ಏವೇಳುವೆನು-ಏನನ್ನು ಹೇಳುವೆನು ೩೧ ಉಜ್ಜುಗ-ತ್ಸ ಉದ್ಯೋಗ.
೩೨ ಬಣಿತೆ-ದ್ಭ. ಭ್ರಮಣ, ಕೋಟಲೆ ೩೩ ಅಂಕೆ-ಆಜ್ಞೆ.
೩೪ ಮುಪ್ಪುರ=ಮೂರು+ಪುರ ಮೂರು ಪುರಗಳನ್ನು ಹೊಸೆದಂತೆ ಬಲವಾದ.

೩೬ ಮನುಜಾಭಾಸ-ಗುಣಗಳನ್ನು ನೋಡುವಲ್ಲಿ ನಿಜವಾಗಿಯೂ ಮನುಷ್ಯನಲ್ಲ ; ಮನುಷ್ಯನಹಾಗೆ ಹೊರಗೆಮಾತ್ರ ತೋರಿಸಿಕೊಳ್ಳುವನು, ಒಳರೆ-ಉಂಟೆ ?

೪೦ ತಿಳಿದುದು-ಶಾಂತವಾಯಿತು, ಹೋಯಿತು; ಈ ಅರ್ಥ ಹೇಗೆ ಬಂತು ? ತಳುವದೆ-ಸಾವಕಾಶಮಾಡದೆ. ದಳ್ಳುರಿ=ದಳ್ಳಿತು-ವೇಗವಾದ+ಉರಿ.

೪೨ ಪುಟ್ಟುವೊಂದು-ಹುಟ್ಟುಸಾವು. ಮುಸುಕದು-ಮುಚ್ಚಿಕೊಳ್ಳದು. ಬೆಟ್ಟಿತಪ್ಪುದು-ಪೃಥವಾಗಿರುವುದು.

೪೩ ಸುಖದುಃಖ, ಶೀತಉಷ್ಣ ಇಂಥವುಗಳೇ ದ್ವಂದ್ವಗಳು.
೪೫ ನಾಡಾಡಿ-ನಾಡಿನಲ್ಲಿ ಆಡುವಂಥ ಎಂದರೆ ಸರ್ವಸಾಮಾನ್ಯವಾದ.
೪೬ ಬೇಸನ-ತ್ಸ, ವ್ಯಸನ, ಚಿಂತೆ, ತೊಡಕು. ೪೮. ಅಂಡಲೆಮ-ಪೀಡಿಸುವ.

## ೯ ನೆಯ ಸಂಧಿ.

೫. ಹಂದೆ–ಹೇಡಿ, ೬. ಉರಿಸಿಂಗಿ–ಎರಡುತಲೆಯುಳ್ಳ ವಿಷಜ್ವಾಲೆಯನ್ನು ಕಾರುವಹಾವು, ೮. ಕಾಪಾಲಿಕ–ತಲೆಬುರುಡೆಯನ್ನು ಹಿಡಿದು ತಿರಿದು ಜೀವಿಸುವವನು. ೯. ಉಱುವ–ಮುಖ್ಯವಾದ.

೧೧ ಅರಾಜಕ–ರಾಜನಿಲ್ಲದೆ ಇರುವ ಅನಾಯಕಸ್ಥಿತಿ.

೧೬ ಸಗ್ಗದಿರವು–ಸ್ವರ್ಗವಾಸವು.

೧೭ ತಲ್ಲಣ–ನಡುಕ. ತನಿತು–ಪಕ್ವವಾದ, ಪೂರ್ಣವಾದ ಬೇಸಗೆ.

೨೨ ಪೊನಲು–ನದಿ.

೩೦ ಅರ್ಥರು–ರಾಜರು, ೩೧ ಮುಗಿಲು–ಮೇಘ.

೩೨ ಕೆಳೆಗೊಂಡು–ಸ್ನೇಹಮಾಡಿ ೩೪ ಅವಭೃಥ–ಯಜ್ಞವಾದನಂತರ ಮಾಡು ವಸ್ನಾನ. ಕಾಪುರುಷರು–ಕುತ್ಸಿತರಾದ, ಕೆಟ್ಟವರಾದ ಪುರುಷರು.

## ೧೦ ನೆಯ ಸಂಧಿ.

೧ ವಿಜಯ–ಅರ್ಜುನನು, ೩ ಮಱುಕ–ದುಃಖ

೯ ಅಲರಿಡಿದ–ಅಲರ್ + ಇಡಿದ ಹೂಬಿಟ್ಟಿರುವ

೧೦ ತೋಟಿ–ಜನಗಳ ಹೋರಾಟ.

೧೧ ನೆರವು–ಸಹಾಯ. ಸರ–ಕೊಳ, ಸರಸ್ಸು.

೧೩ ಬೈಗು–ಸಂಧ್ಯಾಕಾಲ, ಸಂಜೆ. ೧೪ ತೋರ–ಹೆಚ್ಚಾಗಿ.

೨೩ ಒನಕೆವಾಡುಡುಗಿ–ಭತ್ತವನ್ನು ಒನಕೆಯಿಂದ ಕುಟ್ಟುವಾಗ ಶ್ರಮಕಾಣದಿರುವುದಕ್ಕೋಸ್ಕರ ಹಾಡುವ ಹಾಡು, ಉಡುಗಿ–ಅಡಗಿಹೋಗಿ, ಅಕ್ಕಿಯನ್ನು ಮಾಡಿ. ಉರಿಯುಡಗಿ–ಅಡಿಗೆಯಾದಮೇಲೆ ಮನೆಯಲ್ಲಿರುವವರೆಲ್ಲರೂ ಸುಖವಾಗಿ ಉಂಡು, ಬೇಡುವವರಿಗೆ ಭಿಕ್ಷೆಹಾಕಿದಮೇಲೆಯೂ, ಏನಾದರೂ ಮಿಕ್ಕಿದ್ದರೆ, ಅದನ್ನು ಯಾಚಿಸಿ ತೆಗೆದುಕೊಂಡರೆ ಮತ್ತೆ ಯಾರಿಗೂ ತೊಂದರೆ ಕೊಟ್ಟಂತೆ ಆಗುವುದಿಲ್ಲ: ಆದ್ದರಿಂದ ಅದನ್ನು ೭ ೫,೪,೩,೧ ಮನೆಗಳಲ್ಲಿ ಬೇಡಿ, ಮೊದಲನೆಯ ಮನೆಯಲ್ಲಿಯೇ ಬಿಕ್ಷೆಸಿಕ್ಕಿದರೆ ೨ ನೆಯ ಮನೆಗೆ ಹೋಗುವ ಗೋಜು ಇಲ್ಲ. ಅಲ್ಲಿಯೂ ಸಿಕ್ಕದಿದ್ದರೆ, ೩ ನೆಯ ಮನೆ ಅಲ್ಲಿಯೂ ಸಿಕ್ಕದೇ ಇದ್ದರೆ, ೪ ನೆಯ ಮನೆ, ಹೀಗೆ ೭ ಮನೆಯ ವರೆಗೂ ಬಿಕ್ಷೆ ಬೇಡುತ್ತ ಹೋಗುವುದು. ಅಲ್ಲಿಯೂ ಸಿಕ್ಕದಿದ್ದರೆ ಆ ಹೊತ್ತು ಉಪವಾಸ. ಈರೀತಿ ಮಾಡುವನೆಂದು ಧರ್ಮರಾಜನು ಹೇಳುವನು.

೨೫ ಅಣ್ಪು–ತೀಡ ಗಂಧ ೨೭. ಭವಭವದ–ಜನ್ಮಜನ್ಮದಲ್ಲಿ ಮಾಡಿದ.

೨೮ ಪಗ್ಗ–ಹಗ್ಗ, ತ್ಸ. ಪ್ರಗ್ರಹ

೩೩ ಮುಪ್ಪುಳು–ಮೂರು + ಪುಳು ; ಪುಳು–ಏಷದ ಬಳ್ಳಿ (?) ಅಟ್ಟುಳಿ–ಚೆನ್ನಾಗಿ ಹಿಸುಕಿದರೆ ಉಂಟಾಗುವ ನೋವು. ತಾನ–ತ್ಸ. ಸ್ಥಾನ.

೩೫ "ಅವಱಿಕೊಳಲ್ಪಫಲಬಯಸಿ ಕೆಳಗಿೞ| ವ ವಿವೇಕಕೇನೆಂಬೆನಕಟಾ|" ಎಂದು ಪಾಠವಿರಬೇಕೆಂದು ತೋರುತ್ತದೆ; ಈರೀತಿ ಮೂಲವಿದ್ದಲ್ಲಿ ಮಹಾಭಾರತದಲ್ಲಿರುವ ಪದ್ಯಕ್ಕೆ ಸಮಾನಾರ್ಥವನ್ನ ಕೊಡುತ್ತದೆ.

## ೧೧ ನೆಯ ಸಂಧಿ.

ಭಿಕ್ಷೋದನ-ಭಿಕ್ಷಾನ್ನ. ೯. ಸೂಡು-ಪ್ರತಿಜ್ಞೆ (?)

೧೭ ಗಂಡಂಗ = ಗಂಡಿನ ಅಂಗ-ಶರೀರ, ದೇಹ; ಪುರುಷಶರೀರ. ಬಱತ ವರು-ಒಣಗಿಹೋದವರು.

೧೯ ಐಸೆ-ಅವ್ಯಯ, ಅಲ್ಲವೆ! ೨೩. ನಿಗಮಾಂತ-ಉಪನಿಷತ್ತು.

೨೪ ಹವ್ಯ-ಯಜ್ಞಯಾಗಾದಿಗಳಲ್ಲಿ ದೇವತೆಗಳಿಗೆ ಅರ್ಪಿಸುವ ಹವಿಸ್ಸು. ಕವ್ಯ-ಶ್ರಾದ್ಧಾದಿಗಳಲ್ಲಿ ಪಿತೃಗಳಿಗೆ ಅರ್ಪಿಸುವ ಅನ್ನಾದಿ ಪದಾರ್ಥಗಳು. ಬಿಡುಗಣ್ಣರು-ರೆಪ್ಪೆಗಳಿಲ್ಲದೆ ಯಾವಾಗಲೂ ಬಿಟ್ಟೇಇರುವ ಕಣ್ಣುಳ್ಳ ವರು, ದೇವತೆಗಳು. ಬೀಡು-ಮನೆ.

೨೬-೭ ಇಲ್ಲಿ ಸನ್ಯಾಸಾಶ್ರಮವನ್ನು ಹಾಸ್ಯಮಾಡುವ ರೀತಿಯನ್ನು ಪರಿಶೀ ಲಿಸಿ. ನಿತ್ಯಸನ್ಯಾಸಿಗಳು-ಯಾರು ? ಏಕೆ ಅವನ್ನು ಹಾಗೆ ಕರೆಯುವನು?

೨೮ ಇಲ್ಲಿಯಲ್ಲ = ಇಲ್ಲಿಯಲ್ಲದೆ.

## ೧೨ ನೆಯ ಸಂಧಿ.

೧ ಬಧಿರನೀತಿ-ಕಿವುಡನಿಗೆ ಹೇಳುವ ನೀತಿ ಎಂದರೆ ಏನು ?

೩ ಮೀಸೆವೊಳೆಯದ ಮೊದಲೆ-ಚಿಕ್ಕ ಪ್ರಾಯದಲ್ಲಿಯೇ.

೪. ಪಿತೃದೇವಕಾರ್ಯ—ಯಜ್ಞಯಾಗಾದಿಗಳನ್ನು ಮಾಡುವುದು ದೇವ ಕಾರ್ಯ, ಶ್ರಾದ್ಧಾದಿಗಳನ್ನು ಮಾಡುವುದು ಪಿತೃಕಾರ್ಯ. ಇವುಗಳನ್ನು ಮಾಡಬೇಕಾದರೆ ಗೃಹಸ್ಥನಾಗಬೇಕು. ಗೃಹಸ್ಥಾಶ್ರಮವನ್ನು ಕೈಕೊ ಳ್ಳದೆ ಬಾಲ್ಯದಲ್ಲಿಯೇ ಸನ್ಯಾಸವನ್ನು ಅಂಗೀಕರಿಸಿ ಎಂದು ತಾತ್ಪರ್ಯ. ಪದಗೆಟ್ಟು-ಹದಗೆಟ್ಟು. ಉದಯವ-ವಿವೇಕವನ್ನು.

೫ ವಿಘಸಾಶಿಗಳ ಧರ್ಮ—ವಿಘಸ-ಯಜ್ಞಯಾಗಾದಿಗಳಲ್ಲಿ ಶೇಷವಾದ ಅನ್ನ ವನ್ನು ಆಶಿ-ಭುಜಿಸತಕ್ಕವರು ವಿಘಸಾಶಿಗಳು, ಅವರ ಧರ್ಮ-ನಡತೆ.

೧೩ ಅನುಗೂಡಿ-ಕ್ರಮದಿಂದ ಕೂಡಿ, ವಿಶ್ವಾಸಪೂರ್ವಕ. ಮಿಸುನಿ-ಚಿನ್ನ.

MANOHARA GRANTHA BHANDARA,
DHARWAR.